ಮಂಗಳವಾರ, ನವೆಂಬರ್ 7, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಹೈದರಾಬಾದ್‌ನಲ್ಲಿ ಸೋಮವಾರ ನಡೆದ 'ಭಾರತೀಯ ಜ್ಯುವೆಲ್ಲರಿ ಶಾಪಿಂಗ್ ಉತ್ಸವ'ದಲ್ಲಿ ನಟಿ ಶೃತಿ ಹಾಸನ್ ಕಾಣಿಸಿಕೊಂಡಿದ್ದು ಹೀಗೆ

625L ವರೆಗಿನ ಬೂಟ್ ಸ್ಪೇಸ್

20.32 cm ಟಚ್‌ಸ್ಕ್ರೀನ್ mediaNAV ಇವೊಲ್ಯೂಶನ್

ಎದುರು ಮತ್ತು ಬದಿಯಲ್ಲಿ ಏರ್‌ಬ್ಯಾಗ್ಸ್ - ಡ್ರೈವರ್ ಮತ್ತು ಪ್ರಯಾಣಿಕ

ಹಿಲ್ ಸ್ಟಾರ್ಟ್ ಅಸಿಸ್ಟ್ (HSA)

for a test drive, call on 1800 315 4444. select variants available in CSD. special offers for defence personnel, government, PSU and corporate employees. for bulk enquiries, contact corpsales@renault.com
for further details, connect on renault.co.in

terms and conditions apply. *₹7 999 EMI based on a loan amount of ₹4.74 lakh for a tenure of 84 months. EMI may vary based on actual loan amount and tenure. not valid for any added loan amount and tenure. finance at the sole discretion of Renault Finance. #advantages up to ₹50 000/- for Triber includes cash benefits up to ₹20 000/- on select variants, exchange benefits up to ₹20 000/- on select variants & loyalty cash benefits up to ₹10 000/- on select versions. *Triber has scored 4-star safety rating for adult occupant safety and 3-star child occupant safety in crash test conducted by Global NCAP. the same has been published by NCAP on their website. the evaluation of the tests by Global NCAP has resulted in Triber being the safest in the 7-seater mass segment in India.corporate/PSU/defense personnel/government employee/professionals benefits applicable on each model is basis eligibility of the customer and based on submission of required proof by the customer. price valid on the date of purchase. for detailed offers, visit www.renault.co.in/offers. Renault India Pvt. Ltd. reserves the right at its absolute discretion to terminate this scheme or vary, delete or add to any of these terms and conditions from time to time without notice including without limitation. offers may vary across variants and cities. model/accessories shown may not be a part of the standard fitment. the color in the image may vary slightly from the actual color of the product. the above mentioned offers & benefits are valid till 15th November 2023 and are through Renault dealership. Renault India Pvt. Ltd. shall not be liable for any loss or damage arising from your failure to comply or understand the offer details. in the event of any dispute, all matters shall be governed by all applicable laws of India and court at Gurugram shall have the exclusive jurisdiction. for detailed terms and conditions, please visit www.renault.co.in

SHOWROOMS: KARNATAKA: RENAULT Bannerghatta Road Mob: +91 85468 20204, RENAULT Mysore Road Mob: +91 8527240549 & +91 7026666922, RENAULT Palace Orchards Mob: +91 8527240717, RENAULT Silk Board Mob: +91 8527240654, RENAULT Whitefield Mob: +91 8527240685, RENAULT JP Nagar Mob: +91 8527240626 & +91 7353760555, RENAULT Kalyan Nagar Mob: +91 8527236137 & +91 8722866664, RENAULT Sarjapura Mob: +91 8448481374, +91 8746811000 & +91 8496915111, RENAULT Yelahanka Mob: +91 8527234592, +91 9071767600 & +91 8884498993, RENAULT Yeswanthpur Mob: +91 9311832962 & +91 9311832968. **TUMKUR:** RENAULT Tumkur Mob: +91 7353764337.

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಎಪಿಎಂಸಿ ಆವರಣದಲ್ಲಿ ಗೋವಿನ ಜೋಳದ ಮೇಲೆ ಮಳೆ ನೀರು ಬೀಳದಂತೆ ತಡೆಯಲು ರೈತ ಮಹಿಳೆಯರು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಸಂತೋಷಕುಮಾರ ಹಬ್ಬು (ಎಡಚಿತ್ರ) ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ಸೋಮವಾರ ಮಧ್ಯಾಹ್ನ ಸುರಿದ ಮಳೆಗೆ ಕೃಷಿ ಇಲಾಖೆ ಕಚೇರಿ ಎದುರಿನ ಹೆದ್ದಾರಿ ಜಲಾವೃತಗೊಂಡಿತ್ತು

ದಕ್ಷಿಣ ಕನ್ನಡ, ಉಡುಪಿಯಲ್ಲಿ ಉತ್ತಮ ಮಳೆ ● ಬಿಸಿಲ ಬೇಗೆಯಿಂದ ಬೇಸತ್ತ ಜನರಿಗೆ ಹಿತಾನುಭವ

ರಾಜ್ಯದ ವಿವಿಧೆಡೆ ಹಿಂಗಾರು ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ ಹಿಂಗಾರು ಚುರುಕಾಗಿದ್ದು, ಕರಾವಳಿ, ಉತ್ತರ ಮತ್ತು ದಕ್ಷಿಣ ಒಳನಾಡಿನ ಹಲವೆಡೆ ಬಿರುಸಿನ ಮಳೆಯಾಗಿದೆ. ಇದರಿಂದ ಕೃಷಿಕರ ಮೊಗದಲ್ಲಿ ಮಂದಹಾಸ ಮೂಡಿದ್ದು, ಬಿಸಿಲ ಬೇಗೆಯಿಂದ ಬೇಸತ್ತಿದ್ದ ನಾಗರಿಕರಿಗೂ ಹಿತಾನುಭವವಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ನಸುಕಿನವರೆಗೆ ಉತ್ತಮ ಮಳೆಯಾಗಿದೆ. ವಾತಾವರಣದಲ್ಲೂ ಬದಲಾವಣೆಯಾಗಿದ್ದು, ಧಗೆ ಕೊಂಚ ಕಡಿಮೆಯಾಗಿದೆ. ಸೋಮವಾರ ಇಡೀ ದಿನ ಮೋಡ ಮುಸುಕಿದ ವಾತಾವರಣ ಇತ್ತು.

ಧಾರವಾಡ ಜಿಲ್ಲೆ ಸೇರಿ ಉತ್ತರ ಕರ್ನಾಟಕ ಭಾಗದ ವಿವಿಧೆಡೆ ಸೋಮವಾರ ಗಾಳಿ ಸಹಿತ ಜೋರು ಮಳೆ ಸುರಿದಿದೆ. ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಗ್ರಾಮದಲ್ಲಿ ಸಿಡಿಲು ಬಡಿದು 30 ಕುರಿಗಳು ಸತ್ತಿವೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಬ್ಯಾಹಟ್ಟಿ, ಛಬ್ಬಿ, ಕುಸಗಲ್ಲ ಗ್ರಾಮದಲ್ಲಿ ಮತ್ತು ಗದಗ ಜಿಲ್ಲೆಯ ಗದಗ, ರೋಣದಲ್ಲಿ ಗುಡುಗು ಸಹಿತ ರಭಸದ ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಯಲ್ಲಾಪುರದಲ್ಲೂ ಭಾರಿ ಮಳೆ ಸುರಿದಿದೆ. ಕರಾವಳಿ ಭಾಗದ ಹೊನ್ನಾವರ, ಕುಮಟಾ ಭಾಗದಲ್ಲಿ ಗುಡುಗು ಸಹಿತ ಮಳೆ ಸುರಿದಿದ್ದು, ಮುಂಡಗೋಡ, ಹಳಿಯಾಳದಲ್ಲಿ ಒಣಗಿಸಲು ಇಟ್ಟ ಗೋವಿನ ಜೋಳ ಮಳೆಯಿಂದ ನೀರು ಪಾಲಾಗಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಸೋಮವಾರ ಮಳೆಯಾಗಿದ್ದು, ಸೈಕಲ್ ಸವಾರರೊಬ್ಬರು ಮಳೆಯಲ್ಲಿಯೇ ಸಾಗಿದರು –ಪ್ರಜಾವಾಣಿ ಚಿತ್ರ

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಕೆಲವಡೆ, ಹಾವೇರಿ ಜಿಲ್ಲೆಯ ಸವಣೂರು, ಶಿಗ್ಗಾವಿ, ಬೆಳಗಾವಿಯ ಸವದತ್ತಿ, ಬಾಗಲಕೋಟೆಯ ಹುನಗುಂದ ಮತ್ತು ಕಲಾದಗಿಯಲ್ಲಿ ಮಳೆಯಾಗಿದೆ. ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೊಳೆಆಲೂರದ ನೈನಾಪೂರ, ಮಾಡಲಗೇರಿ, ಹುನಗುಂಡಿ ಬೆನಹಾಳ, ಲಕ್ಷ್ಮೇಶ್ವರ ಮತ್ತು ನರಗುಂದದಲ್ಲಿ ಮಳೆಯಾಯಿತು.

ಮಧ್ಯ ಕರ್ನಾಟಕದಲ್ಲಿ ಧಾರಾಕಾರ ಮಳೆ: ದಾವಣಗೆರೆ, ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ಮುಂಜಾನೆವರೆಗೂ ಕೆಲವೆಡೆ ಧಾರಾಕಾರವಾಗಿ, ಇನ್ನೂ ಹಲವೆಡೆ ಹದ ಮಳೆ ಬಿದ್ದಿದೆ. ಚಿತ್ರದುರ್ಗದ ಹೊಳಲ್ಕೆರೆಯಲ್ಲಿ 8.68 ಸೆಂ.ಮೀ ನಷ್ಟು ಮಳೆ ದಾಖಲಾಗಿದೆ.

ಚಿತ್ರದುರ್ಗ ನಗರದಲ್ಲಿ ಸೋಮವಾರ ಮಧ್ಯಾಹ್ನದ ವೇಳೆಗೆ ಆರಂಭವಾದ ಮಳೆ, ಜೋರಾಗಿಯೇ ಆರ್ಭಟಿಸಿತು. ಹೊಳಲ್ಕೆರೆಯಲ್ಲಿ ತಗ್ಗು ಪ್ರದೇಶದ ಕೆಲವು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಯಿತು. ಚಿಕ್ಕಜಾಜೂರು ಭಾಗದಲ್ಲಿ ಬಿರುಸಿನ ಮಳೆ ಸುರಿದಿದೆ. ಹನುಮನಕಟ್ಟೆ ಗ್ರಾಮದಲ್ಲಿ ಹಳ್ಳ ತುಂಬಿ ಹರಿದಿದ್ದು, ತೋಟಗಳಲ್ಲಿ ನೀರು ನಿಂತಿರುವ ದೃಶ್ಯ ಕಂಡು ಬಂತು.

ಶಿವಮೊಗ್ಗ ಜಿಲ್ಲೆಯಾದ್ಯಂತ ಭಾನುವಾರ ಇಡೀ ರಾತ್ರಿ ವರ್ಷಧಾರೆಯಾಗಿದೆ. ಬಿರುಸಿನ ಮಳೆಯಿಂದಾಗಿ ಹಳ್ಳ–ಕೊಳ್ಳಗಳಲ್ಲಿ ನೀರಿನ ಪಸೆ ಕಂಡಿದೆ. ಮಲೆನಾಡಿನಲ್ಲಿ ಈಗ ಭತ್ತ ತೆನೆ ಒಡೆಯುವ ಹೊತ್ತು. ಇಂತಹ ಸಮಯದಲ್ಲೇ ವರಣ ಕೃಪೆ ತೋರಿರುವುದರಿಂದ ಕೃಷಿಕರ ಕಣ್ಣಲ್ಲಿ ಹೊಳಪು ಮೂಡಿದೆ. ಬಿಸಿಲಿಗೆ ಬಾಡಿದ್ದ ಅಡಿಕೆ ತೋಟಗಳಿಗೆ ಜೀವ ಬಂದಂತಾಗಿದೆ.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ. ಹರಿಹರದ ನೀಲಕಂಠ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣಕ್ಕೆ ನೀರು ನುಗ್ಗಿತ್ತು.

ತುಮಕೂರಿನಲ್ಲಿ ಸಂಜೆ ಸ್ವಲ್ಪ ಹೊತ್ತು ಸಾಧಾರಣವಾಗಿ ಮಳೆ ಸುರಿಯಿತು. ನಗರದ ಅಂತರಸನಹಳ್ಳಿ ಕೆಳ ಸೇತುವೆ ಮಳೆ ನೀರಿನಿಂದ ಆವೃತವಾಗಿತ್ತು. ರಸ್ತೆ ದಾಟಲು ವಾಹನ ಸವಾರರು ಪರದಾಡಿದರು. ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರಿನಲ್ಲಿ ಉತ್ತಮ ಮಳೆಯಾಗಿದೆ.

ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ.

ಕಲ್ಯಾಣ ಕರ್ನಾಟಕದಲ್ಲಿ ಸಾಧಾರಣ ಮಳೆ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ರಾಯಚೂರು, ಯಾದಗಿರಿ ಜಿಲ್ಲೆಯ ಕೆಲವೆಡೆ ಸೋಮವಾರ ಕೆಲ ಕಾಲ ಸಾಧಾರಣ ಮಳೆಯಾಗಿದೆ.

ಚಿತ್ತಾಪುರ ತಾಲ್ಲೂಕಿನ ಅಲ್ಲೂರ್ (ಬಿ), ಅಲ್ಲೂರ್(ಕೆ) ಗ್ರಾಮಗಳಲ್ಲಿ ಸುಮಾರು ಒಂದು ಗಂಟೆ ಕಾಲ ಮಳೆ ಸುರಿಯಿತು. ವಾಡಿ ಸುತ್ತಲಿನ ಪ್ರದೇಶದಲ್ಲೂ ಉತ್ತಮವಾಗಿ ಮಳೆಯಾಗಿದೆ. ಇದರಿಂದಾಗಿ ತೊಗರಿ, ಕಡಲೆ, ಜೋಳ ಬೆಳೆಗಳಿಗೆ ಇದರಿಂದ ಅನುಕೂಲವಾಯಿತು.

ದಂಪತಿಗೆ ಗಾಯ

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಎಚ್.ಕುನ್ನೂರು ಗ್ರಾಮದಲ್ಲಿ ಮನೆಯೊಂದರ ಮೇಲೆ ಪಕ್ಕದ ಮನೆಯ ಗೋಡೆ ಉರುಳಿದೆ. ಇದರಿಂದ ಸಿಮೆಂಟ್ ಶೀಟ್ ಪುಡಿಯಾಗಿದ್ದು, ಟಿ.ವಿ ಹಾಗೂ ದವಸ–ಧಾನ್ಯಗಳು ಹಾಳಾಗಿವೆ. ತಿಮ್ಮಪ್ಪ ಹಾಗೂ ಅವರ ಪತ್ನಿ ಗಾಯಗೊಂಡಿದ್ದಾರೆ. ಕುನ್ನೂರು ಗ್ರಾಮದ ಮನೆಯೊಂದರ ಮೇಲೆ ಮರ ಬಿದ್ದು ಹಾನಿಯಾಗಿದೆ.

ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಆರು ಜಿಲ್ಲೆಗಳಲ್ಲಿ ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಬೆಂಗಳೂರಿನಲ್ಲಿ ಮಂಗಳವಾರ ಹಾಗೂ ಬುಧವಾರ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಗುಡುಗಿನ ಜೊತೆಗೆ ಮೇಲ್ಮೈ ಗಾಳಿ ಬಲವಾಗಿ ಬೀಸುವ ಸಾಧ್ಯತೆ ಹೆಚ್ಚಿದೆ ಎಂದು ಮುನ್ಸೂಚನೆ ನೀಡಿದೆ. ವಿಜಯಪುರ ಜಿಲ್ಲೆಯಲ್ಲಿ ಸೋಮವಾರ ಕನಿಷ್ಠ ಉಷ್ಣಾಂಶ 18 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆಯ ಅವಧಿಯಲ್ಲಿ ಧರ್ಮಸ್ಥಳ, ಸೋಮವಾರಪೇಟೆ, ಹಣಸೂರು, ಸಕಲೇಶಪುರದಲ್ಲಿ 4 ಸೆಂ.ಮೀ, ಮಂಗಳೂರು, ಬೆಂಗಳೂರಿನ ಎಚ್‌ಎಲ್ ವಿಮಾನ ನಿಲ್ದಾಣದ ಸುತ್ತಮುತ್ತ, ರಾಮನಗರ, ಬಂಡೀಪುರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಮಡಿಕೇರಿಯಲ್ಲಿ ತಲಾ 3, ಪುತ್ತೂರು, ಬೆಳ್ತಂಗಡಿ, ಟಿ.ನರಸೀಪುರ, ಕಳಸ, ಭಾಗಮಂಡಲ, ಸರಗೂರು, ಕುಣಿಗಲ್‌ನಲ್ಲಿ ತಲಾ 2 ಸೆಂ.ಮೀ ಮಳೆ ಸುರಿದಿದೆ.

ಎಲ್ಲೆಲ್ಲಿ ಎಷ್ಟು ಮಳೆ

- **ದಕ್ಷಿಣ ಕನ್ನಡ ಜಿಲ್ಲೆ:** ಬಂಟ್ವಾಳ ತಾಲ್ಲೂಕಿನ ಚೆನ್ನೈತೋಡಿಯಲ್ಲಿ 15 ಸೆಂ.ಮೀ., ಪಿಲಾತಬೆಟ್ಟು 13.7, ಕಾವಳಪಡೂರು 13.6, ಕುಕ್ಕಿಪಾಡಿ 12.3, ಬೆಳ್ತಂಗಡಿ ತಾಲ್ಲೂಕಿನ ಕಳಿಯ 14.3, ಲಾಯಿಲಾ 13.4, ಬೆಳಾಲು 13.1 ಅಳದಂಗಡಿ 11.3, ಮಡಂತ್ಯಾರು 10.9 ಸೆಂ.ಮೀ
- **ಉಡುಪಿ ಜಿಲ್ಲೆ:** ಕಾಂತಾವರ 14.7 ಸೆಂ.ಮೀ, ರೆಂಜಾಳ 13.2, ಹಾವಂಜೆ 10.4, ಸಾಣೂರು 10.3 ಹಾಗೂ ಹಟ್ಟಿಯಂಗಡಿ 10.2 ಸೆಂ.ಮೀ ಮಳೆಯಾಗಿದೆ.

ಸುದ್ದಿ 2 ನಿಮಿಷ

ಚಿಟ್‌ಫಂಡ್‌ಗೆ ಗ್ಯಾರಂಟಿ ಹಣದ ಹೂಡಿಕೆ ಇಲ್ಲ: ಸಿ.ಎಂ

ಬೆಂಗಳೂರು: 'ಗೃಹಲಕ್ಷ್ಮಿ' ಯೋಜನೆಯಡಿ ನೀಡುವ ₹2,000 ಅನ್ನು ಮಹಿಳೆಯರು ಅವರಿಗೆ ಇಷ್ಟ ಬಂದಂತೆ ಬಳಸಿಕೊಳ್ಳಬಹುದು. ಅದನ್ನು ಚಿಟ್‌ಫಂಡ್ ಯೋಜನೆಗೆ ಹೂಡಿಕೆ ಮಾಡಿಸುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ ಅಡಿ ನೀಡುವ ಮೊತ್ತವನ್ನು ಚಿಟ್‌ಫಂಡ್‌ಗೆ ಹೂಡಿಕೆ ಮಾಡುವಂತೆ ಸೂಚಿಸುವುದಿಲ್ಲ ಎಂದರು.

ಎಂ.ಬಿ.ಪಾಟೀಲ ಸಮರ್ಥನೆ: ಸಿದ್ದರಾಮಯ್ಯ ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ 'ಎಕ್ಸ್' ಮಾಡಿರುವ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಎಂಎಸ್‌ಐಎಲ್ ಚಿಟ್‌ಫಂಡ್ ಅನ್ನು ಭಾರತದ ಪ್ರಮುಖ ಚಿಟ್‌ಫಂಡ್ ಮಾಡುವ ಮೂಲಕ ಈ ವಲಯವನ್ನು ಉನ್ನತ ಸ್ಥಾನಕ್ಕೆ ಒಯ್ಯಲು ಸಾಧ್ಯ. ಕರ್ನಾಟಕ ಮಹತ್ತರ ಪ್ರಯಾಣ ಆರಂಭಿಸುತ್ತಿದೆ' ಎಂದಿದ್ದಾರೆ.

'ಎಂಎಸ್‌ಐಎಲ್ ವಿಶ್ವಾಸಾರ್ಹ ಬ್ರ್ಯಾಂಡ್. ಸುಭದ್ರ, ಸುರಕ್ಷಿತ ಮತ್ತು ಪ್ರಗತಿ ವರ್ಧಕ. ಕೆಲವೇ ವರ್ಷಗಳಲ್ಲಿ ₹300 ಕೋಟಿಯಿಂದ ₹10,000 ಕೋಟಿ ಗುರಿ ತಲುಪಬಹುದು' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಸನದಲ್ಲಿ ಜೆಡಿಎಸ್ ಶಾಸಕರ ಸಭೆ ಇಂದು–ನಾಳೆ

ಹಾಸನ: ಜೆಡಿಎಸ್ ಪಕ್ಷದಲ್ಲಿ ಒಗ್ಗಟ್ಟು ಪ್ರದರ್ಶಿಸಲು ಮುಂದಾಗಿರುವ ವರಿಷ್ಠರು, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ 19 ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಪ್ರಮುಖ ನಾಯಕರ ಜೊತೆಗೆ ಮಂಗಳವಾರ ಮತ್ತು ಬುಧವಾರ (ನ.7 ಹಾಗೂ 8) ನಗರದಲ್ಲಿ ಸಭೆ ಆಯೋಜಿಸಿದ್ದಾರೆ.

ನಗರದಲ್ಲಿ ಹಾಸನಾಂಬ ದರ್ಶನ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, 'ಪಕ್ಷದ ಎಲ್ಲ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರು, ಹಿರಿಯ ಮುಖಂಡರ ಸಭೆಯನ್ನು ಕರೆಯಲಾಗಿದೆ. ಮುಂದೆ ಯಾವ ರೀತಿ ಕೆಲಸ ಮಾಡಬೇಕು. ಚುನಾವಣೆ ಹೇಗೆ ಎದುರಿಸಬೇಕು ಎಂಬುದರ ಬಗ್ಗೆ ಚರ್ಚೆ ನಡೆಯಲಿದೆ' ಎಂದರು.

'ಉತ್ತರ ಕರ್ನಾಟಕದ ಶಾಸಕರೂ ಹಾಸನಾಂಬ ದರ್ಶನ ಪಡೆಯುವ ಇಚ್ಛೆ ವ್ಯಕ್ತಪಡಿಸಿದ್ದರು. ಹಾಗಾಗಿ ಎಲ್ಲರಿಗೂ ದರ್ಶನದ ವ್ಯವಸ್ಥೆ ಮಾಡಲಾಗಿದೆ. ಎಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ, ರಾಜ್ಯದಲ್ಲಿ ಒಳ್ಳೆಯ ಮಳೆ– ಬೆಳೆ ಆಗಲಿ ಎಂದು ಶಾಸಕರು ಹಾಸನಾಂಬೆ ದೇವಿಯಲ್ಲಿ ಪ್ರಾರ್ಥಿಸುತ್ತೇವೆ' ಎಂದರು.

'ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದಾದರೆ ನಮ್ಮ ಬೆಂಬಲವಿದೆ ಎಂದು ಕುಮಾರಸ್ವಾಮಿ ಹೇಳಿಕೆ ನೀಡಿದ್ದಾರೆ. ತಪ್ಪೇನಿಲ್ಲ. ಅದನ್ನು ನೀವು ಹೇಗೆ ಬೇಕಾದರೂ ಅರ್ಥೈಸಬಹುದು. ಜೆಡಿಎಸ್‌ನ ಶಾಸಕರು, ಕಾಂಗ್ರೆಸ್ ಸಂಪರ್ಕದಲ್ಲಿದ್ದಾರೆ ಎಂದು ಆ ಪಕ್ಷದ ಮುಖಂಡರು ನಿತ್ಯವೂ ಹೇಳುತ್ತಿದ್ದಾರೆ. ಮುಖ್ಯಮಂತ್ರಿಯಾಗುವುದಕ್ಕಾಗಿ ನಮ್ಮ ಪಕ್ಷ ಒಡೆಯಬೇಡಿ. ಆ ಕಾಲ ಸನ್ನಿಹಿತವಾದಾಗ ಬೆಂಬಲ ನೀಡುತ್ತೇವೆ ಎಂದಿದ್ದಾರೆ. ಊಹಾಪೋಹಗಳಿಗೆ ತೆರೆ ಎಳೆಯಲು ಹಾಗೆ ಹೇಳಿದ್ದಾರೆ' ಎಂದರು.

'ಪಕ್ಷದ 19 ಶಾಸಕರು ಇಲ್ಲಿಯೇ ಸಭೆ ಮಾಡಲಿದ್ದೇವೆ. ಕಾಂಗ್ರೆಸ್‌ನ ಕೆಲ ನಾಯಕರಿಗೆ ಹಾಸನದಿಂದಲೇ ಸ್ಪಷ್ಟ ಸಂದೇಶ ರವಾನೆಯಾಗಲಿದೆ' ಎಂದು ಶಾಸಕ ಎ.ಮಂಜು ಹೇಳಿದರು.

ಆನ್‌ಲೈನ್ ವಂಚನೆ: ₹72.86 ಲಕ್ಷ ಕಳೆದುಕೊಂಡ ನಿವೃತ್ತ ಪ್ರಾಂಶುಪಾಲೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಕಾಲೇಜೊಂದರ ನಿವೃತ್ತ ಪ್ರಾಂಶುಪಾಲರಾಗಿರುವ ಮಹಿಳೆಯೊಬ್ಬರು ಸೇವಾ ನಿವೃತ್ತಿಯಿಂದ ಬಂದ ₹72.87 ಲಕ್ಷವನ್ನು ಕಳೆದುಕೊಂಡಿದ್ದು, ಈ ಬಗ್ಗೆ ಇಲ್ಲಿನ ಸೆನ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಲಾಟರಿಯ ಹಣ ಬರಲಿದೆ' ಎಂಬ ಆನ್‌ಲೈನ್ ವಂಚಕರ ಬಣ್ಣದ ಮಾತುಗಳನ್ನು ನಂಬಿದ ಮಹಿಳೆ, ತಮ್ಮ ಬ್ಯಾಂಕ್ ಖಾತೆಗಳಿಗೆ ಅಪರಿಚಿತರು ಕಳುಹಿಸಿದ್ದ ಮೊಬೈಲ್ ಸಂಖ್ಯೆಗಳನ್ನು ಜೋಡಿಸಿದ್ದು, ಅದರಿಂದಾಗಿಯೇ ಅವರು ಆನ್‌ಲೈನ್ ವಂಚನೆಗೆ ಒಳಗಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ವಾಟ್ಸ್ ಆ್ಯಪ್ ಮೂಲಕ ಅಪರಿಚಿತ ವ್ಯಕ್ತಿಗಳು ತಮ್ಮನ್ನು ಸತ್ಯಂ ಪಾಂಡೆ ಮತ್ತು ಮಿತ್ತಲ್ ಎಂಬ ಹೆಸರಿನಿಂದ ಪರಿಚಯಿಸಿಕೊಂಡು ನಿರಂತರ ಸಂಪರ್ಕದಲ್ಲಿದ್ದರು. ಅತ್ಯಂತ ಆತ್ಮೀಯವಾಗಿ ಮಾತನಾಡಿಕೊಂಡಿದ್ದರು. 'ನಿಮಗೆ ಲಾಟರಿ ಹಣ ಬಂದಿದೆ. ಅದನ್ನು ನಿಮ್ಮ ಖಾತೆಗೆ ಜಮಾ ಮಾಡುತ್ತೇವೆ' ಎಂದು ಅವರು ನಂಬಿಸಿದ್ದರು. ಅವರ ಮಾತುಗಳನ್ನು ನಂಬಿದ್ದ ನಾನು, ಅವರು ಕಳುಹಿಸಿದ್ದ ಮೊಬೈಲ್ ಸಂಖ್ಯೆಗಳನ್ನು ನನ್ನ ಎರಡು ಬ್ಯಾಂಕ್ ಖಾತೆಗಳಿಗೆ ಜೋಡಿಸಿದ್ದೆ. ಇದಾದ ನಂತರ ನನ್ನ ಸೇವಾ ನಿವೃತ್ತಿಯಿಂದ ಬರಬೇಕಾದ ₹50,55,118 ಮೊತ್ತವು ಅ.26ರಂದು ಒಂದು ಬ್ಯಾಂಕ್ ಖಾತೆಗೆ ಹಾಗೂ ₹22,31,798 ಮೊತ್ತವು ಇನ್ನೊಂದು ಬ್ಯಾಂಕ್ ಅ.31ರಂದು ಖಾತೆಗೆ ಜಮೆ ಆಗಿತ್ತು. ಈ ಎರಡೂ ಬ್ಯಾಂಕ್ ಖಾತೆಗಳಲ್ಲಿದ್ದ ಒಟ್ಟು ₹72,86,916 ಅನ್ನು ಈ ಅಪರಿಚಿತ ವ್ಯಕ್ತಿಗಳು ಸೇರಿ ನನಗೆ ಗಮನಕ್ಕೆ ತಾರದೆಯೇ ಅನಧಿಕೃತವಾಗಿ ಬೇರೆ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾರೆ' ಎಂದು ವಂಚನೆಗೆ ಒಳಗಾದ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕಲಹ: ಮಗುವಿನ ಜತೆ ಟ್ಯಾಂಕ್ ಏರಿದ ತಂದೆ

ನಂಜನಗೂಡು: ಎರಡು ವರ್ಷದ ಗಂಡು ಮಗುವಿನೊಂದಿಗೆ ಕುಡಿಯುವ ನೀರಿನ ಟ್ಯಾಂಕ್ ಹತ್ತಿ ಸೋಮವಾರ ಆತ್ಮಹತ್ಯೆಗೆ ಯತ್ನಿಸಿದ ತಾಲ್ಲೂಕಿನ ಕಸುವಿನಹಳ್ಳಿ ನಿವಾಸಿ ಕೃಷ್ಣಮೂರ್ತಿ (40) ಎಂಬುವರನ್ನು ಪೊಲೀಸರು ಸುರಕ್ಷಿತವಾಗಿ ಕೆಳಕ್ಕೆ ಇಳಿಸಿದರು.

ಪತ್ನಿಯೊಂದಿಗೆ ನಡೆದ ಕಲಹದಿಂದ ಬೇಸತ್ತ ಅವರು ಟ್ಯಾಂಕ್ ಹತ್ತಿ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಒಡ್ಡಿದ್ದರು. ಕೆಳಗೆ ಇಳಿಯುವಂತೆ ಗ್ರಾಮಸ್ಥರು ಕೋರಿದರೂ ಸ್ಪಂದಿಸಲಿಲ್ಲ. ಮಾಹಿತಿ ಪಡೆದ ಬಳಿಕ ಸ್ಥಳಕ್ಕೆ ಧಾವಿಸಿದ ತುರ್ತು ಸಹಾಯವಾಣಿ 112ರ ಸಿಬ್ಬಂದಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ ಬಳಿಕ ಅವರು ಮಗುವಿನೊಂದಿಗೆ ಸುರಕ್ಷಿತವಾಗಿ ಕೆಳಗೆ ಇಳಿದರು. ನಂತರ ಅವರನ್ನು ವಶಕ್ಕೆ ಪಡೆದ ನಂಜನಗೂಡು ಗ್ರಾಮಾಂತರ ಪೊಲೀಸರು ವಿಚಾರಣೆ ನಡೆಸಿದ್ದಾರೆ.

ಕಸುವಿನಹಳ್ಳಿ ಗ್ರಾಮದ ಕೃಷ್ಣಮೂರ್ತಿ ಮಗುವಿನೊಂದಿಗೆ ಕುಡಿಯುವ ನೀರಿನ ಟ್ಯಾಂಕ್ ಮೇಲೇರುತ್ತಿರುವುದು

'ವಿಪಕ್ಷಗಳ ಹಾಲಿ–ಮಾಜಿ ಶಾಸಕರ ಸೇರ್ಪಡೆ'

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ● ಜೆಡಿಎಸ್ ನಾಯಕ ಎಚ್. ಡಿ. ಕುಮಾರಸ್ವಾಮಿ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಮತ್ತು ಜೆಡಿಎಸ್‌ನಿಂದ ಕೆಲ ಹಾಲಿ ಮತ್ತು ಮಾಜಿ ಶಾಸಕರು ಕಾಂಗ್ರೆಸ್‌ಗೆ ಬರಲಿದ್ದು, ಅವರನ್ನು ಸೇರಿಸಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್ 'ಆಪರೇಷನ್ ಹಸ್ತ'ದಲ್ಲಿ ತೊಡಗಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಆಪರೇಷನ್ ಹಸ್ತ ಮಾಡುವ ಪ್ರಶ್ನೆ ಇಲ್ಲ. ನಮ್ಮ ಪಕ್ಷದ ಸಿದ್ಧಾಂತ ಮತ್ತು ನಾಯಕತ್ವವನ್ನು ಬೆಂಬಲಿಸಿ ಬರುವವರನ್ನು ಸೇರಿಕೊಳ್ಳುತ್ತೇವೆ' ಎಂದರು.

ಮೊನ್ನೆ ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಸಭೆಯನ್ನು ನಡೆಸಲಾಗಿತ್ತು. ಹೆಚ್ಚು ಸ್ಥಾನಗಳನ್ನು ಗೆಲ್ಲುವುದಕ್ಕಾಗಿ ಪ್ರತಿ ಜಿಲ್ಲೆಗೂ ಓರ್ವ ಮಂತ್ರಿಯನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಬರಗಾಲ ಪರಿಸ್ಥಿತಿಯ ನಿರ್ವಹಣೆ ಜವಾಬ್ದಾರಿಯನ್ನೂ ಅವರಿಗೆ ನೀಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಲೋಕಸಭಾ ಚುನಾವಣೆಗೂ ಮುಂಚೆ ಅಥವಾ ನಂತರ ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ಪ್ರತ್ರಿಯಿಸಿದ ಅವರು, ಇಂತಹ ವಿಚಾರಗಳನ್ನು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ. ಇವರಿಗೆ ಮಾತನಾಡುವ ಹಕ್ಕಿಲ್ಲ. ಇವರಿಗೆ ಇನ್ನೂ ವಿರೋಧಪಕ್ಷದ ನಾಯಕನ ಆಯ್ಕೆ ಮಾಡಲು ಸಾಧ್ಯವಾಗಿಲ್ಲ ಎಂದು ಲೇವಡಿ ಮಾಡಿದರು.

'ಎಲ್ಲರನ್ನೂ ಕಳಿಸುತ್ತೇನೆ, ಕರೆದುಕೊಳ್ಳಿ'

ಕುಮಾರಸ್ವಾಮಿ

ಚನ್ನಪಟ್ಟಣ (ರಾಮನಗರ): 'ಪ್ರತಿ ದಿನವೂ ನೀವು ಬನ್ನಿ. ನೀವು ಬನ್ನಿ ಎಂದು ನಮ್ಮ ಶಾಸಕರ ಮನೆ ಮುಂದೆ ಯಾಕೆ ಹೋಗುತ್ತೀರಿ. ಒಳ್ಳೆಯ ಕೆಲಸ ಮಾಡುವುದಾದರೆ, ನಮ್ಮ ಎಲ್ಲ ಶಾಸಕರನ್ನೂ ನಾನೇ ಕಳಿಸುತ್ತೇನೆ. ಕರೆದುಕೊಂಡು ಹೋಗಿ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಮುಖ್ಯಮಂತ್ರಿ ಉಪಾಹಾರ ಸಭೆಯಲ್ಲಿ ಜೆಡಿಎಸ್-ಬಿಜೆಪಿ ಶಾಸಕರನ್ನು ಕಾಂಗ್ರೆಸ್‌ಗೆ ಕರೆ ತರುವ ಬಗ್ಗೆ ಚರ್ಚೆಯಾಗಿದೆ. ಬೇರೆ ಪಕ್ಷಗಳಿಂದ ಕನಿಷ್ಠ 50 ಮಂದಿಯನ್ನಾದರೂ ಕಾಂಗ್ರೆಸ್ ಪಕ್ಷಕ್ಕೆ ಕರೆ ತರಬೇಕು ಎಂದು ತಮ್ಮ ಪಕ್ಷದ ಶಾಸಕರಿಗೆ ಹೇಳಿದ್ದಾರೆ ಎಂದರು.

ತಮ್ಮ ಹೇಳಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿರುವ ಕುರಿತು ನಗರದಲ್ಲಿ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದಾದರೆ ಅವರಿಗೆ ನಮ್ಮ ಬೆಂಬಲ ಎಂಬ ಹೇಳಿಕೆಯನ್ನು ನಾನು ಕೂಡ ವ್ಯಂಗ್ಯವಾಗಿಯೇ ಹೇಳಿದ್ದೇನೆ' ಎಂದರು.

ನಾಡಿನ ಜನರ ಬಗ್ಗೆ ಚರ್ಚೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ಮಾಡುತ್ತಿಲ್ಲ. ಲೋಕಸಭೆ ಚುನಾವಣೆ ಗೆಲ್ಲಲು ಸಭೆ ಮಾಡುತ್ತಿದ್ದಾರೆ. ಅವರಿಗೆ ರೈತರ ಸಮಸ್ಯೆ ಬೇಕಿಲ್ಲ ಎಂದು ಕಿಡಿಕಾರಿದರು.

'ವಿಳಂಬ ಮಾಡಿ ನಾವು ಎಡವಿದ್ದೇವೆ'

ನಾರಾಯಣ ಸ್ವಾಮಿ

ಬೆಂಗಳೂರು: 'ವಿಧಾನಮಂಡಲದ ಎರಡೂ ಸದನಗಳ ವಿರೋಧ ಪಕ್ಷದ ನಾಯಕರ ಆಯ್ಕೆಯಲ್ಲಿ ವಿಳಂಬ ಧೋರಣೆ ಅನುಸರಿಸುವ ಮೂಲಕ ನಾವು ಎಡವಿದ್ದೇವೆ. ಇದರಿಂದ ಬಿಜೆಪಿಗೆ ಹಿನ್ನಡೆಯಾಗಲಿದೆ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ಬಳಿಕ ವರಿಷ್ಠರು ಈ ವಿಷಯದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದ್ದಾರೆ' ಎಂದರು.

ಎಲ್ಲ ರಾಜಕೀಯ ಪಕ್ಷಗಳಲ್ಲೂ ಹೈಕಮಾಂಡ್ ಇರುತ್ತದೆ. ಬಿಜೆಪಿಯಲ್ಲೂ ಅದೇ ರೀತಿ ಹೈಕಮಾಂಡ್ ಅಂತಿಮ ತೀರ್ಮಾನಗಳನ್ನು ಕೈಗೊಳ್ಳುತ್ತದೆ. ಜೆಡಿಎಸ್ ಜತೆಗಿನ ಮೈತ್ರಿ ಕುರಿತು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಂತದಲ್ಲೇ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

'ಪಕ್ಷದ ತೀರ್ಮಾನ ಅಂತಿಮ'

'ಮುಖ್ಯಮಂತ್ರಿ ಅವಧಿ ಕುರಿತು ಸಿದ್ದರಾಮಯ್ಯ ಅವರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅವರು ಮಾತನಾಡಿದ ಬಳಿಕ ಉಳಿದವರು ಹೇಳಲು ಏನೂ ಇಲ್ಲ. ಈ ವಿಚಾರದಲ್ಲಿ ಪಕ್ಷದ ತೀರ್ಮಾನವೇ ನನ್ನ ತೀರ್ಮಾನ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ನಮ್ಮ ಸರ್ಕಾರ ಸುಸೂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಸಿ.ಎಂ ಅವಧಿ ಕುರಿತು ಬೇರೆಯವರು ಹೇಳುವ ಅಗತ್ಯವಿಲ್ಲ' ಎಂದರು.

ಒಳಮೀಸಲಾತಿಗೆ ಆಗ್ರಹಿಸಿ ಮಾದಿಗ ಸಮುದಾಯದ ಪ್ರಮುಖರ ಸಭೆ

ಶಾಸಕರ ಮನೆಗೇ ಮುತ್ತಿಗೆ ಹಾಕಿ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ ಮೀಸಲಾತಿ ಕಲ್ಪಿಸಲು ರಚಿಸಲಾಗಿದ್ದ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿ ಜಾರಿಗೆ ಒತ್ತಾಯಿಸಿ ತೀವ್ರ ಸ್ವರೂಪದ ಹೋರಾಟ ನಡೆಸಬೇಕಿದೆ' ಎಂದು ತಮ್ಮ ಸಮುದಾಯದ (ಮಾದಿಗ) ಮುಖಂಡರಿಗೆ ಕರೆ ನೀಡಿದ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, 'ನಿಮ್ಮ ಕ್ಷೇತ್ರಗಳ ಶಾಸಕರ ಮನೆಗಳಿಗೆ ಮುತ್ತಿಗೆ ಹಾಕಬೇಕು. ಕಾರ್ಯಕ್ರಮಗಳನ್ನು ಮಾಡಲು ಅವರಿಗೆ ಬಿಡಬಾರದು. ಸಚಿವನಾಗಿ ಈ ಮಾತು ಹೇಳುತ್ತಿದ್ದೇನೆ. ಹೀಗೆ ಹೇಳುವ ಸಂದರ್ಭ ಬಂದಿದೆ' ಎಂದರು.

ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆದು, ವಿಧಾನಮಂಡಲ ಅಧಿವೇಶನದಲ್ಲಿ ನ್ಯಾ. ಸದಾಶಿವ ಆಯೋಗದ ವರದಿ ಮಂಡಿಸಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹೇರಲು ಕರ್ನಾಟಕ ಆದಿಜಾಂಭವ ಸಾಂಸ್ಕೃತಿಕ ಸಮಿತಿಯ ನೇತೃತ್ವದಲ್ಲಿ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಸೋಮವಾರ ನಡೆದ ಸಮುದಾಯದ ಪ್ರಮುಖರ ಸಭೆಯಲ್ಲಿ ಅವರು ಮಾತನಾಡಿದರು.

ಮಾದಿಗ ಸಮುದಾಯ ಮುಖಂಡರ ಸಭೆಯಲ್ಲಿ ಎಡದಿಂದ ವಿಧಾನ ಪರಿಷತ್ತಿನ ಸದಸ್ಯ ಡಾ. ಡಿ. ತಿಮ್ಮಯ್ಯ, ಮಾಜಿ ಸಚಿವ ಎಚ್. ಆಂಜನೇಯ, ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಆರ್. ಧರ್ಮಸೇನ, ಶಾಸಕ ಕೆ.ಎಸ್. ಬಸವಂತಪ್ಪ ಇದ್ದರು – ಪ್ರಜಾವಾಣಿ ಚಿತ್ರ

'ಇನ್ನು 15 ದಿನಗಳ ಒಳಗೆ ಅಂದರೆ ಇದೇ 20ರ ಒಳಗೆ ನಿಮ್ಮ ಕ್ಷೇತ್ರದ ಶಾಸಕರ ಮನೆಗೆ 100 ಜನ, ಜಿಲ್ಲಾ ಉಸ್ತುವಾರಿ ಸಚಿವರ ಮನೆಗೆ 1,000 ಜನ ತೆರಳಿ ಮನವಿ ಕೊಡಿ. ಡಿ. 4ರಿಂದ ಅಧಿವೇಶನ ಆರಂಭವಾಗಲಿದೆ. ಅದಕ್ಕೂ ಮೊದಲು ಈ ಕೆಲಸ ಆಗಬೇಕು. ಆಗ ನಿಮ್ಮ ಮನೆ ಬಾಗಿಲಿಗೆ ಬರುತ್ತಾರೆ. ಯಾರ ಹಕ್ಕನ್ನೂ ನಾವು ಕಸಿದುಕೊಳ್ಳುವುದಿಲ್ಲ. ನಮ್ಮ ಹಕ್ಕನ್ನು ಯಾರಿಂದಲೂ ತಡೆಯಲೂ ಆಗುವುದಿಲ್ಲ' ಎಂದರು.

'ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸುವ ಭರವಸೆಯನ್ನು ಚುನಾವಣಾ ಪ್ರಣಾಳಿಕೆ ಮತ್ತು ಚಿತ್ರದುರ್ಗದಲ್ಲಿ ನಡೆದ ಐಕ್ಯತಾ ಸಮಾವೇಶದಲ್ಲಿ ಪಕ್ಷ ನೀಡಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಗೃಹ ಸಚಿವ ಜಿ. ಪರಮೇಶ್ವರ ಸೇರಿದಂತೆ ಎಲ್ಲರೂ ಅದರ ಪರವಾಗಿದ್ದಾರೆ. ಸಮುದಾಯದ ಮುಖಂಡರು ನಿಯೋಗದಲ್ಲಿ ತೆರಳಿ, ಅವರನ್ನು ಭೇಟಿ ಮಾಡಿ ನಮ್ಮ ಕೋಟಾವನ್ನು ನಮಗೆ ಕೊಡುವಂತೆ ಮನವಿ ಮಾಡೋಣ' ಎಂದೂ ಹೇಳಿದರು.

'ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆ, ನಿಗಮ ಮಂಡಳಿಗಳಿಗೆ ನೇಮಕ, ನಾಮನಿರ್ದೇಶನಗಳಲ್ಲಿಯೂ ಸಮುದಾಯದವರಿಗೆ ಪ್ರಾತಿನಿಧ್ಯ ನೀಡಬೇಕು. ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಜಾರಿಗೊಳಿಸಿ, ಹಿಂದುಳಿದ, ಅತಿ ಹಿಂದುಳಿದ ವರ್ಗಗಳಿಗೆ ನ್ಯಾಯ ಕೊಡುವ ಕೆಲಸವೂ ಆಗಬೇಕು' ಎಂದೂ ಆಗ್ರಹಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾಜಿ ಸಚಿವ ಎಚ್. ಆಂಜನೇಯ, 'ನಮಗೆ ಅನ್ಯಾಯ ಆಗಿದೆ. ನಾವೆಲ್ಲರೂ ಬೀದಿಗಿಳಿದು ಹೋರಾಟ ಮಾಡಬೇಕು. ಸರ್ಕಾರ ಸದಾಶಿವ ಆಯೋಗದ ವರದಿಯನ್ನು ಜಾರಿ ಮಾಡುವ ಮೂಲಕ ಆರನೇ 'ಗ್ಯಾರಂಟಿ'ಯಾಗಿ ನಮಗೆ ಒಳ ಮೀಸಲಾತಿ ಕೊಡಲಿ' ಎಂದು ಮನವಿ ಮಾಡಿದರು.

'ಕಾಂತರಾಜು ಸಮಿತಿಯ ವರದಿಯಲ್ಲಿ ಮಾದಿಗ ಸಮುದಾಯದ ಸ್ಥಿತಿಗತಿ ಬಗ್ಗೆಯೂ ಇದೆ. ಸರ್ಕಾರ ಈ ವರದಿಯನ್ನು ತಕ್ಷಣ ಸ್ವೀಕರಿಸಬೇಕು. ಕುವೆಂಪು ವಿಶ್ವವಿದ್ಯಾಲಯದ ಖಾಲಿ ಇರುವ ಕುಲಪತಿ ಹುದ್ದೆಗೆ ಸಮುದಾಯದ ಶಿವಾನಂದ ಕೆಳಗಿನಮನೆ ಅವರನ್ನು ನೇಮಿಸಬೇಕು. ನಿಗಮ ಮಂಡಳಿ, ಅಕಾಡೆಮಿಗಳಲ್ಲೂ ಸಮುದಾಯಕ್ಕೆ ಸ್ಥಾನ ನೀಡಬೇಕು' ಎಂದು ಆಗ್ರಹಿಸಿದರು.

ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್. ಚಂದ್ರಪ್ಪ, ಶಾಸಕರಾದ ರೂಪಾ ಶಶಿಧರ್, ಕೆಪಿಸಿಸಿ ಅಸಂಘಟಿತ ಕಾರ್ಮಿಕ ವಿಭಾಗದ ಅಧ್ಯಕ್ಷ ಜಿ.ಎಸ್. ಮಂಜುನಾಥ್, ಹೋರಾಟಗಾರ ಅಂಬಣ್ಣ ಅರೋಲಿಕರ್, ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಮತ್ತು ಅಂಬೇಡ್ಕರ್ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಬಿ.ಪಿ. ತಿಪ್ಪೇಸ್ವಾಮಿ ಇದ್ದರು.

> **ನಾನು ಈಗ ಸಚಿವನಾಗಿದ್ದೇನೆ. ನಾನಿದ್ದ ಮೇಲೆ ಬೇರೆಯವರ ಆಟ ನಡೆಯಲ್ಲ. ಎಲ್ಲದಕ್ಕೂ ನಾನು ತಯಾರಾಗಿದ್ದೇನೆ. ಸಮುದಾಯ ಒಗ್ಗಟ್ಟಿನಿಂದ ಹೋರಾಟ ಮಾಡಬೇಕು**
> **ಕೆ.ಎಚ್. ಮುನಿಯಪ್ಪ,** ಆಹಾರ ಸಚಿವ

> **ಸದಾಶಿವ ಆಯೋಗದ ವರದಿಗೆ ಸಂಪುಟದಲ್ಲಿ ಯಾವಾಗ ಒಪ್ಪಿಗೆ ಕೊಡುತ್ತೀರೆಂದು ಸಮುದಾಯದ ಸಚಿವರಾದ ಮುನಿಯಪ್ಪ, ತಿಮ್ಮಾಪುರ ಇಬ್ಬರೂ ಸಿಎಂಗೆ ಕೇಳಿ ತಿಳಿಸಬೇಕು**
> **ಎಚ್. ಆಂಜನೇಯ,** ಮಾಜಿ ಸಚಿವ

ಡಿಸಿಎಂ ಸ್ಥಾನಕ್ಕೆ ಬೇಡಿಕೆ

ಮುನಿಯಪ್ಪ ಭಾಷಣ ಮಾಡುವ ವೇಳೆ ಕೆಲವರು, ಮಾದಿಗ ಸಮುದಾಯದವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡಬೇಕು ಎಂದು ಘೋಷಣೆ ಕೂಗಿದರು. ಇನ್ನೂ ಕೆಲವರು, ಎಚ್. ಆಂಜನೇಯ ಅವರನ್ನು ವಿಧಾನ ಪರಿಷತ್ ಸದಸ್ಯ ಮಾಡಬೇಕು ಎಂದೂ ಒತ್ತಾಯಿಸಿದರು.

ಎಸ್‌ಎಚ್‌ಡಿ 5ನೇ ಹಂತಕ್ಕೆ ₹4,000 ಕೋಟಿ: ಸತೀಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ (ಎಸ್‌ಎಚ್‌ಡಿಪಿ) ಐದನೇ ಹಂತದ ಕಾಮಗಾರಿಗಳನ್ನು ₹4,000 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳುವ ಪ್ರಸ್ತಾವವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಎಸ್‌ಎಚ್‌ಡಿಪಿ ಕಾಮಗಾರಿಗಳಿಗೆ ₹4,000 ಕೋಟಿ ಅನುದಾನ ಕೋರಲು ಸಿದ್ಧತೆ ನಡೆದಿದೆ. ಒಪ್ಪಿಗೆ ದೊರೆತ ಬಳಿಕ ಮುಂದಿನ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು' ಎಂದರು.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (ನಬಾರ್ಡ್) ನೆರವಿನಲ್ಲಿ ₹500 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವ ಸಲ್ಲಿಸಲಾಗಿದೆ. ಕೇಂದ್ರೀಯ ರಸ್ತೆ ನಿಧಿ (ಸಿಆರ್‌ಎಫ್) ಅಡಿಯಲ್ಲಿ ₹500 ಕೋಟಿ ಅನುದಾನ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ವಿವರಿಸಿದರು.

38 ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಮೂರು ಬಾರಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಒಪ್ಪಿಗೆ ನೀಡುವಂತೆ ಮನವಿ ಮಾಡಲಾಗಿದೆ. ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

12 ಟೋಲ್ ರಸ್ತೆಗಳನ್ನು ನಿರ್ಮಿಸುವ ಪ್ರಸ್ತಾವವೂ ಇದೆ. ವಾಹನ ದಟ್ಟಣೆ, ರಸ್ತೆ ನಿರ್ಮಾಣ ವೆಚ್ಚ ಎಲ್ಲವನ್ನೂ ಪರಿಶೀಲಿಸಿದ ಬಳಿಕ ನಿರ್ಧಾರಕ್ಕೆ ಬರಲಾಗುವುದು ಎಂದರು.

ಕಳಪೆ ಕಾಮಗಾರಿಗಳ ಕುರಿತು ಖಚಿತವಾದ ದೂರುಗಳು ಬಂದರೆ ತನಿಖೆ ನಡೆಸಲಾಗುವುದು. ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದ ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ದೂರು ಬಂದರೆ ತನಿಖೆ ನಡೆಸಲು ಸಿದ್ಧ ಎಂದು ಹೇಳಿದರು.

ಮಂಗಳವಾರ, ನವೆಂಬರ್ 7, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 308 | ಪುಟ 16

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಮೂತ್ರಕೋಶದಲ್ಲಿ ಕಲ್ಲುಗಳಾಗುವುದನ್ನು ಚಟುವಟಿಕೆಯ ಜೀವನಶೈಲಿ ಮತ್ತು ಅಗತ್ಯಪ್ರಮಾಣದ ನೀರಿನ ಸೇವನೆಯಿಂದಾಗಿ ತಪ್ಪಿಸಬಹುದು

ವಿದೇಶ ವಿದ್ಯಮಾನ

'ಸಾಕು, ಮಕ್ಕಳ ಮೇಲಿನ ಯುದ್ಧ ನಿಲ್ಲಿಸಿ'

ವಾಹನ ರಿಟೇಲ್ ಮಾರಾಟ ಇಳಿಕೆ 9

ಕೆಸಿಆರ್‌ಗೆ ಕಠಿಣ ಸವಾಲು 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,958 ▲	19,411 ▲	₹62,850 (ಬೆಂಗಳೂರು)	₹73,900 (ಬೆಂಗಳೂರು)	83.21 ▼



ಮಹಿಳಾ ಶೌಚಾಲಯ: ರಾಷ್ಟ್ರೀಯ ಮಾದರಿ ರೂಪಿಸಿ: ಸುಪ್ರೀಂ

ನವದೆಹಲಿ (ಪಿಟಿಐ): ಸರ್ಕಾರಿ ಅನುದಾನಿತ ಮತ್ತು ವಸತಿ ಶಾಲೆಗಳಲ್ಲಿ ಬಾಲಕಿಯರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ನಿರ್ಮಿಸಲು ರಾಷ್ಟ್ರೀಯ ಮಾದರಿ ರೂಪಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ. 8

ಭಾರಿ ಮಳೆ: ಹೊಳೆಯಂತೆ ಹರಿದ ನೀರು 02

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆತ್ಮಾವಲೋಕನಕ್ಕೆ ಸೂಚಿಸಿದ ಸುಪ್ರೀಂ ಕೋರ್ಟ್ ನ್ಯಾಯಪೀಠ

ರಾಜ್ಯಪಾಲರಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನಸಭೆಗಳು ಅನುಮೋದನೆ ನೀಡುವ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕದೆ ಇದ್ದಾಗ, ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರಗಳು ಕೋರ್ಟ್ ಮೆಟ್ಟಿಲೇರಬೇಕಾದ ಪರಿಸ್ಥಿತಿ ಸೃಷ್ಟಿಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, 'ರಾಜ್ಯಪಾಲರು ತಾವು ಚುನಾಯಿತ ಪ್ರತಿನಿಧಿ ಅಲ್ಲ ಎಂಬುದನ್ನು ಮರೆಯಬಾರದು' ಎಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ನ್ಯಾಯಪೀಠವು, ರಾಜ್ಯಪಾಲರು ಹಾಗೂ ರಾಜ್ಯ ಸರ್ಕಾರಗಳ ನಡುವೆ ಮತ್ತೆ ಮತ್ತೆ ಸಂಘರ್ಷ ಉಂಟಾಗುತ್ತಿರುವುದರ ಕುರಿತು ಕೂಡ ಕಳವಳ ವ್ಯಕ್ತಪಡಿಸಿದೆ. ಎರಡೂ ಕಡೆಯವರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಕೋರ್ಟ್ ಹೇಳಿದೆ.

ಏಳು ಮಸೂದೆಗಳು ರಾಜ್ಯಪಾಲರ ಅಂಕಿತಕ್ಕಾಗಿ ಕಾಯುತ್ತಿವೆ ಎಂದು ಪಂಜಾಬ್ ಸರ್ಕಾರ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು, ಈ ವಿಚಾರದಲ್ಲಿ ರಾಜ್ಯಪಾಲರು ಕೈಗೊಂಡ ಕ್ರಮಗಳ ಬಗ್ಗೆ ವಿವರ ಸಲ್ಲಿಸಬೇಕು ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿದೆ.

'ಬಜೆಟ್ ಅಧಿವೇಶನ ಕರೆಯಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ಗೆ ಏಕೆ ಬರಬೇಕು... ಈ ವಿಷಯಗಳನ್ನು ರಾಜ್ಯಪಾಲರು ಹಾಗೂ ಮುಖ್ಯಮಂತ್ರಿ ಇತ್ಯರ್ಥಪಡಿಸಿಕೊಳ್ಳಬೇಕು' ಎಂದು ಪೀಠ ಹೇಳಿತು. 'ರಾಜ್ಯಪಾಲರು ತಾವು ಚುನಾಯಿತ ಪ್ರಾಧಿಕಾರ ಅಲ್ಲ ಎಂಬುದನ್ನು ಅರಿಯಬೇಕು' ಎಂದು ಕಟುವಾಗಿ ಹೇಳಿತು.

ಪಂಜಾಬ್ ಸರ್ಕಾರದ ಪರವಾಗಿ ವಾದಿಸಿದ ಹಿರಿಯ ವಕೀಲ ಎ.ಎಂ. ಸಿಂಘ್ವಿ, 'ಸ್ಪೀಕರ್ ಅವರು ವಿಧಾನಸಭೆಯ ಕಲಾಪವನ್ನು ಮತ್ತೆ ಕರೆದಿದ್ದರು, ವಿಧಾನಸಭೆಯು ಏಳು ಮಸೂದೆಗಳಿಗೆ ಅನುಮೋದನೆ ನೀಡಿದೆ. ಆದರೆ ರಾಜ್ಯಪಾಲರು ಮಸೂದೆಗಳಿಗೆ ಸಹಿ ಹಾಕುತ್ತಿಲ್ಲ' ಎಂದು ವಿವರಿಸಿದರು. ಜೂನ್‌ನಲ್ಲಿ ನಡೆದ ಅಧಿವೇಶನವು ಕಾನೂನುಬದ್ಧವಾಗಿ ಇರಲಿಲ್ಲ ಎಂದು ರಾಜ್ಯಪಾಲರು ಹೇಳಿದ್ದಾರೆ.

ಮಸೂದೆಗಳ ವಿಚಾರವಾಗಿ ರಾಜ್ಯಪಾಲರು ಒಂದಿಷ್ಟು ಕ್ರಮಗಳನ್ನು ಕೈಗೊಂಡಿದ್ದಾರೆ ಎಂದು ಮೆಹ್ತಾ ಅವರು ಪೀಠಕ್ಕೆ ವಿವರಿಸಿದರು. ಅದಕ್ಕೆ ಸಂಬಂಧಿಸಿದ ವಿವರಗಳನ್ನು ಶುಕ್ರವಾರ ಸಲ್ಲಿಸಲಾಗುವುದು ಎಂದು ಹೇಳಿದರು.

8ನೇ ಪುಟ ನೋಡಿ

ತಮಿಳುನಾಡಿನ ಅರ್ಜಿ

ಮಸೂದೆಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ತಮಿಳುನಾಡು ಸರ್ಕಾರ ಕೂಡ ಸುಪ್ರೀಂ ಕೋರ್ಟ್‌ಗೆ ಅಕ್ಟೋಬರ್‌ನಲ್ಲಿ ಅರ್ಜಿ ಸಲ್ಲಿಸಿದೆ. ಮಸೂದೆಗಳಿಗೆ ಕಾಲಮಿತಿಯಲ್ಲಿ ಅಂಕಿತ ಹಾಕುವಂತೆ ರಾಜ್ಯಪಾಲರಿಗೆ ಸೂಚನೆ ನೀಡಬೇಕು ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಅನ್ನು ಕೋರಿದೆ.

2020ರ ನಂತರದಲ್ಲಿ ತಮಿಳುನಾಡು ವಿಧಾನಸಭೆಯು ಅನುಮೋದನೆ ನೀಡಿರುವ 12 ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕಿಲ್ಲ. ಎಐಎಡಿಎಂಕೆ ಪಕ್ಷಕ್ಕೆ ಸೇರಿದ ಮಾಜಿ ಸಚಿವರ ವಿರುದ್ಧ ಕ್ರಮಕ್ಕೆ ಅನುಮತಿ ಕೋರಿ ಸಲ್ಲಿಸಿರುವ ಕಡತಗಳು 2022ರಿಂದ ಬಾಕಿ ಉಳಿದಿವೆ ಎಂದು ಅಂಶಗಳನ್ನು ತಮಿಳುನಾಡು ಸರ್ಕಾರ ಉಲ್ಲೇಖಿಸಿದೆ.

ಪಂಜಾಬ್‌ನಲ್ಲಿ ಆಗಿದ್ದು ಇದು

ರಾಜ್ಯಪಾಲ ಭಂವರಿಲಾಲ್ ಪುರೋಹಿತ್ ವಿರುದ್ಧ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಪಂಜಾಬ್ ಸರ್ಕಾರವು, 27 ಮಸೂದೆಗಳ ಪೈಕಿ 22 ಮಸೂದೆಗಳಿಗೆ ಮಾತ್ರ ರಾಜ್ಯಪಾಲರು ಅನುಮೋದನೆ ನೀಡಿದ್ದಾರೆ ಎಂದು ಅರ್ಜಿಯಲ್ಲಿ ಹೇಳಿದೆ. ಬಜೆಟ್ ಅಧಿವೇಶನವನ್ನು ರಾಜ್ಯಪಾಲರು ಕರೆಯುತ್ತಿಲ್ಲ ಎಂದು ಫೆಬ್ರುವರಿಯಲ್ಲಿ ಕೂಡ ಪಂಜಾಬ್ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸರ್ಕಾರಿಯಾ ಆಯೋಗದ ವರದಿಯನ್ನು ಉಲ್ಲೇಖಿಸಿ, ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರಿಗೆ ಸಮಯಮಿತಿ ಕುರಿತಾಗಿ ಮಾರ್ಗಸೂಚಿ ಇರಬೇಕು ಎಂದು ರಾಜ್ಯಗಳು ಕೇಳುತ್ತಿವೆ.

ರೈತರಿಗೆ 7 ಗಂಟೆ ವಿದ್ಯುತ್

ಸೋಮವಾರದಿಂದಲೇ ಜಾರಿ: ಸಿ.ಎಂ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಾವರಿ ಪಂಪ್‌ಸೆಟ್‌ಗಳಿಗೆ ಈಗ 5 ಗಂಟೆ ವಿದ್ಯುತ್ ಪೂರೈಸುತ್ತಿದ್ದು, ಅದನ್ನು 7 ಗಂಟೆ ಗಳಿಗೆ ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೋಮವಾರ ಇಂಧನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಮತ್ತು ಭತ್ತ ಕಟಾವಿಗೆ ಬಂದಿರುವುದರಿಂದ ಈ ಪ್ರದೇಶಗಳಲ್ಲಿ ಇಂದಿನಿಂದಲೇ ಏಳು ಗಂಟೆ ಕಾಲ ವಿದ್ಯುತ್ ಪೂರೈಸುವಂತೆ ಸೂಚನೆ ನೀಡಲಾಗಿದೆ ಎಂದರು.

ವಿದ್ಯುತ್ ಕೊರತೆ ಇದ್ದ ಸಂದರ್ಭದಲ್ಲಿ ಕೆಲವು ಭಾಗದ ರೈತರು ತ್ರೀಫೇಸ್‌ನಲ್ಲಿ ಐದು ಗಂಟೆ ವಿದ್ಯುತ್ ನೀಡಿದರೆ ಸಾಕು ಎಂದು ಹೇಳಿದ್ದರು. ಆದ್ದರಿಂದ ಐದು ಗಂಟೆಗಳ ಕಾಲ ಮೂರು ಫೇಸ್‌ನಲ್ಲಿ ವಿದ್ಯುತ್ ಪೂರೈಕೆಗೆ ಸೂಚಿಸಲಾಗಿತ್ತು. ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ ರೈತರು ಭೇಟಿ ಮಾಡಿ ಭತ್ತ ಬೆಳೆಯಲು ಐದು ಗಂಟೆ ವಿದ್ಯುತ್ ಸಾಕಾಗುವುದಿಲ್ಲ. ಏಳು ಗಂಟೆ ನೀಡಬೇಕೆಂದು ಮನವಿ ಮಾಡಿದ್ದರು. ಹೀಗಾಗಿ ಎಲ್ಲ ಭಾಗದ ರೈತರಿಗೂ ಏಳು ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ವಿವರಿಸಿದರು. ರಾಯಚೂರು, ಬಳ್ಳಾರಿ ಉಷ್ಣ ವಿದ್ಯುತ್ ಉತ್ಪಾದನಾ ಘಟಕಗಳು ಈಗ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುತ್ತಿವೆ. ಸುಮಾರು 3,200 ಮೆ.ವಾ.ಗಳಷ್ಟು ಹೆಚ್ಚು ವಿದ್ಯುತ್ ಉತ್ಪಾದನೆ ಆಗುತ್ತಿದೆ.

5ನೇ ಪುಟ ನೋಡಿ

ವೇತನ ಆಯೋಗ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳನೇ ವೇತನ ಆಯೋಗದ ಅವಧಿಯನ್ನು 2024ರ ಮಾರ್ಚ್ 15ರವರೆಗೆ ವಿಸ್ತರಿಸಿ ಹಣಕಾಸು ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಾಗಿ ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ. ಸುಧಾಕರ ರಾವ್ ಅಧ್ಯಕ್ಷತೆಯಲ್ಲಿ ಏಳನೇ ವೇತನ ಆಯೋಗವನ್ನು ನೇಮಿಸಿ 2022ರ ನವೆಂಬರ್ 18ರಂದು ಆದೇಶ ಹೊರಡಿಸಲಾಗಿತ್ತು. ಆರಂಭದಲ್ಲಿ ಆಯೋಗಕ್ಕೆ ವರದಿ ಸಲ್ಲಿಸಲು ಆರು ತಿಂಗಳ ಕಾಲಾವಕಾಶ ನೀಡಲಾಗಿತ್ತು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನವೇ, ಆಯೋಗದ ಕಾಲಾವಧಿಯನ್ನು ಆರು ತಿಂಗಳ ಕಾಲ ವಿಸ್ತರಿಸಿ 2023ರ ಮೇ 15ರಂದು ಆದೇಶ ಹೊರಡಿಸಲಾಗಿತ್ತು. ನವೆಂಬರ್ 18ಕ್ಕೆ ಈ ಅವಧಿ ಮುಕ್ತಾಯವಾಗಲಿದೆ. ಹೀಗಾಗಿ, ಅವಧಿ ವಿಸ್ತರಿಸಲಾಗಿದೆ.

ಪ್ರತಿಮಾ ಕೊಲೆ: ಚಾಲಕ ಬಂಧನ

ಬೆಂಗಳೂರು: ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ (43) ಕೊಲೆ ಪ್ರಕರಣ ಭೇದಿಸಿರುವ ದಕ್ಷಿಣ ವಿಭಾಗದ ಪೊಲೀಸರು, ಆರೋಪಿ ಕಿರಣ್‌ನನ್ನು (32) ಚಾಮರಾಜನಗರದ ಮಹದೇಶ್ವರ ಬೆಟ್ಟದಲ್ಲಿ ಬಂಧಿಸಿದ್ದಾರೆ.

'ಕಿರಣ್, ಗುತ್ತಿಗೆ ಆಧಾರದಲ್ಲಿ ಪ್ರತಿಮಾ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಅಪಘಾತ ಹಾಗೂ ನಡತೆ ಕಾರಣಕ್ಕೆ ಎರಡು ತಿಂಗಳ ಹಿಂದೆಯಷ್ಟೇ ಆತನನ್ನು ಪ್ರತಿಮಾ ಕೆಲಸದಿಂದ ತೆಗೆಸಿದ್ದರು' ಎಂದು ದಕ್ಷಿಣ ವಿಭಾಗದ ಡಿಸಿಪಿ ರಾಹುಲ್‌ಕುಮಾರ್ ಶಹಾಪುರ್‌ವಾಡ್ ತಿಳಿಸಿದರು. 5

ಮಂಗಳವಾರದ ಉಷ್ಣಾಂಶ: 30° ಗರಿಷ್ಠ, 21° ಕನಿಷ್ಠ

ಹವಾಮಾನ ಮುನ್ಸೂಚನೆ
ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆಯಿದೆ.

ಹವಾಮಾನ: ಬುಧವಾರ 30° 20° | ಗುರುವಾರ 30° 20° | ಶುಕ್ರವಾರ 30° 20°

ಬೆಂಗಳೂರಿನಲ್ಲಿ ಸೋಮವಾರ ಸುರಿದ ಮಳೆಯಿಂದ ಶಿರಸಿ ಮೇಲ್ಸೇತುವೆ ಮತ್ತು ಸುಲ್ತಾನ್ ರಸ್ತೆಯಲ್ಲಿ ನಿಂತ ನೀರಿನಲ್ಲೇ ವಾಹನಗಳು ಸಾಗಿದವು (ಎಡಚಿತ್ರ) ಸುರಿಯುತ್ತಿದ್ದ ಮಳೆಯಲ್ಲೇ ಮಹಿಳೆಯರು ಕೊಡೆ ಹಿಡಿದು ಸಾಗಿದರು
—ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಶೇಷಾದ್ರಿಪುರಂ ರೈಲ್ವೆ ಅಂಡರ್ ಪಾಸ್‌ನಲ್ಲಿ ಟಿಟಿ ಗಾಡಿ ಮಳೆ ನೀರಿನಲ್ಲಿ ಕೆಟ್ಟು ನಿಂತಿತ್ತು

ಭಾರಿ ಮಳೆ: ಹೊಳೆಯಂತೆ ಹರಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಸೋಮವಾರ ಸಂಜೆ ಹಾಗೂ ರಾತ್ರಿ ಧಾರಾಕಾರ ಮಳೆ ಆಯಿತು. ಬಹುತೇಕ ರಸ್ತೆಗಳು ಹಾಗೂ ಕೆಳಸೇತುವೆಗಳಲ್ಲಿ ನೀರು ಹೊಳೆಯಂತೆ ಹರಿಯಿತು.

ಬೆಳಿಗ್ಗೆಯಿಂದಲೂ ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇತ್ತು. ಸಂಜೆ ಜಿಟಿ ಜಿಟಿ ಮಳೆ ಆರಂಭವಾಗಿ, ನಂತರ ಜೋರಾಗಿ ಸುರಿಯಲಾರಂಭಿಸಿತು.

ಬಾಣಸವಾಡಿ ಮುಖ್ಯರಸ್ತೆ (ಜೈ ಭಾರತ್ ನಗರ ಪೆಟ್ರೋಲ್ ಬಂಕ್ ಬಳಿ) ಹಾಗೂ ರಾಮಮೂರ್ತಿನಗರ ರೈಲ್ವೆ ಕೆಳ ಸೇತುವೆಯಲ್ಲಿ ನೀರು ಸಂಗ್ರಹ ಗೊಂಡಿತ್ತು. ಇದೇ ರಸ್ತೆಯಲ್ಲಿ ವಾಹನ ಗಳ ಸಂಚಾರ ನಿಧಾನಗತಿಯಲ್ಲಿತ್ತು.

ಕೆ.ಆರ್.ಪುರ ರೈಲು ನಿಲ್ದಾಣದ ಕಡೆಗೆ ಹೋಗುವ ರಸ್ತೆಯಲ್ಲಿ ಮಳೆ ನೀರು ಸಂಗ್ರಹಗೊಂಡ ಕಾರಣ ವಾಹನಗಳು ಸಾಗಲು ಸಾಧ್ಯವಾಗಲಿಲ್ಲ. ಪರ್ಯಾಯ ಮಾರ್ಗದಲ್ಲಿ ವಾಹನಗಳು ತೆರಳಿದವು.

ಕಲ್ಯಾಣನಗರ 80 ಅಡಿ ರಸ್ತೆ (ಕಲ್ಯಾಣನಗರ ಕೆಳಸೇತುವೆ ಬಳಿ), ಬೆನ್ನಿಗಾನಹಳ್ಳಿ ಮೆಟ್ರೊ ನಿಲ್ದಾಣದ ಎದುರು, ಲಾಲ್‌ಬಾಗ್ ಮುಖ್ಯರಸ್ತೆ, ಅನಿಲ್ ಕುಂಬ್ಳೆ ಜಂಕ್ಷನ್, ಹೆಬ್ಬಾಳ ವೃತ್ತ, ಕಸ್ತೂರಿ ನಗರದ ರಿಂಗ್ ರಸ್ತೆಯ ಟಿನ್ ಫ್ಯಾಕ್ಟರಿ ಬಳಿ ನೀರು ನಿಂತು ಸಮಸ್ಯೆ ಎದುರಾಗಿತ್ತು. ಜಾಲಹಳ್ಳಿ ವೃತ್ತದಲ್ಲಿ ಮೇಲ್ಸೇತುವೆಯಿಂದ ನೀರು ರಸ್ತೆಗೆ ಧಾರಾಕಾರವಾಗಿ ಹರಿಯಿತು. ಈ ರಸ್ತೆಯಲ್ಲಿ ನಿಂತಿದ್ದ ನೀರಿನಲ್ಲಿಯೇ ವಾಹನಗಳು ಸಂಚರಿಸಿದವು.

ನಗರದಲ್ಲಿ ಸೋಮವಾರ ರಾತ್ರಿ ಸುರಿದ ಜೋರು ಮಳೆಯಿಂದಾಗಿ ಜಾಲಹಳ್ಳಿ ವೃತ್ತದ ರಸ್ತೆಯಲ್ಲಿ ನೀರು ಧಾರಾಕಾರವಾಗಿ ಹರಿಯಿತು – ಪ್ರಜಾವಾಣಿ ಚಿತ್ರ

‘ನಗರದ ಎಲ್ಲ ಪ್ರದೇಶಗಳಲ್ಲಿ ಜೋರು ಮಳೆ ಆಗುತ್ತಿದೆ. ರಸ್ತೆ ಹಾಗೂ ಕೆಳ ಸೇತುವೆಗಳಲ್ಲಿ ನೀರು ನಿಂತಿದ್ದ ಬಗ್ಗೆ ದೂರುಗಳು ಬಂದಿವೆ. ಸಿಬ್ಬಂದಿ ಸ್ಥಳಕ್ಕೆ ಹೋಗಿ ನೀರು ತೆರವು ಮಾಡುತ್ತಿದ್ದಾರೆ. ಉಳಿದಂತೆ, ಬೇರೆ ಯಾವುದೇ ಹಾನಿ ಬಗ್ಗೆ ದೂರುಗಳು ಬಂದಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ನಗರದಲ್ಲಿ ಮಂಗಳವಾರ ಹಾಗೂ ಬುಧವಾರ ಸಹ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೆಳಸೇತುವೆ ಜಲಾವೃತ; ಸವಾರರ ಪರದಾಟ: ರಾತ್ರಿ 10 ಗಂಟೆಯ ನಂತರ ಗುಡುಗು ಸಹಿತ ಮಳೆಯ ಅಬ್ಬರ ಜೋರಾಗಿತ್ತು. ಇದರಿಂದ ಹಲವು ಕೆಳಸೇತುವೆಗಳು ಜಲಾವೃತ ಗೊಂಡಿದ್ದವು. ವಾಹನ ಸವಾರರು ಪರದಾಡಿದರು. ಅಂಡರ್‌ಪಾಸ್ ಬಳಿ ಬ್ಯಾರಿಕೇಡ್ ಹಾಕಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಶ್ರೀರಾಂಪುರ ಅಂಡರ್ ಪಾಸ್ ಸಂಪೂರ್ಣ ನೀರಿನಲ್ಲಿ ಮುಳುಗಿತ್ತು. ಮತ್ತಿಕೆರೆ, ಯಶವಂತಪುರ, ದಾಸರ ಹಳ್ಳಿ, ಯಲಹಂಕ, ಬೇಗೂರು, ಕೋರ ಮಂಗಲ, ಚಂದ್ರಾಲೇಔಟ್, ನಾಯಂಡಹಳ್ಳಿ, ಜಯನಗರ, ಸುಂಕದಕಟ್ಟೆ ಭಾಗದಲ್ಲಿ ಭಾರೀ ಮಳೆ ಸುರಿಯಿತು. ರಸ್ತೆಗಳಲ್ಲಿ ರಾಜಕಾಲುವೆ-ಗಳಲ್ಲಿ ನೀರು ತುಂಬಿ ಹರಿಯಿತು.

ಜಾಲಹಳ್ಳಿ ಜಂಕ್ಷನ್ ಮೆಟ್ರೊ ನಿಲ್ದಾಣದ ಕೆಳಗೆ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನ ಸವಾರರು ಪರದಾಡಿದರು.

ಮನೆಗಳಿಗೆ ನುಗ್ಗಿದ ನೀರು

ಕುರುಬರಹಳ್ಳಿಯಲ್ಲಿ ಹಲವು ಮನೆಗಳಿಗೆ ಮಳೆ ನೀರು ನುಗ್ಗಿ ಸಮಸ್ಯೆ ಸೃಷ್ಟಿಸಿತು. ದಿನಸಿ ಸಾಮಗ್ರಿಗಳು, ಹಾಸಿಗೆ , ಬಟ್ಟೆ ಮಳೆಯ ನೀರಿಗೆ ತೊಯ್ದು ಹೋದವು. ನಿವಾಸಿಗಳು ರಾತ್ರಿಯಿಡೀ ಜಾಗರಣೆ ಮಾಡಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

ಗೊರಗುಂಟೆಪಾಳ್ಯದ ಪೈಪ್‌ಲೈನ್ ರಸ್ತೆಗಳಲ್ಲಿ ವಾಹನಗಳು ಮುಳುಗುವಷ್ಟು ಮಳೆನೀರು ತುಂಬಿಕೊಂಡಿತ್ತು. ನಗರದ ವಿವಿಧ ಭಾಗಗಳಲ್ಲಿರುವ ಅಂಡರ್‌ಪಾಸ್‌ಗಳು ಜಲಾವೃತವಾಗಿದ್ದವು.

ಎಲ್ಲೆಲ್ಲಿ ಎಷ್ಟು ಮಳೆ (ಸೋಮವಾರ ರಾತ್ರಿಯವರೆಗೆ, ಸೆ.ಮೀ.ಗಳಲ್ಲಿ)

ಯಲಹಂಕ	11.4
ಪೀಣ್ಯಕೈಗಾರಿಕಾ ಪ್ರದೇಶ	6.4
ನಂದಿನಿ ಲೇಔಟ್	7.5
ಶೆಟ್ಟಿಹಳ್ಳಿ	5.3
ಗಾಳಿ ಆಂಜನೇಯ ದೇವಸ್ಥಾನ ವಾರ್ಡ್	6
ಜಕ್ಕೂರು	5.8
ಕೆಂಗೇರಿ	6
ಅಗ್ರಹಾರ ದಾಸರಹಳ್ಳಿ	6.2
ಹಂಪಿನಗರ	8.6
ನಾಗಪುರ	8.2
ರಾಜ್‌ಮಹಲ್‌ಗುಟ್ಟಹಳ್ಳಿ	6.3
ಕೊಟ್ಟಿಗೆ ಪಾಳ್ಯ	5.7
ಕಮ್ಮನ ಹಳ್ಳಿ	5.5
ಮಾರುತಿ ಮಂದಿರ	5.2

ಶೇಷಾದ್ರಿಪುರ ಪೊಲೀಸ್ ಠಾಣೆ ಎದುರು ಮಳೆಯಲ್ಲೇ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಕೆಟ್ಟು ನಿಂತಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು

ಮುನ್ನೆಚ್ಚರಿಕೆ ವಹಿಸಿ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ರಾತ್ರಿ ಭಾರಿ ಮಳೆಯಾದ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಬಿಬಿಎಂಪಿಯ ಎಲ್ಲ ವಲಯಗಳ ಅಧಿಕಾರಿಗಳಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದಾರೆ.

ತಡರಾತ್ರಿಯೇ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ನಿಯಂತ್ರಣ ಕೊಠಡಿಗೆ(ವಾರ್ ರೂಂ) ಭೇಟಿ ನೀಡಿ, ಅಧಿಕಾರಿ ಗಳಿಂದ ಮಳೆ ಪರಿಸ್ಥಿತಿ ಕುರಿತು ಮಾಹಿತಿ ಪಡೆದ ಅವರು, ಮಾಧ್ಯ-ಮದವರೊಂದಿಗೆ ಮಾತನಾಡಿದರು.

‘ಹಲವು ದೂರುಗಳು ಬಂದಿವೆ. ತಕ್ಷಣವೇ ಸ್ಥಳಕ್ಕೆ ತೆರಳುವಂತೆ ಸೂಚಿಸಿದ್ದೇನೆ. ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು. ವಿಮಾನ ನಿಲ್ದಾಣ ರಸ್ತೆ ಹಾಗೂ ರಾಜರಾಜೇಶ್ವರಿ ನಗರದಲ್ಲಿ ಸ್ವಲ್ಪ ಸಮಸ್ಯೆಯಾಗಿದೆ’ ಎಂದು ಹೇಳಿದರು.

‘ಮುಂಗಾರಿನಲ್ಲಿ ಮಳೆ ಕೈಕೊಟ್ಟಿತ್ತು. ಈಗಲಾದರೂ ಮಳೆ ಬರಲಿ. ದೂರುಗಳು ಬಂದರೆ ಅಧಿಕಾರಿಗಳು ಸ್ಪಂದಿಸಲು ಸಜ್ಜಾಗಿದ್ದಾರೆ. ನಗರದಲ್ಲಿ ಎಲ್ಲೂ ಅನಾಹುತಗಳಾಗಿಲ್ಲ. ಸ್ವಲ್ಪ ಹೊತ್ತಿನ ನಂತರ ನೀರಿನ ಹರಿವು ಕಡಿಮೆಯಾಗುತ್ತದೆ’ ಎಂದಿದ್ದಾರೆ.

ಆಕ್ಸಿಸ್ ಬ್ಯಾಂಕ್

ಹರಾಜಿಗೆ ಸಾರ್ವಜನಿಕ ಸೂಚನೆ
ಸಾರ್ವಜನಿಕ ಸೂಚನೆ – ಅಡಮಾನ ಚಿನ್ನಾಭರಣಗಳ ಇ–ಹರಾಜು ನೋಟಿಸ್

ಈ ಮೂಲಕ ಸಾಲಗಾರರಿಗೆ ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ ಈ ಕೆಳಗಿನ ಖಾತೆಗಳಲ್ಲಿ ಒತ್ತೆಯಿಡಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಆಕ್ಸಿಸ್ ಬ್ಯಾಂಕ್ ಉದ್ದೇಶಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರಿಗೆ ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ–ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 17.11.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿ:	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX4771	ಶಿಲ್ಪಾಪ್ರಿಯಾ ಎಸ್	1141938.83	28-Aug-23	332.900	319.800
ಬನಶಂಕರಿ, ಬೆಂಗಳೂರು [ಕ]	XXXXXXXXXXX4784	ಶಿಲ್ಪಾಪ್ರಿಯಾ ಎಸ್	1025744	28-Aug-23	299.200	288.900
ಬನಶಂಕರಿ, ಬೆಂಗಳೂರು [ಕ]	XXXXXXXXXXX2398	ಸುರೇಶ್ ಆರ್	185961	10-Oct-23	49.300	45.500
ಬನಶಂಕರಿ, ಬೆಂಗಳೂರು [ಕ]	XXXXXXXXXXX1700	ಸುರೇಶ್ ಆರ್	178803	10-Oct-23	52.400	48.400
ಬನಶಂಕರಿ, ಬೆಂಗಳೂರು [ಕ]	XXXXXXXXXXX5715	ಸುರೇಶ್ ಆರ್	171974	10-Oct-23	53.000	49.300
ಬನಶಂಕರಿ, ಬೆಂಗಳೂರು [ಕ]	XXXXXXXXXXX7014	ಸುರೇಶ್ ಆರ್	151742.82	10-Oct-23	37.300	36.700
ಬನಶಂಕರಿ, ಬೆಂಗಳೂರು [ಕ]	XXXXXXXXXXX4547	ಸುರೇಶ್ ಆರ್	117068	10-Oct-23	33.900	33.500
ಬಂಗಾರಪೇಟೆ [ಕ]	XXXXXXXXXXX8524	ಕುಶಾಲ್ ಕುಮಾರ್ ಕೆ.ಆರ್	35545	29-Sep-23	10.100	9.800
ಬಸವನಗುಡಿ, ಬೆಂಗಳೂರು [ಕ]	XXXXXXXXXXX6044	ದೇಬಬ್ರತ ಪತ್ರ	99921	28-Jul-23	29.400	29.100
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX0698	ಪ್ರಸಾದ್ ಕುಮಾರ್ ಬಿ ಸಿ	555370	28-Aug-23	141.700	133.770
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX1112	ಪ್ರವೀಣ್ ಕಿಡೆನ್ನವರ್	162693	28-Jul-23	46.970	42.970
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX1558	ಎಸ್ ಹರ್ಷವರ್ಧನ್	1105660.66	10-Oct-23	292.250	285.350
ಬಸವೇಶ್ವರ ನಗರ, ಬೆಂಗಳೂರು [ಕ]	XXXXXXXXXXX4361	ಎಸ್ ಹರ್ಷವರ್ಧನ್	337308.9	10-Oct-23	89.170	89.170
ಬಿಡದಿ, ಬೆಂಗಳೂರು [ಕ]	XXXXXXXXXXX8071	ಚಂದ್ರ ಎಂಎಂಎ	64028	29-Sep-23	17.300	16.300
ಬಿಡದಿ, ಬೆಂಗಳೂರು [ಕ]	XXXXXXXXXXX3695	ನೀತು ಎನ್ ವಾಸು	54076	29-Sep-23	17.200	14.400
ಬಿಡದಿ, ಬೆಂಗಳೂರು [ಕ]	XXXXXXXXXXX4526	ಸುರೇಶ್ ಎಂ	227266.04	10-Oct-23	63.800	61.300
ಚನ್ನಪಟ್ಟಣ [ಕ]	XXXXXXXXXXX9257	ಶಕೀಬ್ ಮಹದಿ	69050	29-Sep-23	17.400	17.000
ಚಿಕ್ಕಬಳ್ಳಾಪುರ ಕೋಲಾರ [ಕ]	XXXXXXXXXXX8653	ನವೀನ್ ಎನ್	33392	10-Oct-23	8.700	8.400
ಚಿಕ್ಕಬಳ್ಳಾಪುರ ಕೋಲಾರ [ಕ]	XXXXXXXXXXX9720	ಸಲ್ಮಾನ್ ಪಾಷಾ	793547	10-Oct-23	257.000	251.000
ಚಿಂತಾಮಣಿ [ಕ]	XXXXXXXXXXX6627	ಅಶ್ರಫ್ ಬೇಗ್	677890	10-Oct-23	178.100	177.800
ಚಿಂತಾಮಣಿ [ಕ]	XXXXXXXXXXX0654	ತೇಜೇಶ್ ಎನ್	126247.66	30-May-23	41.600	38.600
ಗಾರೆಬಾವಿಪಾಳ್ಯ [ಕ]	XXXXXXXXXXX9030	ಡಿ ಸಾಯಿ ನಾಥ್	70828	10-Oct-23	17.000	17.000
ಗೋವಿಂದರಾಜನಗರ, ಬೆಂಗಳೂರು [ಕ]	XXXXXXXXXXX4579	ತಿಮ್ಮಪ್ಪ ಎಲ್	173389	30-May-23	47.300	47.300
ಗೋವಿಂದರಾಜನಗರ, ಬೆಂಗಳೂರು [ಕ]	XXXXXXXXXXX6700	ತಿಮ್ಮಪ್ಪ ಎಲ್	35203	18-Jul-23	16.500	10.500
ಹೊಸಕೋಟೆ, ಬೆಂಗಳೂರು [ಕ]	XXXXXXXXXXX5772	ಆರಿಫ್ ಮೊಲ್ಲಾ	281185.56	30-May-23	77.600	76.000
ಜಯನಗರ, ಬೆಂಗಳೂರು [ಕ]	XXXXXXXXXXX0188	ಮುದಸೀರ್ ಹುಸೇನ್	115977	5-Sep-23	33.300	33.100
ಕನಕಪುರ [ಕ]	XXXXXXXXXXX0044	ಕೃಷ್ಣ ಕೆ ಬಿ	54841.84	10-Oct-23	16.800	15.100
ಕನಕಪುರ [ಕ]	XXXXXXXXXXX9465	ವೈ ಕೆ ನಾಗರಾಜು	15887	29-Sep-23	30.680	29.880
ಕಸ್ತೂರಿನಗರ, ಬೆಂಗಳೂರು [ಕ]	XXXXXXXXXXX6379	ಬಿ ಚಂದನ್	538496	10-Oct-23	174.200	156.400
ಕೋಲಾರ [ಕ]	XXXXXXXXXXX8322	ಸುನೀಲ್ ಸಿ	336630	10-Oct-23	91.500	88.500
ಕೋಲಾರ [ಕ]	XXXXXXXXXXX3458	ಟಿ ಗೋವಿಂದ ರಾಜು	272135	10-Oct-23	70.600	68.000
ಕೋಲಾರ [ಕ]	XXXXXXXXXXX1626	ಥೋಫಿಕ್ ಪಾಷಾ ಎಸ್	887860	29-Sep-23	254.300	243.900
ಕೋರಮಂಗಲ, ಬೆಂಗಳೂರು [ಕ]	XXXXXXXXXXX9161	ಅಜೀತ್ ಎನ್	514288	10-Oct-23	128.300	126.500
ಕೋರಮಂಗಲ, ಬೆಂಗಳೂರು [ಕ]	XXXXXXXXXXX7179	ಅಜೀತ್ ಎನ್	499369	10-Oct-23	127.800	126.800
ಮಾರತ್ತಹಳ್ಳಿ, ಬೆಂಗಳೂರು [ಕ]	XXXXXXXXXXX0745	ಸಜೀವನ್	80535	29-Sep-23	24.600	24.000
ನೆಲಮಂಗಲ, ಬೆಂಗಳೂರು [ಕ]	XXXXXXXXXXX5717	ರತ್ನಮ್ಮ	685555.33	15-Jun-23	228.000	217.000
ಹಳೇ ಮದ್ರಾಸ್ ರಸ್ತೆ, ಬೆಂಗಳೂರು [ಕ]	XXXXXXXXXXX6050	ತೋಟ ಸಾಯಿ ರಮ್ಯಾ	133006.92	10-Oct-23	36.600	34.800
ಆರ್.ಟಿ. ನಗರ, ಬೆಂಗಳೂರು [ಕ]	XXXXXXXXXXX1865	ಮೊಹಮ್ಮದ್ ನಾಸಿರ್ ಅಲಿ ಸಿದ್ದಿಕಿ	290548.8	10-Oct-23	94.200	90.000
ಆರ್‌ಬಿಐ ಲೇಔಟ್, ಬೆಂಗಳೂರು [ಕ]	XXXXXXXXXXX5947	ಪಿ ಪ್ರಜ್ವಲ್	33721	5-Sep-23	31.500	30.000
ಸಹಕಾರ ನಗರ, ಬೆಂಗಳೂರು [ಕ]	XXXXXXXXXXX7271	ಬಂದ್ರೇವು ಸಾಯಿ ಪ್ರತಾಪ್ ರೆಡ್ಡಿ	76171.47	25-Aug-23	30.900	20.000
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX0403	ಶ್ರೀನಿವಾಸ ರೆಡ್ಡಿ ಬೈರೆಡ್ಡಿ	1109108	15-Jun-23	344.000	324.300
ಸಂಜಯ್ ನಗರ, ಬೆಂಗಳೂರು [ಕ]	XXXXXXXXXXX7223	ವರದರಾಜು ಸುನಿತಾ	1655024.68	10-Oct-23	584.900	549.000
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX4607	ಅನ್ನಪೂರ್ಣಿ ಆರ್	122878	10-Oct-23	30.200	29.800
ಸರ್ಜಾಪುರ ರಸ್ತೆ, ಬೆಂಗಳೂರು [ಕ]	XXXXXXXXXXX8837	ಮಾರುತಿ ಎನ್	244845	10-Oct-23	86.000	64.000
ತುಮಕೂರು [ಕ]	XXXXXXXXXXX7905	ಶಾಂತಲಕ್ಷ್ಮಿ	2206874	10-Oct-23	629.800	594.000
ವಿದ್ಯಾರಣ್ಯಪುರ, ಬೆಂಗಳೂರು [ಕ]	XXXXXXXXXXX5229	ಕದರಂಪಳ್ಳಿ ಮಂಜುನಾಥ	201455	10-Oct-23	50.000	49.000
ವಿಜಯನಗರ, ಬೆಂಗಳೂರು [ಕ]	XXXXXXXXXXX0952	ಮುಬಾರಕ್ ಪಾಷಾ	722427	10-Oct-23	216.500	208.100
ಯಲಹಂಕ, ಬೆಂಗಳೂರು [ಕ]	XXXXXXXXXXX6815	ವೇಮ ರೆಡ್ಡಿ ಗುಂಡ್ಲ	96641.31	5-Sep-23	40.600	37.100
ಯಲಹಂಕ, ಬೆಂಗಳೂರು [ಕ]	XXXXXXXXXXX4649	ಊರ್ಮಿಳಾ ಮೀನಾ	739099	25-Aug-23	245.200	237.700

ಆಕ್ಸಿಸ್ ಬ್ಯಾಂಕ್ ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ **ದಿನಾಂಕ : 17.11.2023 ರಂದು ಮಧ್ಯಾಹ್ನ 12:30 ಗಂಟೆಯಿಂದ 3:30 ವರೆಗೆ** ನಡೆಯಲಿದೆ.
ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು | **ಸಹಿ/– ಅಧಿಕೃತ ಅಧಿಕಾರಿ, ಆಕ್ಸಿಸ್ ಬ್ಯಾಂಕ್ ಲಿಮಿಟೆಡ್**

ಹಸಿರು ಮಾರ್ಗದಲ್ಲಿ ಸ್ಕೈವಾಕ್ ಇಲ್ಲದೆ ‘ನಮ್ಮ ಮೆಟ್ರೊ’ ಪ್ರಯಾಣಿಕರಿಗೆ ಸಂಕಷ್ಟ

ಮೆಟ್ರೊ ಹತ್ತುವುದಕ್ಕೆ ಜನರ ಹರಸಾಹಸ!

• ಆದಿತ್ಯ ಕೆ.ಎ.

ಬೆಂಗಳೂರು: ‘ನಮ್ಮ ಮೆಟ್ರೊ’ದ ಹಸಿರು ಮಾರ್ಗದಲ್ಲಿರುವ ಗೊರಗುಂಟೆ ಪಾಳ್ಯ ನಂತರದ ನಾಲ್ಕು ನಿಲ್ದಾಣಗಳಲ್ಲಿ ಸ್ಕೈವಾಕ್ ಇಲ್ಲದೆ, ರಸ್ತೆಯ ಒಂದು ಬದಿಯ ಪ್ರಯಾಣಿಕರು ಮೆಟ್ರೊ ನಿಲ್ದಾಣ ತಲುಪಲು ಹರಸಾಹಸಪಡುವಂತಾಗಿದೆ.

ಗೊರಗುಂಟೆಪಾಳ್ಯದ ನಂತರ ಸಿಗುವ ಪೀಣ್ಯ, ಪೀಣ್ಯ ಇಂಡಸ್ಟ್ರಿ, ಜಾಲಹಳ್ಳಿ, ದಾಸರಹಳ್ಳಿಯ ಒಂದು ಭಾಗದಲ್ಲಿರುವ ಪ್ರಯಾಣಿಕರು ಎದುರು ಭಾಗದಲ್ಲಿರುವ ಮೆಟ್ರೊ ನಿಲ್ದಾಣ ತಲುಪಲು ರಸ್ತೆಯನ್ನು ದಾಟಬೇಕಿದೆ. ಸಂಚಾರ ದಟ್ಟಣೆ ಹೆಚ್ಚಿರುವ ಈ ರಸ್ತೆ ದಾಟುವುದು ತುಂಬಾ ಅಪಾಯಕಾರಿಯಾಗಿದೆ.

‘ಹಸಿರು ಮಾರ್ಗ’ದ ಬಹುತೇಕ ನಿಲ್ದಾಣಗಳಲ್ಲಿ ರಸ್ತೆಯ ಎರಡು ಬದಿಯಿಂದಲೂ ಮೆಟ್ರೊ ನಿಲ್ದಾಣ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಎಸ್ಕಲೇಟರ್, ಮೆಟ್ಟಿಲು ಹಾಗೂ ಲಿಫ್ಟ್ ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ, ಪೀಣ್ಯದಿಂದ ದಾಸರಹಳ್ಳಿವರೆಗಿನ ನಾಲ್ಕು ನಿಲ್ದಾಣಗಳ ಒಂದು ಬದಿಯಲ್ಲಿ ಪ್ರವೇಶ ದ್ವಾರವಿಲ್ಲ. ರಸ್ತೆ ದಾಟಲು ಸ್ಕೈವಾಕ್ ಕೂಡ ಇಲ್ಲ. ಆದರೆ, ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಶೋಭಾ ಅಪಾರ್ಟ್‌ಮೆಂಟ್ ಕಡೆ ತೆರಳಲು ಸ್ಕೈವಾಕ್ ನಿರ್ಮಿಸಲಾಗಿದೆ. ಇದು ಕೂಡ ಸ್ಥಳೀಯರ ಹೋರಾಟದ ನಂತರವೇ ನಿರ್ಮಾಣವಾಗಿದೆ. ಸ್ಕೈವಾಕ್‌ನ ಒಂದು ಭಾಗದಲ್ಲಿ ಲಿಫ್ಟ್ ಇದೆ. ಪ್ರಯಾಣಿಕರು ತುಸು ನಿರಾಳವಾಗಿ ಸಂಚರಿಸುತ್ತಿದ್ದಾರೆ.

ದಾಸರಹಳ್ಳಿಯಲ್ಲಿ ಸ್ಕೈವಾಕ್ ನಿರ್ಮಿಸಲು ಕಬ್ಬಿಣದ ಕಂಬ ತಂದು ಹಾಕಿದ್ದರೂ ಕಾಮಗಾರಿ ಚುರುಕು ಪಡೆದಿಲ್ಲ.

ತೆವಳುತ್ತಾ ಸಾಗಿದ ಕಾಮಗಾರಿ: ದಾಸರಹಳ್ಳಿ ನಿಲ್ದಾಣದಲ್ಲಿ ಸೌಂದರ್ಯ ಪ್ಯಾರಡೈಸ್ ಕಡೆಗೆ ರಸ್ತೆ ದಾಟುವುದಕ್ಕಾಗಿ ಸ್ಕೈವಾಕ್ ನಿರ್ಮಿಸಲು ಕಬ್ಬಿಣದ ಕಂಬಗಳನ್ನು ತಂದು ಹಾಕಲಾಗಿದೆ. ಆದರೆ, ಕಾಮಗಾರಿ ಚುರುಕು ಪಡೆದಿಲ್ಲ. ಸಾಮಗ್ರಿಗಳು ಸ್ಥಳದಲ್ಲೇ ಬಿದ್ದಿವೆ. ಇನ್ನು, ಅತ್ಯಂತ ದಟ್ಟಣೆ ಇರುವ ಉಳಿದ ಮೂರು ನಿಲ್ದಾಣಗಳಲ್ಲಿ ಸ್ಕೈವಾಕ್ ಕಾಮಗಾರಿಯೇ ಆರಂಭವಾಗಿಲ್ಲ.

ತುಮಕೂರು ರಸ್ತೆಯ ಎರಡೂ ಬದಿಯಲ್ಲೂ ಹಲವು ಬಡಾವಣೆಗಳಿವೆ. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಕೆಲಸಕ್ಕಾಗಿ ತೆರಳುವ ಕಾರ್ಮಿಕರು, ಸರ್ಕಾರಿ ನೌಕರರು, ವಿದ್ಯಾರ್ಥಿಗಳು ರಸ್ತೆ ದಾಟಿ ನಿಗದಿತ ಸ್ಥಳಕ್ಕೆ ತಲುಪುತ್ತಿದ್ದಾರೆ. ಹೆದ್ದಾರಿಯಲ್ಲಿ ವಾಹನಗಳು ವೇಗವಾಗಿ ಚಲಿಸುತ್ತಿದ್ದು, ರಸ್ತೆ ದಾಟಬೇಕಾದರೆ ಅಪಾಯ ತಂದೊಡ್ಡುತ್ತಿವೆ ಎಂದು ಸ್ಥಳೀಯರು ಅಳಲು ತೋಡಿಕೊಂಡರು.

ವಿಸ್ತರಿತ ಮಾರ್ಗದಲ್ಲೂ ಹೀಗೇ: ನಾಗಸಂದ್ರದಿಂದ ಮಾದಾವರ ದವರೆಗೆ ನಡೆಯುತ್ತಿರುವ (3.14 ಕಿ.ಮೀ) ವಿಸ್ತರಿತ ಮಾರ್ಗ ಮಾರ್ಚ್ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಉದ್ಘಾಟಿಸಲು ಬಿಎಂಆರ್‌ಸಿಎಲ್ ಚಿಂತನೆ ನಡೆಸಿದೆ.

ಈ ಮಾರ್ಗದಲ್ಲಿರುವ ಮಂಜುನಾಥ ನಗರ, ಚಿಕ್ಕಬಿದರಕಲ್ಲು (ಜಿಂದಾಲ್) ಹಾಗೂ ಮಾದಾವರ ನಿಲ್ದಾಣಗಳಲ್ಲೂ ಸ್ಕೈವಾಕ್ ನಿರ್ಮಾಣದ ಲಕ್ಷಣಗಳು ಕಾಣಿಸುತ್ತಿಲ್ಲ. ಹೀಗಾಗಿ ವಿಸ್ತರಿತ ಮಾರ್ಗ ಉದ್ಘಾಟನೆಯ ನಂತರ ಪ್ರಯಾಣಿಕರು ರಾಷ್ಟ್ರೀಯ ಹೆದ್ದಾರಿ ದಾಟಿಯೇ ಮೆಟ್ರೊ ನಿಲ್ದಾಣಕ್ಕೆ ಬರಬೇಕಾಗಬ-ಹುದು ಎಂದು ಪ್ರಯಾಣಿಕರು ಆತಂಕ ವ್ಯಕ್ತಪಡಿಸುತ್ತಾರೆ.

‘ಕ್ರಮ ಕೈಗೊಳ್ಳದ ಬಿಎಂಆರ್‌ಸಿಎಲ್’

ಹಸಿರು ಮಾರ್ಗದಲ್ಲಿ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿಲ್ಲ. ಹೋರಾಟ ನಡೆಸಿದ ಮೇಲೆ ಒಂದು ಸ್ಥಳದಲ್ಲಿ ಮಾತ್ರ ಸ್ಕೈವಾಕ್ ನಿರ್ಮಿಸಲಾಗಿದೆ. ದಾಸರಹಳ್ಳಿಯಲ್ಲೂ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಬೇಕು. ಸ್ಕೈವಾಕ್ ನಿರ್ಮಿಸುವ ಜವಾಬ್ದಾರಿ ಬಿಎಂಆರ್‌ಸಿಎಲ್‌ನದ್ದು. 2016ರಲ್ಲಿಯೇ ಮನವಿ ಸಲ್ಲಿಸಿದ್ದರೂ ಮೆಟ್ರೊ ಅಧಿಕಾರಿಗಳು ಇದುವರೆಗೂ ಕ್ರಮ ಕೈಗೊಂಡಿಲ್ಲ. ಜಾಲಹಳ್ಳಿಯಲ್ಲಿ ಪ್ರತಿನಿತ್ಯ ಸಾವಿರಾರು ಜನರು ಹೆದ್ದಾರಿ ದಾಟಿ ಒಂದು ಬದಿಯಿಂದ ಮತ್ತೊಂದು ಬದಿಗೆ ತಲುಪುತ್ತಿದ್ದಾರೆ. ಈ ಸ್ಥಳದಲ್ಲಿ ಅಂಡರ್‌ಪಾಸ್ ಕಾಮಗಾರಿ ಸಹ ಸ್ಥಗಿತಗೊಂಡಿದೆ. ಕಟ್ಟಡ ತೆರವು ಬಿಟ್ಟರೆ ಬೇರೆ ಕಾಮಗಾರಿ ಚುರುಕು ಪಡೆದಿಲ್ಲ.

ಧರ್ಮಶ್ರೀ ಮಂಜುನಾಥ್, ದಾಸರಹಳ್ಳಿ

ಹೆದ್ದಾರಿ: ಭೂಸ್ವಾಧೀನದ ಸಮಸ್ಯೆ

ಮೆಟ್ರೊ ಮಾರ್ಗದ ಬಳಿಯೇ ಪೀಣ್ಯ ಮೇಲ್ಸೇತುವೆ ಹಾದು ಹೋಗಿದ್ದು ರಸ್ತೆಯ ಎರಡೂ ಬದಿಯಲ್ಲೂ ಮೆಟ್ರೊ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ನಗರದ ಒಳಗೆ ಹಾದುಹೋಗಿರುವ ತುಮಕೂರು ರಸ್ತೆ ಅತ್ಯಂತ ಕಿರಿದಾಗಿದೆ. ಎರಡು ಬದಿಯಲ್ಲೂ ಕಟ್ಟಡಗಳಿದ್ದು ಈ ಮಾರ್ಗ ನಿರ್ಮಾಣದ ವೇಳೆ ಬಿಎಂಆರ್‌ಸಿಎಲ್‌ಗೆ ಭೂಸ್ವಾಧೀನ ಕಷ್ಟಕರ ಆಗಿತ್ತು. ಈಗ ಪ್ರಯಾಣಿಕರ ಸಂಕಷ್ಟ ತೀವ್ರಗೊಂಡಿದೆ.

ಜನವರಿ ವೇಳೆಗೆ ಪೀಣ್ಯ ಮೇಲ್ಸೇತುವೆ ದುರಸ್ತಿ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಅದಾದ ಮೇಲೆ ಮೇಲ್ಸೇತುವೆಯಲ್ಲಿ ಬೃಹತ್ ವಾಹನ ಸಂಚಾರಕ್ಕೆ ಅನುಮತಿ ಸಿಗಲಿದೆ. ಆಗ ಕೆಳರ-ಸ್ತೆಯಲ್ಲಿ ದಟ್ಟಣೆ ಕೊಂಚ ತಗ್ಗುವ ಸಾಧ್ಯತೆಯಿದೆ ಎಂದು ಸ್ಥಳೀಯರು ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಬೆಂಗಳೂರಿನ ಡಿಕೆನ್ಸನ್ ರಸ್ತೆಯಲ್ಲಿ

ಜೋಸ್ಕೊ ವಿಶ್ವ ದರ್ಜೆಯ ಅದ್ಧೂರಿ ಮಳಿಗೆ ಆರಂಭ

ಬೆಂಗಳೂರು: ಭಾರತದ ನಂ.1 ಚಿನ್ನಾಭರಣ ವ್ಯಾಪಾರ ಸಮೂಹ ಸಂಸ್ಥೆ ‘ಜೋಸ್ಕೊ ಜ್ಯುವೆಲರ್ಸ್’ನ ವಿಶ್ವ ದರ್ಜೆಯ ಅದ್ಧೂರಿ ಮತ್ತೊಂದು ಮಳಿಗೆ ಬೆಂಗಳೂರು ನಗರದ ಡಿಕೆನ್ಸನ್ ರಸ್ತೆಯಲ್ಲಿ ನ. 5 ರಂದು ಭಾನುವಾರ ಆರಂಭಗೊಂಡಿದೆ.

ಖ್ಯಾತ ನಟ ಮೋಹನ್‌ಲಾಲ್ ಅವರು ನಟಿ ಶ್ರೀಮತಿ ಆಶಿಕಾ ರಂಗನಾಥ್ ಅವರೊಂದಿಗೆ ನೂತನ ಶೋರೂಂ ಅನ್ನು ಉದ್ಘಾಟಿಸುವ ಮೂಲಕ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಜೋಸ್ಕೊ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಟೋನಿ ಜೋಸ್ ಅವರು ಮಾತನಾಡಿ, ಮಳಿಗೆ ಉದ್ಘಾಟನೆ ದಿನವಾದ ಇಂದು ಗ್ರಾಹಕರಿಗೆ ಉತ್ತಮ ಶಾಪಿಂಗ್ ಅನುಭವ ನೀಡುವುದರ ಜತೆ ಅತ್ಯುತ್ತಮ ಆಫರ್ ಹಾಗೂ ಆಶ್ಚರ್ಯಕರ ಕೊಡುಗೆಗಳ ವ್ಯವಸ್ಥೆಯನ್ನೂ ಮಾಡಿದೆ ಎಂದರು.

15ರವರೆಗೆ ಕೊಡುಗೆಗಳು: ಜೋಸ್ಕೊ ಗ್ರಾಹಕರಿಗೆ ಲಕ್ಕಿ ಡ್ರಾ ಮೂಲಕ ಬಂಪರ್ ಬಹುಮಾನವಾಗಿ ವಜ್ರದ ನೆಕ್ಲೆಸ್ ಸೆಟ್ ಗೆಲ್ಲುವ ಸುವರ್ಣಾವಕಾಶ ಕಲ್ಪಿಸಿದೆ. ₹ 50,000 ಮೇಲ್ಪಟ್ಟ ಚಿನ್ನಾಭರಣ ಖರೀದಿಸುವ ಗ್ರಾಹಕರಿಗೆ ಉಚಿತ ಚಿನ್ನದ ನಾಣ್ಯ, ₹ 1.0 ಲಕ್ಷನಂತೆ ವಜ್ರ ಮತ್ತು ಕತ್ತರಿಸದ ವಜ್ರದ ಆಭರಣಗಳ ಪ್ರತಿ ಖರೀದಿ ಮೇಲೆ ಎರಡು ಉಚಿತ ಚಿನ್ನದ ನಾಣ್ಯ ಸೇರಿದಂತೆ ಇತರ ಕೊಡುಗೆಗಳು ಇರಲಿವೆ. ಉದ್ಘಾಟನೆ ಸಂದರ್ಭದ ವಿಶೇಷ ಉಡುಗೊರೆಗಳು ಹಾಗೂ ದೀಪಾವಳಿ ಸ್ವೀಟ್ ಬಾಕ್ಸ್‌ಗಳನ್ನು ಪಡೆಯಬಹುದಾಗಿದೆ. ಈ ಕೊಡುಗೆಗಳು ನ.15 ರವರೆಗೆ ಮಾತ್ರ ಲಭ್ಯ.

ನಾಲ್ಕು ಮಹಡಿಗಳ ಈ ಹೊಸ ಮಳಿಗೆಯು ಸುಸಜ್ಜಿತ ಮತ್ತು ನಾವಿನ್ಯತೆಯಿಂದ ಕೂಡಿದ್ದು, ಪ್ರತಿಯೊಂದು ಮಹಡಿಯೂ ಚಿನ್ನ, ವಜ್ರ, ಪ್ಲಾಟಿನಂ ಮತ್ತು ಬೆಳ್ಳಿ ಆಭರಣಗಳಿಗೆ ಪ್ರತ್ಯೇಕವಾಗಿ ಮೀಸಲಿಡಲಾಗಿದೆ. ಅಲ್ಲದೆ, ಬೆಂಗಳೂರಿನ ಗ್ರಾಹಕರ ಅಭಿರುಚಿಗೆ ತಕ್ಕಂತೆ ವೈವಿಧ್ಯಮಯ ಆಭರಣ ಆಯ್ಕೆಗಳು ಮತ್ತು ಅವರ ಆಸಕ್ತಿಗಳನ್ನು ಪೂರೈಸಲು ‘ಫಾರ್ ಎವರ್ ಗ್ಯಾಲರಿ, ಡಿಸೈನರ್ ಗ್ಯಾಲರಿ, ಡೈಮಂಡ್ ಜೋನ್, ಎಕ್ಸೋಟಿಕ್ ಜ್ಯುವೆಲರಿ ಮತ್ತು ಸಿಲ್ವರ್ ಆರ್ಕೇಡ್’ಗಳನ್ನು ತೆರೆಯಲಾಗಿದೆ.

ಚಿನ್ನ ಮತ್ತು ವಜ್ರಾಭರಣದಲ್ಲಿ ಅತ್ಯುತ್ತಮ ಆಯ್ಕೆಗಳನ್ನು ನೀಡುವುದರ ಜತೆಗೆ ಜೋಸ್ಕೊದ ಈ ಮಳಿಗೆ ಅಂತರರಾಷ್ಟ್ರೀಯ ಮಟ್ಟದ ಆಭರಣ ಶಾಪಿಂಗ್ ಅನುಭವವನ್ನೂ ಸಹ ಒದಗಿಸುತ್ತದೆ. ಈ ನಮ್ಮ ಶೋರೂಂ ಎಲ್ಲ ಭಾನುವಾರಗಳಂದು ತೆರೆದಿರುತ್ತದೆ. ಪಾರ್ಕಿಂಗ್ ಸೌಲಭ್ಯ ಹೊಂದಿದೆ ಎಂದು ಟೋನಿ ಜೋಸ್ ವಿವರಿಸಿದ್ದಾರೆ.

ಅದ್ಭುತ ಆಭರಣ ಸಂಗ್ರಹ: ಈ ಶೋರೂಂನಲ್ಲಿ ಮದುವೆಗಳಲ್ಲಿ ಮೆರಗು ನೀಡುವ ಸಾಂಪ್ರದಾಯಿಕ ಮತ್ತು ಟ್ರೆಂಡಿ ಬ್ರೈಡಲ್ ಸೆಟ್‌ಗಳು, ನಾವಿನ್ಯತೆ ಮತ್ತು ವೈವಿಧ್ಯತೆ ಬೇಕೆನ್ನುವವರಿಗೆ ಪ್ರಮಾಣೀಕೃತ ಪ್ಲಾಟಿನಂ ಆಭರಣಗಳು, ಕಾರವಾರ, ಕುಂದನ್, ನವಿಲು, ಮಾಲ್ವಾ ಮತ್ತು ಟರ್ಕಿಶ್ ವಿನ್ಯಾಸ ಮಾದರಿಯ ಸಾಟಿಯಿಲ್ಲದ ಅದ್ಭುತ ಆಭರಣಗಳ ಸಂಗ್ರಹವಿದೆ. ಜೋಸ್ಕೊ ವಿಶಿಷ್ಟ ‘ಡಿಸೈನರ್ ಗ್ಯಾಲರಿ’ ಗ್ರಾಹಕರ ನೆಚ್ಚಿನ ಪಾರಂಪರಿಕ, ಚೆಟ್ಟಿನಾಡ್, ನಾಗಾಸ್, ಲಕ್ಷ್ಮಿ, ಸಿಂಗಾಪುರ, ಬಾಂಬೆ ಮತ್ತು ಕಲ್ಕತ್ತಾ ಮಾದರಿಯ ವಿನ್ಯಾಸಗಳಿಂದ ಅಲಂಕರಿಸಲಾಗಿದೆ.

ಗ್ರಾಹಕರ ಬಜೆಟ್‌ಗೆ ಸರಿಹೊಂದುವ ಮತ್ತು ಅತ್ಯಧಿಕ ಮರು ಮಾರಾಟ ಮೌಲ್ಯದೊಂದಿಗೆ ಬರುವ 100% GIA, IGI, SGL ಪ್ರಮಾಣೀಕೃತ ವಜ್ರಾಭರಣಗಳನ್ನು (5ಸಿ: ಕಟ್, ಕಲರ್, ಕ್ಲ್ಯಾರಿಟಿ, ಕ್ಯಾರೆಟ್ ಸರ್ಟಿಫಿಕೇಷನ್ನೊಂದಿಗೆ) ಖರೀದಿಸಲು ಜೋಸ್ಕೊ ಸೂಕ್ತ ಸ್ಥಳವಾಗಿದೆ. ಜೋಸ್ಕೊ ಜ್ಯುವೆಲರ್ಸ್‌ನ ಜಯನಗರದ ಮಳಿಗೆ ನವೀಕರಿಸಿದ್ದು, ಡಿಸೆಂಬರ್ 9ರಂದು ತೆರೆಯಲಿದೆ.

ಜೋಸ್ಕೊ ಜ್ಯುವೆಲರ್ಸ್ ನೂತನ ಮಳಿಗೆಯನ್ನು ಖ್ಯಾತ ನಟ ಮೋಹನ್ ಲಾಲ್, ನಟಿ ಶ್ರೀಮತಿ ಆಶಿಕಾ ರಂಗನಾಥ್ ಮತ್ತು ಶ್ರೀಮತಿ ಮರೀನಾ ಮೈಕೆಲ್ ಅವರೊಂದಿಗೆ ಉದ್ಘಾಟಿಸಿದರು. ಜೋಸ್ಕೊ ಸಮೂಹದ ಎಂಡಿ ಮತ್ತು ಸಿಇಒ ಟೋನಿ ಜೋಸ್ ಹಾಗೂ ಇತರರು ಉಪಸ್ಥಿತರಿದ್ದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬಿಬಿಎಂಪಿ: ₹3 ಸಾವಿರ ಕೋಟಿ ತೆರಿಗೆ ಸಂಗ್ರಹ • ಕಳೆದ ಸಾಲಿಗೆ ಹೋಲಿಸಿದರೆ ದಾಖಲೆ ಸಂಗ್ರಹ

ಆಸ್ತಿ ಮಾಲೀಕರಿಗೆ 'ಮೊಬೈಲ್ ನೋಟಿಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದಲ್ಲಿ ಏರಿಕೆ ಕಂಡಿದೆ. ಪೂರ್ಣ ಗುರಿ ಸಾಧಿಸುವ ಹಿನ್ನೆಲೆಯಲ್ಲಿ ಮಾಲೀಕರಿಗೆ 'ಮೊಬೈಲ್ ನೋಟಿಸ್' ಜಾರಿ ಮಾಡಲಾಗುತ್ತಿದೆ.

ಅ.31ರ ಅಂತ್ಯಕ್ಕೆ ಶೇ 64.50ರಷ್ಟು ತೆರಿಗೆ ಸಂಗ್ರಹವಾಗಿದ್ದು, ಬಜೆಟ್‌ನಲ್ಲಿ ದಾಖಲಿಸಿರುವ ಗುರಿಯಂತೆ ಇನ್ನೂ ₹1,619 ಕೋಟಿ ಸಂಗ್ರಹವಾಗಬೇಕಿದೆ. ಕಳೆದ ಆರ್ಥಿಕ ವರ್ಷಕ್ಕಿಂತಲೂ ₹372 ಕೋಟಿ ಹೆಚ್ಚಿನ ಗುರಿಯನ್ನು ಈ ವರ್ಷ ಹೊಂದಲಾಗಿದೆ.

2022–23ನೇ ಸಾಲಿನಲ್ಲಿ ಜನವರಿ ವೇಳೆಗೆ ₹2,890 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲಾಗಿತ್ತು. ಈ ವರ್ಷ ಅಕ್ಟೋಬರ್ ಅಂತ್ಯಕ್ಕೆ ₹3 ಸಾವಿರ ಕೋಟಿಯ ಗಡಿ ತಲುಪಲಾಗಿದೆ. ಇದು ದಾಖಲೆ ಸಂಗ್ರಹವಾಗಿದ್ದರೂ, ₹1500 ಕೋಟಿ ಇನ್ನೂ ಬಾಕಿ ಇದೆ.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲೀಕರ ಮೊಬೈಲ್‌ಗೆ ಒಂದು ಬಾರಿ ಸಂದೇಶ ಕಳುಹಿಸಲಾಗುತ್ತಿತ್ತು. ಆದರೆ, ಈ ವರ್ಷ ಪದೇಪದೇ ಮೊಬೈಲ್‌ಗೆ ಎಸ್‌ಎಂಎಸ್ ಕಳುಹಿಸಿ, ತೆರಿಗೆ ಪಾವತಿಸಲು ಮನವಿ ಮಾಡಿಕೊಳ್ಳಲಾಗುತ್ತಿದೆ. ಅಲ್ಲದೆ, ನಿಯಮಗಳಂತೆ ಮುಂದಿನ ಕ್ರಮ ಕೈಗೊಳ್ಳಲೂ ವಲಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

'ಆಸ್ತಿ ತೆರಿಗೆಯು ನಗರ ಪಾಲಿಕೆಯ ಪ್ರಾಥಮಿಕ ಮತ್ತು ಪ್ರಮುಖ ಆದಾಯದ ಮೂಲವಾಗಿದೆ. ಎಲ್ಲ ಆಸ್ತಿ ಮಾಲೀಕರು ತಮ್ಮ ಸ್ವತ್ತಿಗೆ ತೆರಿಗೆಯನ್ನು ತ್ವರಿತವಾಗಿ ಪಾವತಿಸಬೇಕು. ಬಾಕಿ ಉಳಿಸಿಕೊಂಡಿರುವ ಮಾಲೀಕರಿಗೆ ಎಸ್‌ಎಂಎಸ್ ಸಂದೇಶ ಮತ್ತು ಪತ್ರಗಳು/ನೋಟಿಸ್‌ಗಳನ್ನು ಕಳುಹಿಸಲಾಗುತ್ತಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಆಸ್ತಿತೆರಿಗೆ ಪಾವತಿಸಲು ಆನ್‌ಲೈನ್ ಲಿಂಕ್ https://bbmptax.karnataka.gov.in ಅನ್ನು ಬಳಸಬಹುದು. ಯಾವುದೇ ಪ್ರಶ್ನೆಗಳಿದ್ದರೆ, ಮಾಹಿತಿಯ ಅಗತ್ಯವಿದ್ದರೆ ಸಹಾಯವಾಣಿ 1533 ಕರೆ ಮಾಡಬಹುದು ಎಂದು ಹೇಳಿದರು.

ವಲಯ	ಗುರಿ	ಸಂಗ್ರಹ	ಬಾಕಿ
(₹ ಕೋಟಿಗಳಲ್ಲಿ) 2023ರ ಅ.31ರಂತೆ			
ಬೊಮ್ಮನಹಳ್ಳಿ	501	316.44	184.56
ದಾಸರಹಳ್ಳಿ	164	83.55	80.45
ಪೂರ್ವ	764	532.9	231.1
ಮಹದೇವಪುರ	1238	809.33	428.67
ಆರ್.ಆರ್. ನಗರ	345	200.33	144.67
ದಕ್ಷಿಣ	627	436.19	190.81
ಪಶ್ಚಿಮ	493	302.29	190.71
ಯಲಹಂಕ	429	260.66	168.34
ಒಟ್ಟು	4561	2941.69	1619.31

ಹಿಂದಿನ ವರ್ಷಗಳಲ್ಲಿ ಆಸ್ತಿ ತೆರಿಗೆ ಸಂಗ್ರಹ

₹2,800 ಕೋಟಿ	2020–21
₹3,110 ಕೋಟಿ	2021–22
₹3,340.86 ಕೋಟಿ	2022–23

ಆಸ್ತಿ ತೆರಿಗೆ ಪರಿಶೀಲನೆ ಆರಂಭ

ನಗರದಲ್ಲಿರುವ ಆಸ್ತಿಗಳನ್ನು ಭೌತಿಕವಾಗಿ ಪರಿಶೀಲಿಸಿ, ಅದಕ್ಕೆ ಸರಿಯಾದ ತೆರಿಗೆಯನ್ನು ಪಾವತಿಸುವಂತೆ 'ಡಿಮಾಂಡ್ ನೋಟಿಸ್' ನೀಡುವ ಕಾರ್ಯವನ್ನು ನ.1ರಿಂದಲೇ ಬಿಬಿಎಂಪಿ ಆರಂಭಿಸಿದೆ.

ಸ್ವಯಂ ಘೋಷಿತ ತೆರಿಗೆ ಪದ್ಧತಿಯಲ್ಲಿ ಮಾಲೀಕರು ತೆರಿಗೆ ಪಾವತಿಸುತ್ತಿದ್ದಾರೆ. ಆದರೆ, ಇದರಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಆದ್ದರಿಂದ ಬಿಬಿಎಂಪಿಯ ಕಂದಾಯ ಅಧಿಕಾರಿಗಳು ಪ್ರತಿ ಕಟ್ಟಡವನ್ನು ಭೌತಿಕವಾಗಿ ಪರಿಶೀಲಿಸಿ, ಅದರ ತೆರಿಗೆ ನಿಗದಿ ಮಾಡಿ ಡಿಜಿಟಲೀಕರಣ ಮಾಡುತ್ತಿದ್ದಾರೆ. ವಲಯವಾರು ನಿಗದಿಯಾಗುವ ಈ ತೆರಿಗೆಯನ್ನೇ ಪಾವತಿಸಬೇಕು ಎಂದು ಸೂಚಿಸಲಾಗುತ್ತಿದೆ.

'ಕಟ್ಟಡದ ತೆರಿಗೆಯನ್ನು ಮರುನಿಗದಿ ಮಾಡಿದಾಗ ಅದು ಮಾಲೀಕರ ಲಾಗಿನ್‌ನಲ್ಲಿ ಕಾಣುತ್ತಿಲ್ಲ. 'ಡಿಮಾಂಡ್ ನೋಟಿಸ್'ನಲ್ಲಿರುವುದು ಆನ್‌ಲೈನ್ ಬದಲಾಗುತ್ತಿಲ್ಲ. ಹೀಗಾಗಿ ಗೊಂದಲ ಸೃಷ್ಟಿಯಾಗಿದೆ. ಮಾಲೀಕರು ಹಾಗೂ ಅಧಿಕಾರಿಗಳ ನಡುವೆ ವಾಗ್ವಾದಗಳು ನಡೆಯುತ್ತಿವೆ' ಎಂದು ಅಧಿಕಾರಿಗಳು ಹೇಳಿದರು.

'ಕಂದಾಯ ನಿರೀಕ್ಷಕ (ಆರ್‌ಐ) ಹಾಗೂ ತೆರಿಗೆ ನಿರೀಕ್ಷಕರು (ಟಿಐ) ಪ್ರತಿ ದಿನ ತಲಾ 25 ಆಸ್ತಿಗಳನ್ನು ಪರಿಶೀಲಿಸಿ, ವಾಸ್ತವದ ತೆರಿಗೆಯನ್ನು ನಿಗದಿಪಡಿಸಬೇಕು ಎಂದು ಗುರಿ ನೀಡಲಾಗಿದೆ. ಆರು ಸಾವಿರ ಆಸ್ತಿಗಳಿಗೆ ಒಂದು ವೃತ್ತವನ್ನಾಗಿಸಿದ್ದು, ಅದನ್ನು ಆರ್‌ಐ ಮತ್ತು ಟಿಐ ನಿರ್ವಹಿಸಬೇಕು. ಇದರ ಜೊತೆಗೆ ವಿಧಾನಪರಿಷತ್ ಚುನಾವಣೆ, ಲೋಕಸಭೆ ಚುನಾವಣೆಗೆ ಮತದಾರರ ಪಟ್ಟಿ ತಯಾರಿಕೆ ಕೆಲಸ, ಆಸ್ತಿ– ಜಾಹೀರಾತು ವಿಭಾಗದ ಕೆಲಸವೂ ನಮಗಿದೆ. ಒತ್ತಡದ ಕಾರ್ಯವಾಗಿದ್ದು, ರಾತ್ರಿ 10ರವರೆಗೆ ಕೆಲಸ ಮಾಡಲಾಗುತ್ತಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ ಅಳಲು ತೋಡಿಕೊಂಡರು.

'ಚಿರತೆ ಹಾವಳಿ: ನಗರಕ್ಕೆ ಪ್ರತ್ಯೇಕ ಕ್ಷಿಪ್ರ ಕಾರ್ಯಪಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಸತಿ ಪ್ರದೇಶಗಳಲ್ಲಿ ಪದೇ ಪದೇ ಚಿರತೆಗಳು ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರು ನಗರಕ್ಕೆ ಪ್ರತ್ಯೇಕವಾದ ಕ್ಷಿಪ್ರ ಕಾರ್ಯಪಡೆವೊಂದನ್ನು ರಚಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

ಈ ಬಾರಿ ಮಳೆಯ ಅಭಾವದ ಕಾರಣ ಆಹಾರ ಹುಡುಕಿಕೊಂಡು ಕಾಡು ಪ್ರಾಣಿಗಳು ನಾಡಿಗೆ ಹೆಚ್ಚಾಗಿ ಬರುತ್ತಿವೆ. ಅದರಲ್ಲೂ ಬೆಂಗಳೂರು ನಗರದ ಹೊರ ವಲಯದಲ್ಲಿ ಕಾಡು ಮತ್ತು ಬೆಟ್ಟಗುಡ್ಡ ಇರುವ ಪ್ರದೇಶದಲ್ಲಿ ಚಿರತೆಗಳು ಕಾಣಿಸಿಕೊಳ್ಳುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿವೆ. ಆದ್ದರಿಂದ, ಬೆಂಗಳೂರಿನಲ್ಲಿ ಚಿರತೆ ಕ್ಷಿಪ್ರ ಕಾರ್ಯಪಡೆಯೊಂದನ್ನು ರಚಿಸಿ, ವನ್ಯ ಮೃಗಗಳು ನಾಡಿಗೆ ಬಂದರೆ ಕೂಡಲೇ ಸೆರೆ ಹಿಡಿದು ಕಾಡಿಗೆ ಅಥವಾ ಪುನರ್ವಸತಿ ಕೇಂದ್ರಕ್ಕೆ ಕಳುಹಿಸುವ ಕಾರ್ಯವನ್ನು ತ್ವರಿತವಾಗಿ ಮಾಡುವಂತೆ ಖಂಡ್ರೆ ಸೂಚಿಸಿದ್ದಾರೆ.

ಈಗಾಗಲೇ ಇರುವ ಐದು ಆನೆ ಕ್ಷಿಪ್ರ ಪಡೆಗಳ ಜೊತೆಗೆ ಬನ್ನೇರುಘಟ್ಟ ಮತ್ತು ರಾಮನಗರದಲ್ಲಿ ತಲಾ ಒಂದರಂತೆ ಎರಡು ಕಾರ್ಯಪಡೆಗಳನ್ನು ಹೆಚ್ಚುವರಿಯಾಗಿ ರಚಿಸಲಾಗಿದೆ. ಹೆಚ್ಚು ಕಾಡಿರುವ ಮತ್ತು ಚಿರತೆಗಳು, ಕರಡಿಗಳು ಇರುವ ಬೆಟ್ಟಗುಡ್ಡ ಪ್ರದೇಶದಲ್ಲಿ ಕನಿಷ್ಠ ಮೂರು ಜಿಲ್ಲೆಗಳಿಗೆ ಒಂದರಂತೆ ಕಾರ್ಯಪಡೆ ರಚಿಸಿ, ಅತ್ಯಾಧುನಿಕ ಸಲಕರಣೆಗಳನ್ನು ಒದಗಿಸಬೇಕು. ಸೂಕ್ತ ತರಬೇತಿ ಮತ್ತು ಅಣಕು ಕಾರ್ಯಾಚರಣೆಗಳನ್ನೂ ನಡೆಸಿ ಸಿಬ್ಬಂದಿಯನ್ನು ಸಜ್ಜುಗೊಳಿಸುವಂತೆ ಸೂಚಿಸಿದ್ದಾರೆ.

'ಸ್ಥಳೀಯ ಸಮಸ್ಯೆಗಳು ಜೀವಂತ'

ಗಡಿನಾಡ ಕನ್ನಡ ಹೋರಾಟಗಾರರಿಗೆ ಸುವರ್ಣ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಎಂದು ನಾಮಕರಣಗೊಂಡು 50ರ ಸಂಭ್ರಮದಲ್ಲಿ ನಾವಿದ್ದೇವೆ. ಈ ಹೊತ್ತಿನಲ್ಲಿ ನಾವೆಲ್ಲರೂ ಸೇರಿ ನವಕರ್ನಾಟಕ ಕಟ್ಟುವತ್ತ ದಿಟ್ಟ ಹೆಜ್ಜೆ ಇಡಬೇಕಾಗಿದೆ' ಎಂದು ಲೇಖಕ ಸತೀಶ್ ಕುಲಕರ್ಣಿ ಕರೆ ನೀಡಿದರು.

ಕನ್ನಡ ಜನಶಕ್ತಿ ಕೇಂದ್ರ, ನಗರದಲ್ಲಿ ಸೋಮವಾರ ಆಯೋಜಿಸಿದ್ದ ಕರ್ನಾಟಕ ನಾಮಕರಣ 50ರ ಸಂಭ್ರಮ, ಗಡಿನಾಡ ಕನ್ನಡ ಹೋರಾಟಗಾರರಿಗೆ ಸುವರ್ಣ ಪುರಸ್ಕಾರ ಹಾಗೂ ಶಾಂತವೇರಿ ಗೋಪಾಲಗೌಡ ನೆನಪಿನ ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸ್ಥಳೀಯ ಹೋರಾಟದ ಚರಿತ್ರೆಗಳನ್ನು ಎಂದೂ ಮರೆಯಬಾರದು. ರಾಜ್ಯದ ಇತಿಹಾಸವನ್ನು ಇಂದಿನ ಯುವಪೀಳಿಗೆಗೆ ಮನವರಿಕೆ ಮಾಡಿಕೊಡಬೇಕು ಎಂದು ಕರೆ ನೀಡಿದರು.

ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷ ಕಳೆದಿದ್ದರೂ ಸ್ಥಳೀಯ ಸಮಸ್ಯೆಗಳು ಹಾಗೆಯೇ ಜೀವಂತವಾಗಿವೆ. ಗಡಿಪ್ರದೇಶದಲ್ಲೂ ಸಮಸ್ಯೆ ಇದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಭಾಷೆ ಹಾಗೂ ಗಡಿ ಪ್ರದೇಶ ಉಳಿಸುವಲ್ಲಿ ಗಡಿನಾಡ ಕನ್ನಡ ಹೋರಾಟಗಾರರ ಕೊಡುಗೆ ಅಮೋಘವಾದದ್ದು ಎಂದು ಹೇಳಿದರು.

ನಗರದಲ್ಲಿ ಸೋಮವಾರ ಕನ್ನಡ ಜನಶಕ್ತಿ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಗಡಿನಾಡ ಕನ್ನಡ ಹೋರಾಟಗಾರರಾದ ಅ.ಕ್ಯ.ಸೋಮಶೇಖರ್, ಚಾ.ರಂ.ಶ್ರೀನಿವಾಸಗೌಡ, ಅಶೋಕ್ ಚಂದರಗಿ, ಕೆ.ಜಿ. ಶರಣಪ್ಪ ಗದಲೇಗಾಂವ ಅವರಿಗೆ 'ಸುವರ್ಣ ಪುರಸ್ಕಾರ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಕನ್ನಡ ಜನಶಕ್ತಿ ಕೇಂದ್ರದ ಪ್ರಧಾನ ಕಾರ್ಯದರ್ಶಿ ಸಿ.ಪುಟ್ಟರಾಜು, ಅಧ್ಯಕ್ಷ ಸಿ.ಕೆ.ರಾಮೇಗೌಡ, ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಜಪ್ಪ ದಳವಾಯಿ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ, ಸಾಹಿತಿ ಪಿ.ಮಲ್ಲಿಕಾರ್ಜುನಪ್ಪ, ಲೇಖಕ ಸತೀಶ್ ಕುಲಕರ್ಣಿ ಇದ್ದರು —ಪ್ರಜಾವಾಣಿ ಚಿತ್ರ

'ಆದಿಜಾಂಬವರಿಗೆ ಶೇ 6.75 ಒಳಮೀಸಲಾತಿ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯ ಶಿಫಾರಸಿನಂತೆ ಆದಿಜಾಂಬವ ಸಮುದಾಯಕ್ಕೆ ಒಳ ಮೀಸಲಾತಿಯನ್ನು ಕೂಡಲೇ ನೀಡಬೇಕು' ಎಂದು ಕರ್ನಾಟಕ ಆದಿಜಾಂಬವ (ಮಾದಿಗ) ಸಂಘಟನೆಗಳ ಒಕ್ಕೂಟ ಒತ್ತಾಯಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಜಂಬೂದ್ವೀಪ ಸಿದ್ಧರಾಜು, 'ಹಿಂದಿನ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಯವರ ಮೀಸಲಾತಿಯನ್ನು ಶೇ 15ರಿಂದ 17ಕ್ಕೆ ಹೆಚ್ಚಿಸಿತ್ತು. ಹೆಚ್ಚಿಸಲಾದ ಶೇ 2 ರಲ್ಲಿ ಶೇ.0.75ರಷ್ಟನ್ನು ಆದಿಜಾಂಬವ ಸಮುದಾಯಕ್ಕೆ ನೀಡಿ, ಒಳಮೀಸಲಾತಿಯ ಒಟ್ಟು ಪ್ರಮಾಣವನ್ನು ಶೇ 6.75ಕ್ಕೆ ಹೆಚ್ಚಿಸಬೇಕು. ಪಿಟಿಸಿಎಲ್ ಕಾಯ್ದೆಯ ತಿದ್ದುಪಡಿಗೆ ಕೂಡಲೇ ನಿಯಮಗಳನ್ನು ರೂಪಿಸಬೇಕು' ಎಂದು ಆಗ್ರಹಿಸಿದರು.

'1959ರಲ್ಲಿ ಯಶವಂತಪುರ ಹೋಬಳಿ ಜಾರಕಬಂಡೆ ಕಾವಲ್ ಸರ್ವೆ ನಂ.1ರಲ್ಲಿ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ಸಂಘಕ್ಕೆ ಮಂಜೂರಾಗಿದ್ದ ಭೂಮಿ ಅತಿಕ್ರಮಣಕ್ಕೆ ಒಳಗಾಗಿದೆ. ಅದನ್ನು ಕೂಡಲೇ ಬಿಡಿಸಿಕೊಡಬೇಕು. ಚರ್ಮೋದ್ಯೋಗ ಮತ್ತು ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಆದಿಜಾಂಬವ ಸಮುದಾಯದವರಿಗೆ ಸರ್ಕಾರ 50 ಸಾವಿರ ನಿವೇಶನಗಳನ್ನು ವಿತರಿಸಬೇಕು. 1998ಕ್ಕೂ ಮುಂಚಿತವಾಗಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಸಮುದಾಯದ ರೈತರಿಗೆ ಸಾಗುವಳಿ ಚೀಟಿ ನೀಡಬೇಕು' ಎಂದರು.

'ದಲಿತರ ಮೇಲಿನ ದೌರ್ಜನ್ಯ ತಡೆಗೆ ಮಧ್ಯಪ್ರದೇಶದಲ್ಲಿರುವಂತೆ ಪ್ರತ್ಯೇಕ ಪೊಲೀಸ್ ಠಾಣೆಗಳನ್ನು ರಾಜ್ಯದಲ್ಲಿಯೂ ತೆರೆಯಬೇಕು. ಆದಿಜಾಂಬವ ಸಮುದಾಯದ ಆರ್ಥಿಕ ಅಭಿವೃದ್ಧಿಗೆ ಮಹಾರಾಷ್ಟ್ರ ಮಾದರಿಯಲ್ಲಿ ರಸ್ತೆಬದಿ ಮಳಿಗೆಗಳನ್ನು ನೀಡಬೇಕು. ಮೆಟ್ರೊ ಸೇರಿದಂತೆ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಉದ್ಯೋಗ ನೀಡಬೇಕು' ಎಂದರು.



SCAN TO AVAIL GIFT OFFERS
ಆಧಾರ್‌ನ ಆಧಾರದ^ ಮೇಲೆ ಲೋನ್ & ಕ್ಯಾಶ್ EMI
ಅಡಮಾನ ಇಲ್ಲ^
CALL TOLL-FREE 1800 266 0018

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet. ˜Ex-Showroom price of HF100 and Pleasure+ LX in Bengaluru. Festive ex-showroom prices are inclusive of applicable offers on respective models.

AUTHORISED DEALERS - BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. KAMAKSHIPALYA: POORNA MOTORS – PH: 9606922534. BANASHANKARI: SAI HERO - PH: 9289922476. JP NAGAR: SAI HERO, PH: 99002 36280. . BANASWADI: BHAGATH HERO - PH: 9289922738. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. HOSUR ROAD: RT KRISHNA HERO - PH: 9289923177. JIGANI: RT KRISHNA HERO – PH: 8762860999. BYATARAYANAPURA: BIMAL HERO - PH: 9289922863. RT Nagar: Bimal Hero 9535327710. Doddaballapur: Bimal Hero 9742202125. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. **TUMKUR**: SAI HERO - PH: 9289922986. B.H.ROAD – SAI HERO, PH. 7022752841 .TIPTUR: SAI HERO PH. 9164840456. KUNIGAL: SAI HERO - PH: 7022752858. **ALSO AVAILABLE AT: MADIWALA** - 9731660639. **BANASHANKARI** - 9513353864. **BANNERGHATTA ROAD** - 41209619. **KENGERI** - 9739275523. **YELAHANKA** - 28462524, 9341025589. **MYSORE ROAD** - 9611997733. **DEVANAHALLI** - 9964560599. **KANAKAPURA** - 9880212346. **BAGEPALLI** - 9448321421. **SRINIVASPUR** - 9738504002. **SIDLAGHATTA** - 9448237043. **NELAMANGALA** - 7829138449. **PAVAGADA** - 9740324639. **MADHUGIRI** - 9972278989. **VIJAYAPURA**: 9449619920. **SIRA**: 9448417393. **DUNNASANDRA**: 8310166369. **HSR LAYOUT**: 7428893265. **MATHIKERE**: 9035027951. **DOMLUR**: 7353919910- J.P.NAGAR: 9035024274. **RT NAGAR**: 9535327710. **CHANDAPURA**: 9481329064. **ATTIBELE**: 8050609104. **CV RAMAN NAGAR**: 9036745854. **NARAYANAPURA**: 9945472149. **VARTHUR**: 9900877227. **PAPAREDDYPALYA**: 9916678309. **ANEKAL**: 9739519252. **KONANKUNTE**: 9886122251. **SARJAPUR MAIN ROAD**: 87628 60999. **BIDADI**: 9844767719. **RAMANAGARA**: 9663399909. **JIGANI**: 9986498884. **CHIKKANAYAKANAHALLI**: 9880807399. **TURUVEKERE**: 9448403205. **KORATAGERE**: 9731713711. **PERESANDRA**: 9901502049. **VIDYARANYAPURA**: 9606934533.

WT.5663.2023KAN

ಸಹಜೀವನ ನಡೆಸುತ್ತಿದ್ದ ಪಶ್ಚಿಮ ಬಂಗಾಳದ ಸೌಮಿನಿ ದಾಸ್– ಕೇರಳದ ಅಬಿಲ್ ಅಬ್ರಾಹಂ

ಬೆಂಕಿ ಹಚ್ಚಿಕೊಂಡು ಇಬ್ಬರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊತ್ತನೂರು ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಬೆಂಕಿ ಹಚ್ಚಿಕೊಂಡು ಸೌಮಿನಿ ದಾಸ್ (20) ಹಾಗೂ ಅಬಿಲ್ ಅಬ್ರಾಹಂ (29) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಪಶ್ಚಿಮ ಬಂಗಾಳದ ಸೌಮಿನಿ ದಾಸ್ ಹಾಗೂ ಕೇರಳದ ಅಬಿಲ್, ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಒಂದೇ ಫ್ಲ್ಯಾಟ್‌ನಲ್ಲಿ ಸಹಜೀವನ ನಡೆಸುತ್ತಿದ್ದ ಇಬ್ಬರೂ ಭಾನುವಾರ ಸಂಜೆ ಬೆಂಕಿ ಹಚ್ಚಿಕೊಂಡು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿವಾಹಿತರಾಗಿದ್ದ ಸೌಮಿನಿ, ನರ್ಸಿಂಗ್ ವ್ಯಾಸಂಗ ಮಾಡಲು ನಗರಕ್ಕೆ ಬಂದಿದ್ದರು. ನರ್ಸಿಂಗ್ ಮುಗಿಸಿದ್ದ ಅಬಿಲ್, ಸ್ಥಳೀಯ ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರಿಗೂ ಪರಸ್ಪರ ಪರಿಚಯವಾಗಿತ್ತು' ಎಂದು ತಿಳಿಸಿವೆ.

'ಮೂರು ತಿಂಗಳ ಹಿಂದೆಯಷ್ಟೇ ತಮ್ಮೂರಿಗೆ ಹೋಗಿದ್ದ ಸೌಮಿನಿ, ಪುನಃ ಬೆಂಗಳೂರಿಗೆ ವಾಪಸು ಬಂದಿದ್ದರು. ಇತ್ತೀಚೆಗೆ ಪತಿ ಜೊತೆ ಮಾತನಾಡಿದ್ದ ಅವರು, 'ಮದುವೆಯಾದ ದಿನದಿಂದಲೂ ನೀನು ನನಗೆ ಕಿರುಕುಳ ನೀಡುತ್ತಿದ್ದಿಯಾ. ನಿನ್ನ ಜೊತೆ ನಾನು ಇರುವುದಿಲ್ಲ. ನನ್ನ ತಂಟೆಗೆ ಬರಬೇಡ. ನಾನು ಊರಿಗೂ ಬರುವುದಿಲ್ಲ' ಎಂದಿದ್ದರೆಂದು ಹೇಳಲಾಗುತ್ತಿದೆ.'

'ಸೌಮಿನಿ ಬಗ್ಗೆ ಅನುಮಾನಗೊಂಡಿದ್ದ ಪತಿ, ಅವರ ಬಗ್ಗೆ ವಿಚಾರಿಸಿದ್ದರು. ಅಬಿಲ್ ಜೊತೆ ಸೌಮಿನಿ ಸಹಜೀವನ ನಡೆಸುತ್ತಿದ್ದ ಸಂಗತಿ ಗೊತ್ತಾಗಿತ್ತು. ಈ ಬಗ್ಗೆ ಪತ್ನಿಯನ್ನು ತರಾಟೆಗೆ ತೆಗೆದುಕೊಂಡಿದ್ದರು. 'ನಮ್ಮ ಪ್ರೀತಿಯ ವಿಷಯ ಬೇರೆಯವರಿಗೆ ಗೊತ್ತಾಗಿದೆ. ನಮ್ಮನ್ನು ಬದುಕಲು ಬಿಡುವುದಿಲ್ಲ' ಎಂದು ತಿಳಿದ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಕಿ ಹಚ್ಚಿಕೊಂಡಿದ್ದ ಸಂದರ್ಭದಲ್ಲಿ ಇಬ್ಬರೂ ಕೂಗಾಡಿದ್ದರು. ಸ್ಥಳೀಯರು ಸಹಾಯಕ್ಕೆ ಹೋಗಿದ್ದರು. ಅಷ್ಟರಲ್ಲೇ ಇಬ್ಬರ ದೇಹ ಬಹುಪಾಲು ಸುಟ್ಟಿತ್ತು. ಸೌಮಿನಿ ದಾಸ್ ಸ್ಥಳದಲ್ಲೇ ಮೃತಪಟ್ಟಿದ್ದರು. ಉಸಿರಾಡುತ್ತಿದ್ದ ಅಬಿಲ್ ಅವರನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿಯೇ ಅವರು ಮೃತಪಟ್ಟರು' ಎಂದು ತಿಳಿಸಿವೆ.

ಅಪರಾಧ ಸುದ್ದಿಗಳು

ನಕಲಿ ದಾಖಲೆ ಸೃಷ್ಟಿ: ನಾಲ್ವರ ಬಂಧನ

ಬೆಂಗಳೂರು: ಸ್ಥಳೀಯ ವಿಳಾಸದ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದ ಜಾಲವನ್ನು ಭೇದಿಸಿರುವ ಗಂಗಮ್ಮನಗುಡಿ ಠಾಣೆ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಕಮ್ಮಗೊಂಡನಹಳ್ಳಿಯ ನಿವಾಸಿ ಕೃಷ್ಣಮೂರ್ತಿ, ಕುವೇಲ್, ರಹೀಂ ಹಾಗೂ ಖಯಾಮ್ ಬಂಧಿತರು. ಇವರಿಂದ ನಕಲಿ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿ ಕೃಷ್ಣಮೂರ್ತಿ, 'ಶ್ರೀಕೃಷ್ಣ ಕಂಪ್ಯೂಟರ್ಸ್' ಹೆಸರಿನಲ್ಲಿ ಮಳಿಗೆ ಇಟ್ಟುಕೊಂಡಿದ್ದ. ಇತರ ಆರೋಪಿಗಳ ಜೊತೆ ಸೇರಿ ನಕಲಿ ದಾಖಲೆ ಸೃಷ್ಟಿಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಮಳಿಗೆ ಮೇಲೆ ದಾಳಿ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಐವರಿಗೆ ನಕಲಿ ದಾಖಲೆ: 'ಹೊರದೇಶ ಹಾಗೂ ಹೊರ ರಾಜ್ಯಗಳಿಂದ ಬರುತ್ತಿದ್ದವರಿಗೆ ಆರೋಪಿಗಳು, ಸ್ಥಳೀಯ ವಿಳಾಸದ ನಕಲಿ ದಾಖಲೆ ಮಾಡಿಕೊಡುತ್ತಿದ್ದರು. ಇದಕ್ಕಾಗಿ ₹ 500ರಿಂದ ₹ 5,000 ಹಣ ಪಡೆಯುತ್ತಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು. 'ಹೊರದೇಶ– ಹೊರರಾಜ್ಯದವರು ನಕಲಿ ದಾಖಲೆಗಳನ್ನು ಬಳಸಿಕೊಂಡು ಆಧಾರ್, ಪಾಸ್‌ಪೋರ್ಟ್ ಹಾಗೂ ಇತರೆ ದಾಖಲೆಗಳನ್ನು ಪಡೆದಿರುವುದು ಗೊತ್ತಾಗಿದೆ. ನಕಲಿ ದಾಖಲೆ ಪಡೆದಿದ್ದ ಐವರನ್ನು ಪತ್ತೆ ಮಾಡಲಾಗಿದೆ. ಕುವೈತ್ ಹಾಗೂ ಇತರೆ ದೇಶದವರೂ ಆರೋಪಿಗಳಿಂದ ದಾಖಲೆ ಪಡೆದಿದ್ದಾರೆ' ಎಂದರು.

ಲೋಕಾಯುಕ್ತ ಪೊಲೀಸ್ ಸೋಗಿನಲ್ಲಿ ಕರೆ: ಬಂಧನ

ಬೆಂಗಳೂರು: ಭದ್ರಾ ಮೇಲ್ದಂಡೆ ಯೋಜನೆಯ ಶಿರಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರಿಗೆ ಲೋಕಾಯುಕ್ತ ಪೊಲೀಸರ ಹೆಸರಿನಲ್ಲಿ ಕರೆ ಮಾಡಿ ಹಣಕ್ಕೆ ಬೇಡಿಕೆ ಇರಿಸಿದ್ದ ಆರೋಪಿ ತ್ಯಾಗ್‌ರಾಜ್ (68) ಅವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪಟ್ಟೇಗಾರಪಾಳ್ಯದ ನಿವಾಸಿ ತ್ಯಾಗರಾಜ್, ಲೋಕಾಯುಕ್ತ ಎಡಿಜಿಪಿ ಹಾಗೂ ಇನ್‌ಸ್ಪೆಕ್ಟರ್ ಹೆಸರಿನಲ್ಲಿ ಕರೆ ಮಾಡಿ ಬೆದರಿಸಿದ್ದ. ಈ ಸಂಬಂಧ ಎಂಜಿನಿಯರ್ ಕೆ.ಬಿ. ರಾಮದಾಸಪ್ಪ ಅವರು ಇತ್ತೀಚೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರರಿಗೆ ಅ. 27ರಂದು ಕರೆ ಮಾಡಿದ್ದ ಆರೋಪಿ, 'ನಾನು ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್. ನಿಮ್ಮ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಾಗಿದೆ. ಸದ್ಯದಲ್ಲೇ ನಿಮ್ಮ ಕಚೇರಿ ಹಾಗೂ ಮನೆ ಮೇಲೆ ದಾಳಿ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ದಾಳಿ ಮಾಡಬಾರದೆಂದರೆ, ಕೇಳಿದಷ್ಟು ಹಣ ಕೊಡಿ' ಎಂದಿದ್ದ. ಜೊತೆಗೆ, ಲೋಕಾಯುಕ್ತ ಎಡಿಜಿಪಿ ಹೆಸರಿನಲ್ಲೂ ಧ್ವನಿ ಬದಲಾಯಿಸಿ ಮಾತನಾಡಿದ್ದ' ಎಂದು ಮೂಲಗಳು ತಿಳಿಸಿವೆ.

ಪ್ರಯಾಣಿಕರ ಬ್ಯಾಗ್ ಕಳವು ಹೆಡ್ ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಸಾಬಣ್ಣ

ಸಿದ್ದರಾಮ್

ಬೆಂಗಳೂರು: ರೈಲು ಪ್ರಯಾಣಿಕರ ಬ್ಯಾಗ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಹೆಡ್ ಕಾನ್‌ಸ್ಟೆಬಲ್ ಸೇರಿ ಇಬ್ಬರನ್ನು ಕಂಟೋನ್ಮೆಂಟ್ ರೈಲ್ವೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಚಿಕ್ಕಬಳ್ಳಾಪುರ ರೈಲ್ವೆ ಉಪ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಸಿದ್ದರಾಮ್ ರೆಡ್ಡಿ ಹಾಗೂ ಯಾದಗಿರಿ ಜಿಲ್ಲೆಯ ಸಾಬಣ್ಣ (38) ಬಂಧಿತರು. ಇವರಿಂದ ಸದ್ಯ 6 ಮೊಬೈಲ್ ಜಪ್ತಿ ಮಾಡಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಇಬ್ಬರನ್ನೂ ಮುಂದಿನ 10 ದಿನಗಳವರೆಗೆ ಕಸ್ಟಡಿಗೆ ಪಡೆಯಲಾಗಿದೆ' ಎಂದು ರೈಲ್ವೆ ಎಸ್ಪಿ ಎಸ್.ಕೆ. ಸೌಮ್ಯಲತಾ ತಿಳಿಸಿದರು.

'ಹೆಬ್ಬಾಳದ ಮಹಿಳೆಯೊಬ್ಬರು ಕುಟುಂಬ ಸಮೇತ ಕೇರಳಕ್ಕೆ ಹೋಗಿದ್ದರು. ಆಗಸ್ಟ್ 23ರಂದು ತ್ರಿಶೂರ್‌ದಿಂದ ಬೆಂಗಳೂರಿನ ಬೈಯಪ್ಪನಹಳ್ಳಿ ನಿಲ್ದಾಣಕ್ಕೆ ಬರುತ್ತಿದ್ದರು. ಬೆಳಿಗ್ಗೆ ನಿಲ್ದಾಣಕ್ಕೆ ಬಂದಿದ್ದ ರೈಲು, ನಿಧಾನವಾಗಿ ಚಲಿಸುತ್ತಿತ್ತು. ಇದೇ ಸಂದರ್ಭದಲ್ಲಿ ರೈಲಿನಲ್ಲಿದ್ದ ಅಪರಿಚಿತನೊಬ್ಬ, ಸೀಟಿನ ಮೇಲಿದ್ದ ಈ ಮಹಿಳೆಯ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದ' ಎಂದು ಹೇಳಿದರು.

'168 ಗ್ರಾಂ ಚಿನ್ನಾಭರಣ, 2 ಮೊಬೈಲ್, ₹ 4000 ನಗದು ಬ್ಯಾಗ್‌ನಲ್ಲಿತ್ತು. ಕಳ್ಳತನ ಸಂಬಂಧ ಮಹಿಳೆ ದೂರು ನೀಡಿದ್ದರು. ಪ್ರಕರಣದ ತನಿಖೆಗೆ ರಚಿಸಲಾಗಿದ್ದ ವಿಶೇಷ ತಂಡ, ಆರೋಪಿಗಳನ್ನು ಬಂಧಿಸಿದೆ' ಎಂದು ತಿಳಿಸಿದರು.

ಕಳ್ಳತನ ಮಾಡಿ ಸಮಪಾಲು: 'ಕೆ.ಆರ್.ಪುರ ರೈಲು ನಿಲ್ದಾಣದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಸಾಬಣ್ಣನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳ್ಳತನದ ಬಗ್ಗೆ ತಪ್ಪೊಪ್ಪಿಕೊಂಡಿದ್ದ. ಈತನೇ ಹೆಡ್ ಕಾನ್‌ಸ್ಟೆಬಲ್ ಸಿದ್ದರಾಮ್ ಹೆಸರು ಬಾಯ್ಬಿಟ್ಟಿದ್ದ' ಎಂದು ಪೊಲೀಸರು ಹೇಳಿದರು.

'ಸಾಬಣ್ಣ ಹಾಗೂ ಸಿದ್ದರಾಮ್, ಇಬ್ಬರೂ ಸೇರಿಕೊಂಡು ರೈಲು ನಿಲ್ದಾಣಗಳಲ್ಲಿ ಆಗಾಗ ಓಡಾಡುತ್ತಿದ್ದರು. ನಿಲ್ದಾಣಕ್ಕೆ ಬೆಳಿಗ್ಗೆ ಬರುವ ರೈಲುಗಳಲ್ಲಿ ಹತ್ತುತ್ತಿದ್ದರು. ನಿದ್ದೆ ಮಾಡುತ್ತಿದ್ದ ಪ್ರಯಾಣಿಕರ ಬ್ಯಾಗ್ ಕದ್ದುಕೊಂಡು ಪರಾರಿಯಾಗುತ್ತಿದ್ದರು' ಎಂದು ತಿಳಿಸಿದರು.

'ಚಿನ್ನಾಭರಣ, ನಗದು ಹಾಗೂ ಮೊಬೈಲ್‌ಗಳನ್ನು ತೆಗೆದುಕೊಂಡು ಬ್ಯಾಗ್‌ಗಳನ್ನು ನಿರ್ಜನ ಪ್ರದೇಶಗಳಲ್ಲಿ ಬಿಸಾಕುತ್ತಿದ್ದರು. ಕೃತ್ಯದಿಂದ ಬಂದ ಹಣವನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದರು. ಇದೇ ರೀತಿಯಲ್ಲಿ ಆರೋಪಿಗಳು ನಾಲ್ಕು ಕಡೆ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಕಳ್ಳತನ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಹೆಡ್ ಕಾನ್‌ಸ್ಟೆಬಲ್ ಸಿದ್ದರಾಮ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಬಾಕ್ಸ್‌ಗಳಲ್ಲಿ ಇದ್ದದ್ದು ಅಡುಗೆ ಉಪ್ಪು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ರೈಲು ನಿಲ್ದಾಣದ ವಾಹನ ನಿಲುಗಡೆ ಸ್ಥಳದ ಸಮೀಪ ಅನುಮಾನಾಸ್ಪದವಾಗಿ ಇಡಲಾಗಿದ್ದ ಎರಡು ಕಬ್ಬಿಣದ ಬಾಕ್ಸ್‌ಗಳಲ್ಲಿ ಅಡುಗೆ ಉಪ್ಪು ಪತ್ತೆಯಾಗಿದೆ.

ಆ ಬಾಕ್ಸ್‌ಗಳನ್ನು ಅಲ್ಲಿ ತಂದಿಟ್ಟವರ ಪತ್ತೆಗೆ ಮುಂದಾದ ಶಿವಮೊಗ್ಗ ಪೊಲೀಸರು, ಕಡಿಮೆ ಬಡ್ಡಿಗೆ ಅಧಿಕ ಸಾಲ ಕೊಡಿಸುವುದಾಗಿ ಹೇಳಿ ಸಾರ್ವಜನಿಕರನ್ನು ವಂಚಿಸುತ್ತಿದ್ದ ಜಾಲವನ್ನು ಪತ್ತೆ ಮಾಡಿದ್ದಾರೆ.

ಬೆಂಗಳೂರಿನಿಂದ ಭಾನುವಾರ ರಾತ್ರಿ ಬಂದ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸೋಮವಾರ ಬೆಳಗಿನ ಜಾವ 4ರವರೆಗೂ ಕಾರ್ಯಾಚರಣೆ ನಡೆಸಿ ಬಾಕ್ಸ್‌ಗಳ ಬೀಗವನ್ನು ಸ್ಫೋಟಿಸಿ ತೆಗೆದಾಗ ಅದರಲ್ಲಿ ಅಡುಗೆ ಉಪ್ಪು ಪತ್ತೆಯಾಗಿದೆ.

ಆ ಬಾಕ್ಸ್‌ಗಳನ್ನು ಅಲ್ಲಿಗೆ ಕಾರಿನಲ್ಲಿ ತಂದಿಟ್ಟಿದ್ದ ತುಮಕೂರು ಜಿಲ್ಲೆ ತಿಪಟೂರಿನ ನಸ್ರುಲ್ಲಾ ಹಾಗೂ ಜಬೀವುಲ್ಲಾ ಎಂಬುವವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಒಳಗಡೆ ಇರಿಸಿರುವ ಬಿಳಿ ಪುಡಿಯು ಅಡುಗೆ ಉಪ್ಪು ಎಂಬ ಸಂಗತಿ ಬೆಳಕಿಗೆ ಬಂದಿದೆ.

'ಗೋವಾದ ವ್ಯಾಪಾರಿಯೊಬ್ಬರಿಗೆ ವಂಚನೆ ಮಾಡುವ ಉದ್ದೇಶದಿಂದ ಇಬ್ಬರೂ ಆ ಬಾಕ್ಸ್‌ಗಳನ್ನು ರೈಲು ನಿಲ್ದಾಣಕ್ಕೆ ತಂದಿಟ್ಟಿದ್ದರು ಎಂಬುದು ಪ್ರಾಥಮಿಕ ವಿಚಾರಣೆಯಲ್ಲಿ ಬಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

'ಆಧಾರ್' ಇಲ್ಲದ್ದಕ್ಕೆ ಎಲ್‌ಕೆಜಿ ವಿದ್ಯಾರ್ಥಿನಿಯನ್ನು ಬಸ್‌ನಿಂದ ಕೆಳಗಿಳಿಸಿದ ನಿರ್ವಾಹಕ!

ಚಿತ್ತಾಪುರ: ಆಧಾರ್ ಕಾರ್ಡ್, ಪಾಸ್ ತಂದಿಲ್ಲ ಎಂದು ಎಲ್‌ಕೆಜಿ ವಿದ್ಯಾರ್ಥಿನಿಯನ್ನು ಬಸ್‌ನಿಂದ ಕೆಳಗಿಳಿಸಿರುವ ಘಟನೆ ಸೋಮವಾರ ನಡೆದಿದೆ.

ಎಲ್‌ಕೆಜಿ ಓದುತ್ತಿರುವ ಸಾನ್ವಿ ಬಸವರಾಜ ಸಂಕನೂರು, ದಂಡೋತಿಗೆ ಹೋಗಲೆಂದು ಕೆಎಸ್‌ಆರ್‌ಟಿಸಿ ಬಸ್ ಏರಿದ್ದಳು. ಆಕೆ ಬಳಿ ಆಧಾರ್ ಕಾರ್ಡ್, ಪಾಸ್ ಇರಲಿಲ್ಲ. ಆಗ ಟಿಕೆಟ್‌ಗೆ ಹಣ ಕೊಡಬೇಕು ಎಂದು ನಿರ್ವಾಹಕ ಒತ್ತಾಯಿಸಿದ್ದಾರೆ. ಹಣವಿಲ್ಲದ ಕಾರಣ ಆಕೆಯನ್ನು ನಿಲ್ದಾಣದಲ್ಲೇ ಬಸ್‌ನಿಂದ ಇಳಿಸಿ ಹೋಗಿದ್ದಾರೆ.

SOBHA LIMITED

CIN : L45201KA1995PLC018475
Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103
Ph: +91-80-49320000
email: investors@sobha.com
website: www.sobha.com

SOBHA PASSION AT WORK

Extract of the consolidated unaudited financial results for the quarter and half year ended 30 September 2023

(₹. in Million)

Particulars	3 months ended 30.09.2023 [Unaudited]	Preceeding 3 months ended 30.06.2023 [Unaudited]	Corresponding 3 months ended 30.09.2022 [Unaudited]	Year to date figures for current period ended 30.09.2023 [Unaudited]	Year to date figures for previous period ended 30.09.2022 [Unaudited]	Previous year ended 31.03.2023 [Audited]
Total income from operations	7,736.40	9,392.44	6,905.84	17,128.84	12,642.89	34,024.33
Profit before tax	246.69	172.87	343.48	419.56	428.88	1,449.75
Profit after tax	149.46	120.54	191.50	270.00	238.54	1,042.05
Total comprehensive income for the period (comprising profit for the period (after tax) and other comprehensive income (after tax)	131.01	123.23	158.89	254.24	213.80	1,002.12
Paid-up Equity Share Capital	948.46	948.46	948.46	948.46	948.46	948.46
Other equity	-	-	-	-	-	23,998.25
Earnings per Share (of ₹10/- each) (for continuing and discontinued operations) Basic and diluted EPS	1.58	1.27	2.03	2.85	2.51	10.99

Notes :

(1)The key data of standalone financial results is as under:

(₹. in Million)

Particulars	3 months ended 30.09.2023 [Unaudited]	Preceeding 3 months ended 30.06.2023 [Unaudited]	Corresponding 3 months ended 30.09.2022 [Unaudited]	Year to date figures for current period ended 30.09.2023 [Unaudited]	Year to date figures for previous period ended 30.09.2022 [Unaudited]	Previous year ended 31.03.2023 [Audited]
Total income	7,788.83	9,228.88	6,694.80	17,017.71	12,542.87	34,258.65
Profit before tax	228.72	121.69	248.98	350.41	268.04	1,317.10
Profit after tax	147.86	80.23	137.40	228.09	145.36	952.89
Total comprehensive income	**129.41**	**82.92**	**104.79**	**212 .33**	**120.62**	**912.96**

(2) The consolidated unaudited financial results of Sobha Limited ('the Holding Company') and its subsidiaries (the Holding Company, along with its subsidiaries referred to as 'the Group') and its associate and joint venture for the quarter and half year ended 30 September 2023 have been prepared in accordance with the recognition and measurement principles laid down in the applicable Indian Accounting Standards (Ind AS) as prescribed under Section 133 of the Companies Act, 2013 ('The Act') read with relevant rules thereunder and in terms of Regulation 33 of the SEBI (Listing Obligations and Disclosure Requirements) Regulations, 2015. These consolidated unaudited financial results have been reviewed and recommended by the Audit Committee and approved by the Board of Directors at their meeting held on 06 November 2023.

(3) The Statutory auditors of the Holding Company have carried out a limited review as required under Regulation 33 of SEBI (Listing Obligations and Disclosure Requirements) Regulations 2015 of the above consolidated unaudited financial results for the quarter and half year ended 30 September 2023 and have issued an unmodified review report.

(4) The aforesaid consolidated unaudited financial results are available on the Holding Company's website www.sobha.com and on the website of BSE Limited (www.bseindia.com) and The National Stock Exchange of India Limited (www.nseindia.com).

(5) Previous period's / year's figures have been regrouped or reclassified wherever necessary to conform with the current period figures. The impact of such reclassification / regrouping is not material to the consolidated financial results.

For and on behalf of the Board of Directors of
Sobha Limited

Bengaluru, India
06 November 2023

Jagadish Nangineni
Managing Director
DIN: 01871780

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಇಇ(ಎಸ್)/ಎಸ್ ಇ 0001/2023-24 ದಿನಾಂಕ: 04.11.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://kppp.karnataka.gov.in ಮೂಲಕ)

ಆಯುಕ್ತರು, ಬಿಡಿಎ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ದಕ್ಷಿಣ ವಿಭಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು, ಇವರು ಉದ್ದೇಶಿತ ಅರ್ಜಿದಾರರಿಂದ ಕೆಳಕಂಡ ಕಾಮಗಾರಿಗಾಗಿ ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿ ಹೆಸರು: **ಒಂದು ವರ್ಷಕ್ಕಾಗಿ (12 ತಿಂಗಳು) 2023-24 ಮತ್ತು 2024-2025 ಕಾಲಾವಧಿಗೆ ಬನಶಂಕರಿ 2ನೇ ಹಂತ, ಬಿಡಿಎ ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು, ಇಲ್ಲಿನ ವಾಹನ ನಿಲುಗಡೆ ಸ್ಥಳದಲ್ಲಿ ನಿಲ್ಲಿಸುವ ವಾಹನಗಳಿಗೆ ನಿಲುಗಡೆ ಶುಲ್ಕವನ್ನು ಸಂಗ್ರಹಿಸುವುದು.** ಇಂಡೆಂಟ್ ಸಂ.: ಬಿಡಿಎ/2023-24/ಎಸ್ ಇ 0001. ಇಎಂಡಿ: ರೂ.2,50,000/-. ಹೆಚ್ಚಿನ ವಿವರಗಳಿಗೆ http://kppp.karnataka.gov.in ಗೆ ಲಾಗ್‌ಆನ್ ಆಗಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22485867/22485927ಗೆ ಕರೆ ಮಾಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ದಕ್ಷಿಣ ವಿಭಾಗ, ಬಿಡಿಎ, ಬೆಂಗಳೂರು.
BDA/PRO/TN/03/2023-24

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಹನುಮಂತನಗರ, ಬಿಡದಿ ಹೋಬಳಿ,
ಮೈಸೂರು – ಬೆಂಗಳೂರು ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ರಾಮನಗರ.

ಸಂಖ್ಯೆ: ಮಂ.ಗ್ರಾ.ಪಂ./ಪಂ.ಅ.ಅ./ವಾರ್ತಾಇಲಾಖೆ/03/23–24 ದಿನಾಂಕ: 04–07–2023

ದರಪಟ್ಟಿ ಪ್ರಕಟಣೆ

ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿ, ಬಿಡದಿ ಹೋಬಳಿ, ಮೈಸೂರು – ಬೆಂಗಳೂರು ಮುಖ್ಯ ರಸ್ತೆ, ರಾಮನಗರ ತಾಲ್ಲೂಕು, ರಾಮನಗರ.

1) ಸರಕು / ಸಾಮಾನು / ಸಾಧನ ಸಾಮಗ್ರಿಗಳ ಸಂಕ್ಷಿಪ್ತ ಹೆಸರು : ಶೇಷಗಿರಿಹಳ್ಳಿ ಗ್ರಾಮದ ಡಿಜಿಟಲ್ ಗ್ರಂಥಾಲಯಕ್ಕೆ ಪೀಠೋಪಕರಣಗಳು ಮತ್ತು ಕಂಪ್ಯೂಟರ್ ಖರೀದಿಸಲು. ಎ/ಯು : ಶೇಷಗಿರಿಹಳ್ಳಿ ಗ್ರಾಮದ ಡಿಜಿಟಲ್ ಗ್ರಂಥಾಲಯ, ಟೆಂಡರ್ ಮೊತ್ತ : ರೂ. 4 ಲಕ್ಷಗಳು.

ಆಸಕ್ತ ಸರಬರಾಜುದಾರರು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಛೇರಿಗೆ ದರಪಟ್ಟಿ ಸಲ್ಲಿಸಲು ಕೋರಿದೆ. ದರಪಟ್ಟಿ ಸಲ್ಲಿಸಲು ಪ್ರಾರಂಭದ ದಿನಾಂಕ : 08–11–2023 ಅಂತಿಮ ದಿನಾಂಕ : 13–11–2023 ರ ಮಧ್ಯಾಹ್ನ 3.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗೆ ಕಛೇರಿ ಸಮಯದಲ್ಲಿ ಈ ಕೆಳಕಂಡ ಸಹಿದಾರರನ್ನು ಸಂಪರ್ಕಿಸುವುದು ದೂರವಾಣಿ ಸಂಖ್ಯೆ : 98446 88648.

ಷರತ್ತುಗಳು : 1) ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಟೆಂಡರ್ ನಮೂನೆಯನ್ನು ಮೊತ್ತ ರೂ. 200/– ಗಳನ್ನು ಕೊಟ್ಟು ಖರೀದಿಸತಕ್ಕದ್ದು. ಮತ್ತು ರೂ. 10,000/– ರೂಪಾಯಿಗಳಿಗೆ ಮಂಚನಾಯನಹಳ್ಳಿ ಗ್ರಾಮ ಪಂಚಾಯಿತಿ ಹೆಸರಿನಲ್ಲಿ ಡಿ.ಡಿ. ಖರೀದಿಸತಕ್ಕದ್ದು, 2) ಸರ್ಕಾರದ ಮಾರ್ಗಸೂಚಿಯಂತೆ ನಿಯಮಾನುಸಾರ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಸರಬರಾಜು ಮಾಡಲು ಸೂಚಿಸಿದೆ.

ಸಹಿ/– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,
ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ
ರಾಮನಗರ ತಾಲ್ಲೂಕು, ರಾಮನಗರ.

ಡಿಐಪಿಆರ್/ರಾಮನಗರ/260/ಮಣಿಪಾಲ್/2023–24

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು – 562110
ದೂರವಾಣಿ: 080–29599998 e-mail : forest.brzp@gmail.com

ಸಂ: ಎ3/ಟೆಂಡರ್/ಸಿಆರ್–32/2023–24 ದಿನಾಂಕ: 02.11.2023

ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಅಟಲ್ ಭೂಜಲ್ ಯೋಜನೆಯಡಿ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿಗಳನ್ನು ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯ ಹೊಸಕೋಟೆ, ದೇವನಹಳ್ಳಿ, ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ಈ ಕಛೇರಿಯಿಂದ ಮಂಜೂರಾದ ಅಂದಾಜು ಪಟ್ಟಿಗಳ ಅನುಸಾರ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ/ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ.

ದಿನಾಂಕ: 10–11–2023 ಮಧ್ಯಾಹ್ನ 2.30 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರ ಅಥವಾ ಇವರಿಂದ ಅಧಿಕೃತವಾಗ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೆ ಇದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ದಿನಾಂಕ: 29.11.2023 ರಂದು ಮಧ್ಯಾಹ್ನ 2.30 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 3.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತು ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ವಿಭಾಗ
ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/2006/ಆಕಾರ್/2023–24

ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಯನ್ನು ಮಾಜಿ ಪ್ರಧಾನಿ ಎಚ್‌.ಡಿ. ದೇವೇಗೌಡ ಅವರಿಗೆಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್‌. ವೆಂಕಟಾಚಲಯ್ಯ ಪ್ರದಾನ ಮಾಡಿದರು. ರಾಜ್ಯ ಮಾಹಿತಿ ಆಯುಕ್ತ ಎನ್‌.ಸಿ. ಶ್ರೀನಿವಾಸ್‌, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಗೌರವ ಕಾರ್ಯದರ್ಶಿಗಳಾದ ನೇ.ಭ. ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಅಧ್ಯಕ್ಷ ಮಹೇಶ ಜೋಶಿ ಇದ್ದರು.

ಮುರುಗಮಲ್ಲ ದರ್ಗಾದಲ್ಲಿ ಮಗು ಅಪಹರಣ

ಪ್ರಜಾವಾಣಿ ವಾರ್ತೆ

ಚಿಂತಾಮಣಿ: ತಾಲ್ಲೂಕಿನ ಮುರುಗಮಲ್ಲ ಗ್ರಾಮದ ಅಮ್ಮಾಜಾನ್ ಮತ್ತು ಬಾವಾಜಾನ್ ದರ್ಗಾ ಬಳಿಯಿಂದ ಭಾನುವಾರ 2 ವರ್ಷದ ಮಗುವನ್ನು ಅಪಹರಿಸಲಾಗಿದೆ. ಅಪರಿಚಿತ ವ್ಯಕ್ತಿ ಮಗು ಅಪಹರಿಸುತ್ತಿರುವ ದೃಶ್ಯಗಳು ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿವೆ.

ಬೆಂಗಳೂರಿನ ಪಾದರಾಯನಪುರದ ಜಾವಿದ್ ಅಪಹರಣಕ್ಕೆ ಒಳಗಾದ ಮಗು. ಪಾದರಾಯನಪುರದ ಜಬೀವುಲ್ಲಾ, ಅವರ ಮಾವ ದಸ್ತು, ಅತ್ತೆ ಆಯಿಷಾ ದರ್ಗಾಗೆ ಭೇಟಿ ನೀಡಿದ್ದರು. ಭಾನುವಾರವಾದ ಕಾರಣ ದರ್ಗಾಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದಿದ್ದರು. ಮಗು ನಾಪತ್ತೆಯಾದ ತಕ್ಷಣ ಕುಟುಂಬ ಸದಸ್ಯರು ಕಳವಳಗೊಂಡರು. ದರ್ಗಾದ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ 50ರಿಂದ 55 ವರ್ಷದ ವ್ಯಕ್ತಿ ಜಾವಿದ್‌ನನ್ನು ಎತ್ತಿಕೊಂಡು ಹೋಗುತ್ತಿರುವ ದೃಶ್ಯ ಸೆರೆಯಾಗಿವೆ.

ಈ ಬಗ್ಗೆ ಕೆಂಚಾರ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಲಕ್ಷ್ಮಿ: ಜಮೆ ಆಗದ ಹಣ ಮಹಿಳೆಯರ ಆಕ್ರೋಶ

ಪ್ರಜಾವಾಣಿ ವಾರ್ತೆ

ಯಲಹಂಕ: ಗೃಹಲಕ್ಷ್ಮಿ ಯೋಜನೆಯಡಿ ಹಣ ಜಮೆಯಾಗದಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಮಹಿಳೆಯರು, ತಹಶೀಲ್ದಾರ್ ಕಚೇರಿಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಎದುರು ಜಮಾಯಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಗೃಹಲಕ್ಷ್ಮಿ ಯೋಜನೆಯಡಿ ಯಲ್ಲಿ ಮಹಿಳೆಯರು ಅರ್ಜಿ ಸಲ್ಲಿಸಿ ದ್ದಾರೆ. ಕೆಲವರಿಗೆ ಮಾತ್ರ ಹಣ ಸಂದಾಯವಾಗಿದೆ. ಬಹುತೇಕರಿಗೆ ಹಣ ಬಂದಿಲ್ಲ. ಅವರೆಲ್ಲರೂ ನಿತ್ಯವೂ ಕಚೇರಿಗೆ ಅಲೆದಾಡುತ್ತಿದ್ದಾರೆ.

'ಅರ್ಜಿ ಸಲ್ಲಿಸಿ ಹಲವು ದಿನಗಳಾದರೂ ಹಣ ಬಂದಿಲ್ಲ. ಕಚೇರಿಗೆ ಬಂದು ವಿಚಾರಿಸಿದರೆ, ಅಧಿಕಾರಿಗಳು ನೆಪ ಹೇಳುತ್ತಿದ್ದಾರೆ. ಕೆಲಸ ಬಿಟ್ಟು ಕಚೇರಿಗೆ ಅಲೆಯಬೇಕಾದ ಸ್ಥಿತಿ ಎದುರಾಗಿದೆ' ಎಂದು ಟ್ಯಾನರಿ ರಸ್ತೆ ನಿವಾಸಿ ಮೇರಿ ಸ್ಟೆಲ್ಲಾ ಅಳಲು ತೋಡಿಕೊಂಡರು. ಮಹಿಳಾ ಮತ್ತು ಮಕ್ಕಳ ಇಲಾಖೆಯ ತಾಲ್ಲೂಕು ಅಧಿಕಾರಿ ಶಶಿಧರ್, 'ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡದಿರುವುದು ಸೇರಿದಂತೆ ಹಲವು ಕಾರಣದಿಂದ ಹಣ ಜಮೆ ತಡವಾಗಿದೆ. ನಾಳೆಯಿಂದ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲಾಗುವುದು' ಎಂದರು.

ನಗರದಲ್ಲಿ ಇಂದು

ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್ 75ನೇ ವರ್ಷಾಚರಣೆ ಅಂಗವಾಗಿ ಅಂಚೆಚೀಟಿ ಬಿಡುಗಡೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಕೆ. ಕಸ್ತೂರಿ ರಂಗನ್, ಎ.ಎಸ್. ಕಿರಣ್ ಕುಮಾರ್, ತರುಣ ಸೌರದೀಪ್, ಆಯೋಜನೆ ಮತ್ತು ಸ್ಥಳ: ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಸದಾಶಿವನಗರ, ಸಂಜೆ 4

ಕನ್ನಡ ಹವ್ಯಾಸಿ ನಾಟಕೋತ್ಸವ–2023: ಪರ್ವತರಾಣಿ ಅವರ 'ಹಗ್ಗದ ಕೊನೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಪ್ರಸಾದ್ ಎಚ್.ಪಿ., ಪ್ರಸ್ತುತಿ: ರಂಗ ಬಿಂಬ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

WANTED SECOND Division Clerk (Male) with good Computer Knowledge and fluency in Kannada and English apply within 10 days to Principal, St Annes PU College, 2 Millers Road, Bangalore 52 Ph: 22203386

Wanted

WANTED SMART administrative Manager for MS Ramaiah North City Residents Welfare Association. Graduates with good communication skills, Basic accounting knowledge, Computer usage- emails and spreadsheets, liaisoning in English and Kannada may apply. Contact Raghavendra Rao 9663311500

REAL ESTATE SELLING

Commerical

Joint Venture

COMMERCIAL PROPERTY for JD in Prime location measuring 62x62 K.G. Road, Gandhinagar, Bangalore. Contact:- 9448363096.

Marathahalli

SALE: 5700 Sqft, Commercial Site FOR SALE, Near Varthur, WEST Facing, 'B' Khatha in BBMP limit. Contact- 9353532040

PERSONAL

Change of Name

CHANGE OF NAME
I, EVANGILINE MARIA, D/o 13687516, Rank: HAV, P Shantha Kumar, R/at #123/1, 6th Cross, Vivekanand Street, Andra Colony, A. Narayanapura, Bangalore- 560016, have changed my name to **EVANGELINE MARIA S** vide affidavit dated 6-11-2023, before Notary K. Venkateshan, Bangalore.

CHANGE OF NAME
I, **A. THERESA RAJ,** R/at # 61, Ranganatha Nilaya, Aralimara Road, 3rd Cross, Indira Street, Banaswadi, Kalyan Nagar, Bangalore-43 have changed my name to **THERESA RAJ** vide affidavit dt.12-10-2023, before Notary C.N.Venkataravanappa, Bangalore. Henceforth I shall be called **THERESA RAJ** only.

I, BALASUBHRAMANYAM SHESHAGIRIRAO KARANAM Residingat No.219, EWS, 5th Cross,2nd Stage,KHB Colony,Basaveshwaranagar, Bangalore-560079. Have Changed my Name as BALASUBRAMANYAMSHESH AGIRIRAO KARANAM vide affidavit Dated:06/11/2023 before NotaryA.S.NARAYANA REDDY Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

I, ROHIT, S/o. JAGDISH R PUNAMIYA, R/o #45, WAT Street, Basavanagudi, Bengaluru-04 have changed my name as ROHIT J. PUNAMIYA, vide affidavit dated 4/11/2023 before Notary Meenakshi. K, Bengaluru

I, J.RAVI S/o K.Jayaramaiah, aged about 48 years, R/o No.3/168, Ward No.22, Near Gangamma Temple, Salipet, Chintamani town, Chikkaballapura district do hereby declare that, in my passport guardian name late Jayaseelan is registered in earlier days, but now I would like change guardian name by entering my father name as K. JAYARAMAIAH. Hence this vide affidavit sworn on 02.11.2023 before the Notary and Advocate Manjunath Reddy of Chintamani.

DH Classifieds More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

CONNECT

ಸ್ಟೇನ್ಸ್ ಉತ್ಪನ್ನದ ಹೊಸ ಅವಿಷ್ಕಾರವನ್ನು ಪರಿಚಯಿಸುತ್ತಿದ್ದೇವೆ
ನರಿಷ್ ಪ್ಲಸ್
N:13.00% P:12.00% K:10.00%
(Zn-2.00%, Mn-1.00%, Cu-1.00%, Mo-0.50%, B-0.50%)
(100% ನೀರಿನಲ್ಲಿ ಕರಗುವ ರಸಗೊಬ್ಬರಗಳ ಮಿಶ್ರಣ)
(35% NPK + 5% ಸೂಕ್ಷ್ಮ ಪೋಷಕಾಂಶಗಳ ಸಂಯೋಜನೆ)
ಎಲ್ಲಾ ಬೆಳೆಗಳಿಗೆ
ಹೆಚ್ಚಿನ ವಿವರಗಳಿಗಾಗಿ
ಟಿ. ಸ್ಟೇನ್ಸ್ ಅಂಡ್ ಕಂಪನಿ ಲಿಮಿಟೆಡ್
(ಅಮಾಲ್ಗಮೇಶನ್ ಸಮೂಹದ ಸದಸ್ಯ ಕಂಪನಿ)
8/23–24, ರೇಸ್ ಕೋರ್ಸ್ ರಸ್ತೆ, ಕೊಯಂಬತ್ತೂರು– 641 018
ಸಂಪರ್ಕಿಸಿ : 0422 2221514 / 2223515-18

BUSINESS

Business Offers

Finance

NRI'S INVESTMENT& Finance Available On Low Interest Against Properties, Land& Building,Sites,Flats,Converted& Agriculture Lands Call:7204995189

ALL KARNATAKA EDITION : BANGALORE / MANGALORE / MYSORE / GULBARGA / DAVANAGERE / HUBLI+HOSPET (NEED SINGLE CREATIVE) ALL RR & MFR LOGO: AUTHORISED DISTRIUBUTOR: BIJAPUR&BAGALKOT: BISHNOI MARKETING AGENCIES -8088808829, BISHNOI HUBLI: LLOYD EXCLUSIVE SHOP -8088808829, SUBHASH DISTRIBUTORS (MANGALORE) -8971152119, SITHARA DISTRIBUTOR: (UDUPI & UTTAR KANANDA) 9986574736 / 9591267692, FOR AC (UDUPI & UTTAR KANANDA) MATHIAS APPLIANCES -9880078194, AGARI ENTERPRISES -7022604424 /7022604414, MILAN ENTERPRISES -9731328834, 8277671007,VIDYUT ENTERPRISES -9743200177, PRAKASH, ENGINEERING KARWAR -9448628617, PREETHI ELECTRICALS - 9343866448, SHREE GURU SALES CORPORATION -9845647005. SRI SRIKANTESHWARA ELECTRONICS PVT LTD -9591001488, AUTOHRISED DISTRIBUTOR -GUGLIYA DISTRIBUTING CO -8123773419, PROJECT DISTRIUBUTOR: SAPTHAGIRI ENTERPRISES -9740288999, BRAND SHOPE: GURUDATTA ENTERPRISES -9591233604, GULBARGA -BIDAR: VAIBHAV ELECTRONICS & DIGITAL HOME APPLIANCES -9880201315, YADAGIRI- AKSHAY DIGITALS -9741443143. DAVANGERE & CHITRADURGA: BALAJI ENTERPRISES -8296392991, DAVANAGERE & CHITRADURGA DEALER: SHA TV CENTRE -9449985500 , ESWAR RADIO & TV -9845533411, 9980833411, DHARWAD, BELGUAM, HAVEI,GADAG : BATTERY POWER SOLUTION -7875819542. FOR AC : ABMIKA DISTRIBUTOR -9880906060. AUTHORISED DIRECT DEALER HUBLI: KESAR DIGITAL: 9886381206, ALLIED ELECTRONICS GOKAK -8095197786 BELLARY & KOPPAL: SHREE VENKATA SAI ENTERPRIS -8377003548, RK ELECTRONCS -9449925596, SIRUGUPPA : SRI VEERABADRESWAR ENTERPRISES -9741851999, DCM ENTERPRISES -9880527023, AUTHORISED BRAND SHOP HOSPETE : DARSHAN ENTERPRISES -9448781766A RAICHUR: EXCEL ENTERPRISES -9845417842. FOR TRADE & INSTITUTION INQUIRY: MR. RAJENDRA RAO SAVANTH -9538424926, MR. THARANATHA -9880907559, MR.SIDDHU PRADHAN -9740801436, MR. S.D. VINOD -9538024999, MR.BHARTHEESH S -9535506141, MR. SANJEEV S -9620669944, MR. SANTHOSH-9741029144

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9844478636; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com

ಕ್ಷೇಮ ಕುಶಲ

ಮೂತ್ರಕೋಶದಲ್ಲಿ ಕಲ್ಲುಗಳು



ಡಾ. ವಿನಯ ಶ್ರೀನಿವಾಸ್

ಮಹಿಳೆಯರಿಗಿಂತ ಪುರುಷರನ್ನು ತುಸು ಹೆಚ್ಚು ಕಾಡುವ ಮೂತ್ರವ್ಯೂಹದ ಈ ಸಮಸ್ಯೆ ಎಷ್ಟೋ ಬಾರಿ ತುರ್ತುಚಿಕಿತ್ಸೆಯನ್ನು ಬೇಡುತ್ತದೆ. ಈ ನೋವು ಬಹಳವೇ ತೀವ್ರವಾಗಿದ್ದು, ಹೊಟ್ಟೆಯಲ್ಲಿ ಹಿಂಡಿದಂತೆಯೂ, ಕೆಳಭಾಗದವರೆಗೆ ಹರಿದಾಡಿದಂತೆಯೂ ಭಾಸವಾಗಬಹುದು. ಕೆಲವೊಮ್ಮೆ ವಾಂತಿ, ರಕ್ತಮಿಶ್ರಿತ ಮೂತ್ರವಿಸರ್ಜನೆಯೂ ಆಗಬಹುದು. ತತ್‌ಕ್ಷಣದ ಶಮನಕ್ಕೆ ನೋವು ನಿವಾರಕ ಚುಚ್ಚುಮದ್ದುಗಳೇ ಸೂಕ್ತ.

ಕಲ್ಲುಗಳು ಮೂತ್ರವ್ಯೂಹದ ಯಾವುದೇ ಭಾಗದಲ್ಲಿ ಅಂದರೆ, ಮೂತ್ರಪಿಂಡ, ಮೂತ್ರನಾಳ ಅಥವಾ ಮೂತ್ರಕೋಶದಲ್ಲಿ ಕಾಣಿಸಿಕೊಳ್ಳಬಹುದು. ರಕ್ತದ ದ್ರವಾಂಶದಲ್ಲಿ ಸಹಜವಾಗಿಯೇ ಅನೇಕ ರಾಸಾಯನಿಕ ವಸ್ತುಗಳು ಕರಗಿರುತ್ತವೆ. ರಕ್ತವು ಶೋಧನಾಕ್ರಿಯೆಗೆಂದು ಮೂತ್ರಪಿಂಡದ ಮೂಲಕ ಪರಿಚಲಿಸಿದಾಗ ಮುಖ್ಯವಾದ ಮತ್ತು ಶರೀರಕ್ಕೆ ಅಗತ್ಯವಾದ ರಾಸಾಯನಿಕಗಳು ಅಲ್ಲಿನ ಸಂಗ್ರಹನಾಳಗಳ ಜೀವಕೋಶಗಳ ಮೂಲಕ ಹೀರಲ್ಪಟ್ಟು ಪುನಃ ರಕ್ತವನ್ನು ಸೇರುತ್ತವೆ. ವಿವಿಧ ಕಾರಣಗಳಿಗಾಗಿ ರಕ್ತದಲ್ಲಿ ಕೆಲವು ರಾಸಾಯನಿಕಗಳು ಹೆಚ್ಚಾದಾಗ ಅಥವಾ ಅವುಗಳನ್ನು ಕರಗಿದ ರೂಪದಲ್ಲಿರಿಸಲು ದ್ರವಾಂಶದ ಕೊರತೆಯಾದಾಗ ಅವು ಹರಳುಗಟ್ಟಬಹುದು. ಹೀಗೆ ಮೂತ್ರವ್ಯೂಹದಲ್ಲಿ ಹರಳುಗಟ್ಟುವ ರಾಸಾಯನಿಕಗಳಲ್ಲಿ ಕ್ಯಾಲ್ಸಿಯಂ, ಯೂರಿಕ್ ಆ್ಯಸಿಡ್, ಆಕ್ಸಾಲಿಕ್ ಆ್ಯಸಿಡ್, ಸಿಸ್ಟಿನ್ ಮುಖ್ಯವಾದುವು.

ಹರಳುಗಟ್ಟುವುದೇಕೆ?

- ಶೇ 70ರಷ್ಟು ವ್ಯಕ್ತಿಗಳಲ್ಲಿ ಹರಳುಗಳು ಕ್ಯಾಲ್ಸಿಯಂನಿಂದ ಕೂಡಿದ್ದರೂ ಬಹುತೇಕರಲ್ಲಿ ರಕ್ತದ ಕ್ಯಾಲ್ಸಿಯಂ ಸಾಮಾನ್ಯ ಮಟ್ಟದಲ್ಲಿಯೇ ಇರುತ್ತದೆ. ಆದರೆ, ಪ್ಯಾರಾಥೈರಾಯ್ಡ್ ಗ್ರಂಥಿಯ ಸ್ರವಿಸುವಿಕೆ ಹೆಚ್ಚಾದಾಗ ಮತ್ತು ದೀರ್ಘಕಾಲದವರೆಗೆ ಹಾಸಿಗೆ ಹಿಡಿದ ವ್ಯಕ್ತಿಗಳಲ್ಲಿ ಮೂಳೆಗಳಿಂದ ಕ್ಯಾಲ್ಸಿಯಂ ಅಂಶವು ರಕ್ತಪರಿಚಲನೆಗೆ ಸೇರಿ, ಹೆಚ್ಚಾದ ಕ್ಯಾಲ್ಸಿಯಂ ಮೂತ್ರವ್ಯೂಹದಲ್ಲಿ ಹರಳುಗಳಾಗಬಹುದು.
- ಆನುವಂಶೀಯತೆಯ ಕಾರಣದಿಂದ ಪ್ರೊಟೀನ್ ಘಟಕಗಳಾದ ಕೆಲವು ಅಮೈನೋ ಆ್ಯಸಿಡ್‌ಗಳ ಹೀರಿಕೊಳ್ಳುವಿಕೆಯಲ್ಲಿ ಮತ್ತು ಸಾಗಣಿಕೆಯಲ್ಲಿ ದೋಷವಿದ್ದಾಗ ಸಿಸ್ಟಿನ್ ಅಂಶವು ಹರಳುಗಟ್ಟಬಹುದು.
- ಶೇ 5-10ರಷ್ಟು ವ್ಯಕ್ತಿಗಳಲ್ಲಿ ಕಲ್ಲುಗಳು ಯೂರಿಕ್ ಆ್ಯಸಿಡ್‌ನಿಂದ ಕೂಡಿರುತ್ತವೆ. ಈ ವ್ಯಕ್ತಿಗಳಲ್ಲಿ ಇಲ್ಲವೇ ಹೆಚ್ಚು ಯೂರಿಕ್ ಆ್ಯಸಿಡ್ ಉತ್ಪತ್ತಿಯಾಗುತ್ತಿರುತ್ತದೆ ಅಥವಾ ಮೂತ್ರವು ಹೆಚ್ಚು ಆಮ್ಲೀಯತೆಯಿಂದ ಕೂಡಿರುತ್ತದೆ. ಆಹಾರದಲ್ಲಿನ ಪ್ರೊಟೀನ್ ಮತ್ತು ಪ್ಯೂರಿನ್ ಅಂಶಗಳು ಚಯಾಪಚಯಾ ಕ್ರಿಯೆಗೆ ಒಳಗಾದಾಗ ಯೂರಿಕ್ ಆ್ಯಸಿಡ್ ಉತ್ಪತ್ತಿಯಾಗುತ್ತದೆ. ಕಿಮೋಥೆರಪಿಗೆ ಒಳಗಾದ ಕ್ಯಾನ್ಸರ್ ರೋಗಿಗಳಲ್ಲಿ ಜೀವಕೋಶಗಳು ಹೆಚ್ಚಿನ ಸಂಖ್ಯೆಯಲ್ಲಿ ಮರಣಿಸಿದಾಗಲೂ ಯೂರಿಕ್ ಆ್ಯಸಿಡ್ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತದೆ. ರಕ್ತದ ಯೂರಿಕ್ ಆ್ಯಸಿಡ್ ಸಹಜ ಮಟ್ಟದಲ್ಲಿದ್ದರೂ ಜೀರ್ಣಾಂಗವ್ಯೂಹದಲ್ಲಿ ವಿವಿಧ ಕಾರಣಗಳಿಗಾಗಿ (ಶಸ್ತ್ರಚಿಕಿತ್ಸೆ, ಮೊದಲಾದುವು) ನೀರು ಮತ್ತು ಇತರ ದ್ರವಾಂಶಗಳ ಹೀರಿಕೊಳ್ಳುವಿಕೆಯಲ್ಲಿ ಇಳಿಮುಖವಾದಾಗ ಮೂತ್ರದ ಪ್ರಮಾಣ ಕಡಿಮೆಯಾಗಿ ಯೂರಿಕ್ ಆ್ಯಸಿಡ್ ಹರಳುಗಟ್ಟಬಹುದು.
- ಆಕ್ಸಲೇಟ್ ಅಂಶದ ಚಯಾಪಚಯಗಳಲ್ಲಿ ಭಾಗವಹಿಸುವ ಕೆಲವು ನಿರ್ದಿಷ್ಟ ಕಿಣ್ವಗಳ ಕೊರತೆ ಜನ್ಮಜಾತವಾಗಿಯೇ ಇದ್ದಾಗ ಈ ಅಂಶವು ರಕ್ತದಲ್ಲಿ ಹೆಚ್ಚಾಗಿ ಮೂತ್ರವ್ಯೂಹದಲ್ಲಿ ಹರಳುಗಟ್ಟಬಹುದು.
- ಆಹಾರದಲ್ಲಿ ಕೆಲವು ಪದಾರ್ಥಗಳ ಅತಿಯಾದ ಬಳಕೆ (ಚಹಾ, ಪಾಲಕ್ ಸೊಪ್ಪು, ಕೋಕಾ, ಚಾಕೊಲೇಟ್, ಕಾಳುಮೆಣಸು ಮೊದಲಾದುವು), ನಿರ್ದಿಷ್ಟ ಬ್ಯಾಕ್ಟೀರಿಯಾಗಳು ಮೂತ್ರವ್ಯೂಹದಲ್ಲಿ ಸೋಂಕು ಉಂಟುಮಾಡಿದಾಗ, ಮೂತ್ರನಾಳಗಳಲ್ಲಿ ವಿವಿಧ ಕಾರಣಗಳಿಗಾಗಿ ತಡೆಯುಂಟಾದಾಗ, ಮೂತ್ರದ ಹರಿವು ಸರಾಗವಾಗಿ ಆಗದಿದ್ದಾಗ ಹಾಗೂ ಕೆಲವು ಔಷಧಗಳ ಅತಿಯಾದ ಬಳಕೆ ಮೂತ್ರವ್ಯೂಹದಲ್ಲಿ ಹರಳುಗಟ್ಟುವಿಕೆ ಕಾರಣವಾಗಬಹುದು.

ತಪಾಸಣೆಗಳು

ಹೊಟ್ಟೆಯ ಭಾಗದ ಎಕ್ಸ್-ರೇ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮತ್ತು ಸಿಟಿ ಸ್ಕ್ಯಾನಿಂಗ್ ಪರೀಕ್ಷೆಗಳು ಈ ಹರಳುಗಳ ಇರುವಿಕೆಯನ್ನು ದೃಢಪಡಿಸುವುದರ ಜೊತೆಯಲ್ಲಿಯೇ ಅದರ ನಿಖರವಾದ ಸ್ಥಾನ, ಗಾತ್ರ, ಸಂಖ್ಯೆ ಮತ್ತು ವ್ಯೂಹದಲ್ಲಿನ ಇತರ ನ್ಯೂನತೆಗಳ ಬಗ್ಗೆ ಮಾಹಿತಿಯನ್ನು ಕೊಡುತ್ತವೆ. ಈ ವಿವರಗಳು ಚಿಕಿತ್ಸೆಯನ್ನು ನಿರ್ಧರಿಸಲು ನೆರವಾಗುತ್ತವೆ.

ಚಿಕಿತ್ಸೆಗಳೇನು?

ಈ ಸಮಸ್ಯೆಗೆ ಬಹು ಸುಧಾರಿತ ಚಿಕಿತ್ಸಾ ವಿಧಾನಗಳು ಲಭ್ಯವಿದ್ದು ಹಿಂದಿನಂತೆ ತೆರೆದ ಹೊಟ್ಟೆಯ ಶಸ್ತ್ರಚಿಕಿತ್ಸೆಯ ಬಳಕೆ ಬಹತೇಕ ಇಲ್ಲವೆಂದೇ ಹೇಳಬಹುದು. ಕೆಲವು ಮುಖ್ಯ ಚಿಕಿತ್ಸಾ ವಿಧಾನಗಳೆಂದರೆ:

- ನೋವು ನಿವಾರಕ ಚುಚ್ಚುಮದ್ದುಗಳು, ಆ್ಯಂಟಿಬಯೋಟಿಕ್‌ಗಳು, ಅತಿ ಸಣ್ಣ ಕಲ್ಲುಗಳು ಮೂತ್ರದೊಂದಿಗೆ ವಿಸರ್ಜನೆಯಾಗಲು ನಿರ್ದಿಷ್ಟ ಔಷಧಗಳ ಬಳಕೆ.
- **ಎಕ್ಸ್ಟ್ರಾ ಕಾರ್ಪೋರಿಯಲ್ ಶಾಕ್ ವೇವ್ ಲಿತೊಟ್ರಿಪ್ಸಿ:** ಈ ವಿಧಾನದಲ್ಲಿ ಸಮಸ್ಯೆಯಿಂದ ಬಳಲುವ ವ್ಯಕ್ತಿಯನ್ನು ಕೆಲವು ನಿರ್ದಿಷ್ಟ ತಪಾಸಣೆಗಳಿಗೆ ಒಳಪಡಿಸಿ ಕಲ್ಲಿನ ನಿಖರವಾದ ಸ್ಥಾನವನ್ನು ಗುರುತಿಸಿಕೊಳ್ಳುತ್ತಾರೆ. 1.5 ಸೆಂಟಿಮೀಟರ್‌ಗಳಷ್ಟು ವ್ಯಾಸವಿರುವ ಕಲ್ಲುಗಳನ್ನು ಈ ಚಿಕಿತ್ಸೆಯಿಂದ ತೆಗೆಯಬಹುದು. ಎಲೆಕ್ಟ್ರೋಮ್ಯಾಗ್ನೆಟ್ ಅಥವಾ ಪೈಜೋಎಲೆಕ್ಟ್ರಿಕ್ ಮೂಲದಿಂದ ವಿಶೇಷ ಅಲೆಗಳನ್ನು ಚರ್ಮದ ಮೂಲಕ ಕಲ್ಲಿನತ್ತ ಹರಿಹಾಯಿಸಿ ಅದನ್ನು ತುಂಡರಿಸುತ್ತಾರೆ. ಹಾಗೆ ತುಂಡಾದ ಸಣ್ಣ ಸಣ್ಣ ತುಣುಕುಗಳು ಮೂತ್ರನಾಳದ ಮೂಲಕ ಮೂತ್ರದೊಂದಿಗೆ ವಿಸರ್ಜಿಸಲ್ಪಡುತ್ತವೆ.
- **ಯುರಿಟರೋಸ್ಕೋಪಿಕ್ ಲಿತೊಟ್ರಿಪ್ಸಿ:** ಈ ವಿಧಾನದಲ್ಲಿ ಮೂತ್ರನಾಳದ ಮೂಲಕ ಕೊಳವೆಯಂತಹ ಉಪಕರಣವನ್ನು ತೂರಿಸಿ ಲೇಸರ್ ಶಕ್ತಿಯನ್ನು ಬಳಸಿ ಕಲ್ಲನ್ನು ತುಂಡರಿಸಲಾಗುತ್ತದೆ.
- ಸೋಂಕು ಕಂಡು ಬಂದಾಗ ಮೂತ್ರನಾಳದ ಮೂಲಕ ಕೊಳವೆಯನ್ನು ತೂರಿಸಿ, ನಾಳದಂತಹ (ಸ್ಟೆಂಟ್) ವಸ್ತುವನ್ನು ಕೆಲಕಾಲ ಅಲ್ಲಿರಿಸಿ, ಸೋಂಕು ಕಡಿಮೆಯಾದ ಮೇಲೆ ಅದನ್ನು ತೆಗೆಯುತ್ತಾರೆ. ಇದು ಸೋಂಕು ಹರಡದಂತೆ ನೆರವಾಗುತ್ತದೆ.
- **ಪರ್ ಕ್ಯುಟೇನಿಯಸ್ ನೆಫ್ರೋಲಿತೋಟೊಮಿ:** ಮೂತ್ರಪಿಂಡದ ಮುಂಭಾಗದಲ್ಲಿ ಅಥವಾ ಮೂತ್ರನಾಳದ ಮೇಲಿನ ಭಾಗದಲ್ಲಿ ಕಲ್ಲುಗಳಿದ್ದಾಗ ಈ ವಿಧಾನ ಸೂಕ್ತ. ಈ ವಿಧಾನದಲ್ಲಿ ಹೊಟ್ಟೆಯ ಭಾಗದಿಂದ ಕಲ್ಲನ್ನು ಸಮೀಪಿಸುತ್ತಾರೆ.

ನೆನಪಿಡಿ

ಯಾವ ರೋಗಿಗೆ ಯಾವ ವಿಧಾನದ ಚಿಕಿತ್ಸೆ ಎನ್ನುವುದು ಕಲ್ಲಿನ ಗಾತ್ರ, ಅದರ ಸ್ಥಾನ, ಮೂತ್ರನಾಳದಲ್ಲಿನ ಇತರ ತಡೆಗಳು, ಅಲ್ಲಿ ಇರಬಹುದಾದ ಸೋಂಕು, ವ್ಯಕ್ತಿಯ ನೋವಿನ ತೀವ್ರತೆ ಮತ್ತಿತರ ಅಂಶಗಳನ್ನು ಅವಲಂಬಿಸಿರುತ್ತದೆ. ಅತಿ ಚಿಕ್ಕ, ಅಂದರೆ 5 ಮಿಲಿಮೀಟರ್‌ಗಿಂತಲೂ ಕಡಿಮೆ ವ್ಯಾಸವಿರುವ ಕಲ್ಲುಗಳು ಸಾಮಾನ್ಯವಾಗಿ ತಂತಾನೆ ಮೂತ್ರನಾಳದ ಮೂಲಕ ವಿಸರ್ಜನೆಗೊಳ್ಳುತ್ತವೆಯಾದರೂ, ಎಲ್ಲ ಸಂದರ್ಭಗಳಲ್ಲಿಯೂ ಅದು ಸಾಧ್ಯವಾಗದೆ ಇರಬಹುದು.

ದಿನವೂ ಕಡ್ಡಾಯವಾಗಿ ಮೂರು ಲೀಟರ್ ನೀರು ಮತ್ತಿತರ ದ್ರವಾಂಶದ ಸೇವನೆ, ಚಟುವಟಿಕೆಯ ಜೀವನಶೈಲಿ – ಈ ಸಮಸ್ಯೆ ಬರದಂತೆ ಸ್ವಲ್ಪ ಮಟ್ಟಿಗೆ ನೆರವಾಗುತ್ತದೆ. ವಾತಾವರಣದ ಉಷ್ಣತೆ ಹೆಚ್ಚಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ನೀರನ್ನು ಹೆಚ್ಚು ಕುಡಿಯುವುದು ಸೂಕ್ತ. ❖

ಸಂತೋಷದ ಸರಿಗಮ

ರಘು ವಿ.

ಮನುಷ್ಯನ ಜೀವನದ ಪರಮೋದ್ದೇಶವೇ ಸಂತೋಷ. ಇಹ-ಪರಗಳೆರಡರಲ್ಲೂ ದುಃಖವಿಮುಕ್ತಿಯೇ, ಸುಖದ ಕಲ್ಪನೆಯೇ ಸಂತೋಷದ ನೆಲೆ. ಈ ಸಂತಸದ ಬೆದಕಾಟದ ಸುತ್ತವೇ ಬದುಕು ರೂಪಿತವಾಗುವುದು. ನಮ್ಮ ಮಾತು ಆರಂಭವಾಗುವುದೇ, 'ಚೆನ್ನಾಗಿದ್ದೀರಾ?' ಎಂಬ ಪ್ರಶ್ನೆಯೊಂದಿಗೆ.

'ಮಗು ಅಳುತ್ತ ಜಗತ್ತಿಗೆ ಬರುತ್ತದೆ; ಮನುಷ್ಯ ಅಳುತ್ತಲೇ ಬದುಕಿಗೆ ವಿದಾಯ ಹೇಳುತ್ತಾನೆ' ಎಂದೆಲ್ಲ ಮಾತಾಡುತ್ತೇವೆ. ಆದರೆ ಈ ಮಾತಿನ ಹಿಂದೆ, ಅಳುವನ್ನು ನಿವಾರಿಸಿಕೊಳ್ಳುವ ಬಯಕೆ ಇದೆ ಎಂಬುದನ್ನು ಗುರುತಿಸಬೇಕು. ಅಳುವಿನ ಕಾರಣಗಳನ್ನು ಅದರ ನಿವಾರಣೋಪಾಯಗಳನ್ನು ಬೇರೆ ಬೇರೆ ಧರ್ಮಶಾಸ್ತ್ರಗಳು ವಿವರವಾಗಿ ತಿಳಿಸಿವೆ. ನಮ್ಮ ಗುರಿ ಅಳುವಿನ ಕಾರಣ-ನಿವಾರಣಗಳತ್ತ ಹರಿಸದೆ ಸಂತೋಷದ ಬೀಜಗಳನ್ನು ಬಿತ್ತುವತ್ತ ಇರಬೇಕು. ಆಗ ನಾವು ಸಂತೋಷದಿಂದ ಬದುಕಲು ಸಾಧ್ಯ.

ನಮ್ಮ ಬಾಲ್ಯದ ದಿನಗಳಲ್ಲಿ ನಾವು ಸಣ್ಣಪುಟ್ಟ ಕಾರಣಗಳಿಂದ ಸಂತೋಷವನ್ನು ಕಂಡುಕೊಳ್ಳುತ್ತಿದ್ದೆವು. ಆ ಮನಃಸ್ಥಿತಿಗೆ ನಾವು ಹಿಂದಿರುಗಲು ಪ್ರಯತ್ನಿಸಬೇಕು. ಇದರರ್ಥ, ನಾವು ಸರಳವಾಗಿರಬೇಕು. ಇದೇ ಸಂತೋಷದ ಮೊದಲ ಸೂತ್ರ. ಸರಳತೆ ಸುಮ್ಮನೆ ಬರುವುದಿಲ್ಲ. ಬಾಲ್ಯದ ಸರಳತೆಗೆ ಕಾರಣ ಮನಸ್ಸಿನ ಮುಗ್ಧತೆ. ಆದರೆ ಪ್ರಬುದ್ಧತೆ ಬಂದಾಗ ನಾವೇಕೆ ಸರಳತೆ ಕಳೆದುಕೊಳ್ಳಬೇಕು? ಸಹಬಾಳ್ವೆಗೆ, ಸಮಾಜಮುಖಿ ನಡವಳಿಕೆಗೆ ಸರಳತೆಯೇ ಬೇಕು. ನಮ್ಮ ಜೀವನದಲ್ಲಿ ನಾವು ಕಾಣಲು ಅಪೇಕ್ಷೆಪಡುವ ಹಿರಿಯರನ್ನು ಜ್ಞಾಪಿಸಿಕೊಂಡರೆ, ಅವರಲ್ಲಿ ಗಂಭೀರ ಗದರಿಕೆಯ ಮುಖಗಳೆಷ್ಟು? ನಗುತ್ತ ತಮಾಷೆ ಮಾಡುತ್ತ ಇರುವ ಮುಖಗಳೆಷ್ಟು? ಎರಡನೆಯ ವರ್ಗದವರೇ ಹೆಚ್ಚು ನೆನಪಾಗುತ್ತಾರೆ. ಧರ್ಮಗುರುಗಳು ಬಹಳ ಗಂಭೀರವಾಗಿರಬೇಕು ಎಂಬ ಸಾಮಾನ್ಯ ನಂಬಿಕೆ ಇದೆ. ಆದರೆ ಇದಕ್ಕೆ ವ್ಯತಿರಿಕ್ತರಾದ ಅನೇಕ ಧರ್ಮಗುರುಗಳಿದ್ದಾರೆ; ಮತ್ತು ಹಾಗಿದ್ದರೆ ಚೆಂದ. ಶ್ರೀರಾಮಕೃಷ್ಣರ ಬಳಿ ಸೇರುತ್ತಿದ್ದ ನರೇಂದ್ರ (ಸ್ವಾಮಿ ವಿವೇಕಾನಂದ) ಮತ್ತು ಯುವಕಭಕ್ತರನ್ನು ಅವರು ಎಷ್ಟು ನಗಿಸುತ್ತಿದ್ದರೆಂದರೆ, ಕೊನೆಗೆ ನರೇಂದ್ರ, 'ಮಹಾಶಯರೆ, ದಯವಿಟ್ಟು ನಿಲ್ಲಿಸಿ. ಇನ್ನು ನಗಲಾರೆವು. ನಕ್ಕು ನಕ್ಕು ಪಕ್ಕೆಯೆಲ್ಲ ನೋಯುತ್ತಿದೆ' ಎಂದು ಕೋರಿಕೊಳ್ಳುತ್ತಿದ್ದನಂತೆ. ಮುಂದೆ ಅಮೆರಿಕೆಯಲ್ಲಿ ಸ್ವಾಮಿ ವಿವೇಕಾನಂದರನ್ನು 'ಧರ್ಮಗುರುಗಳೆಂದರೆ ಗಂಭೀರವಾಗಿರಬೇಕು. ಆದರೆ ನೀವು ಹಾಗಿಲ್ಲವಲ್ಲ?' ಎಂದು ಪ್ರಶ್ನಿಸಿದಾಗ ಅವರು, 'ಭಗವಂತ ಆನಂದಸ್ವರೂಪಿ. ಅವನ ಬಗ್ಗೆ ಬೋಧಿಸುವ ಧರ್ಮಗುರುವೇಕೆ ಗಂಭೀರವಾಗಿರಬೇಕು? ಯಾರಾದರೂ ಹಾಗಿದ್ದರೆ ಅವರು ಮಲಬದ್ಧತೆಯಿಂದ ನರಳುತ್ತಿದ್ದಾರೆ ಎಂದು ಭಾವಿಸಬೇಕಷ್ಟೆ' ಎಂದರಂತೆ. ಸರಳತೆ ಸಂತೋಷದ ಮೊದಲ ಸೂತ್ರ.

'ತಾಳುವಿಕೆಗಿಂತ ತಪವು ಇಲ್ಲ' ಎಂಬ ಮಾತಿದೆ. ತಾಳ್ಮೆಯಿಂದ ಸಮಾಧಾನ, ಸಮಾಧಾನದಿಂದ ಸಂತೋಷ. ನಾವು ಪ್ರವಾಸಕ್ಕೆ ಹೋದಾಗ ಅಲ್ಲಿನ ಜನರ ವರ್ತನೆಯನ್ನು ಗಮನಿಸಬೇಕು. ಕೆಲವರು ನಿಧಾನವಾಗಿ ಸುತ್ತಲಿನ ಪರಿಸರದ ಸೊಬಗನ್ನೋ ಅಲ್ಲಿನ ವಿಶೇಷ ತಿನಿಸನ್ನೋ ಆಸ್ವಾದಿಸುತ್ತಿದ್ದರೆ, ಇನ್ನು ಕೆಲವರು ಬೇಗಬೇಗ ಎಲ್ಲವನ್ನೂ ಕ್ಯಾಮೆರಾದಲ್ಲಿ ಸೆರೆಹಿಡಿದು, ಗಬಗಬನೆ ಖಾದ್ಯಗಳನ್ನು ನುಂಗಿ ತಮ್ಮ ತಂಡದವರಿಗೆ, 'ಮುಂದಿನ ಪಾಯಿಂಟ್‌ಗೆ ಹೊತ್ತಾಯಿತು ನಡೆಯಿರಿ, ನಡೆಯಿರಿ. ಇಲ್ಲದಿದ್ದರೆ ಇಂದು ನೋಡಬೇಕಾದ ಎಲ್ಲ ಸ್ಥಳಗಳನ್ನು ನೋಡಿ ಮುಗಿಸಲಾಗುವುದಿಲ್ಲ' ಎಂದು ಆತುರಪಡಿಸುತ್ತಿರುತ್ತಾರೆ. ಇವರು ಪ್ರವಾಸವನ್ನು ಆನಂದಿಸಲು ಬಂದಿಲ್ಲ, ಪಟ್ಟಿಯಲ್ಲಿರುವ ಸ್ಥಳಗಳನ್ನು 'ಮುಗಿಸಲು' ಬಂದಿದ್ದಾರೆ! ಉಂಡದ್ದು ಅರಗಲು ಸಮಯ ಬೇಕಾದರೆ ಕಂಡದ್ದು ಆಳದ ಅರಿವಾಗಲು ಸಮಯ ಬೇಡವೆ? ನಿಧಾನವೇ ಪ್ರಧಾನ ಎಂಬುದು ಬಂಡಿಗೂ ಬಾಳಬಂಡಿಗೂ ಅನ್ವಯವಾಗುವ ಸೂತ್ರ. ಪದವಿ ಮುಗಿಸಬೇಕು, ಕೆಲಸ ಗಿಟ್ಟಿಸಬೇಕು, ದುಡಿಯಬೇಕು, ಸಂಸಾರ ಆರಂಭಿಸಬೇಕು, ಮಕ್ಕಳಾಗಬೇಕು, ಬಡ್ತಿ, ಕಾರು, ಮನೆ ….. ಓ..ಪಟ್ಟಿ ದೊಡ್ಡದು. ಇಲ್ಲಿನ ಎಲ್ಲ ಮಜಲುಗಳ ಮಜಾ ಅನುಭವಿಸದಿದ್ದರೆ ಗಾಣದ ಕೋಣನಿಗೂ ನಮಗೂ ಇರುವ ವ್ಯತ್ಯಾಸವೇನು? ಮೆರವಣಿಗೆಯಲ್ಲಿ ಸಾಗುವಾಗಲೂ ಒಮ್ಮೊಮ್ಮೆ ಹೊರಗೆ ನಿಂತು ಅದು ಸಾಗುವ ಚೆಂದವನ್ನು ಗಮನಿಸಬೇಕು. ಬದುಕಿನ ಮೆರವಣಿಗೆಯನ್ನೂ ಅಷ್ಟೆ! ತಾಳುವಿಕೆ ಸಂತೋಷದ ಎರಡನೆ ಸೂತ್ರ.

ಶಾಂತಗುಣ ಸಂತೋಷದ ಮೂರನೆಯ ಸೂತ್ರ. ಸಂತೋಷ ನಾಶವಾಗುವುದೇ ಮನಸ್ಸಿನ ಕದಡುವಿಕೆಯಿಂದ. ಆ ಕದಡುವಿಕೆಯೇ ಅಶಾಂತಿ. ಆ ಅಶಾಂತಿಗೆ ಕಾರಣವನ್ನು ನಾವು ಹೊರಗೆ ಹುಡುಕುತ್ತೇವೆ. ಅವರಿವರ ಕಡೆ ಬೊಟ್ಟು ಮಾಡಿ ನಮ್ಮ ನೆಮ್ಮದಿಯನ್ನು ಕಳೆದುಕೊಳ್ಳುತ್ತೇವೆ. ಸಂತೋಷದ ನೆಲೆ ನಮ್ಮ ಚಿತ್ತ, ನಮ್ಮ ಹೃದಯವೇ ಅದರ ಬಿತ್ತ. ಖಲೀಲ್ ಗಿಬ್ರಾನ್ ಇದನ್ನು ಸೊಗಸಾಗಿ ಹೇಳುತ್ತಾನೆ: 'ಸಂತೋಷವೆಂಬ ಬಳ್ಳಿ ಬೇರುಬಿಟ್ಟು ಬೆಳೆಯುವುದು ನಮ್ಮ ಹೃದಯದೊಳಗೇ, ಹೊರಗಡೆಯಲ್ಲ.' ನಮ್ಮ ಸಂತೋಷ ಹೊರಗಿನ ಪ್ರಭಾವಗಳಿಂದ ಹಾಳಾಗುತ್ತಿದೆ ಎನಿಸಿದರೆ ಅದು ವ್ಯಕ್ತಿತ್ವದ ದೌರ್ಬಲ್ಯವೇ ಹೊರತು ಜಗತ್ತಿನ ದೋಷವಲ್ಲ. ಅದನ್ನು ಮೆಟ್ಟಿ ನಿಲ್ಲುವ ಗಟ್ಟಿತನ ಬೆಳೆದರೆ ಸಂತೋಷದಲ್ಲಿ ನೆಲೆ ನಿಲ್ಲಲು ಸಾಧ್ಯ. ಇಲ್ಲವಾದರೆ, ಮೇಕೆಯನ್ನು ಭೂತವೆಂದು ನಂಬಿ ಕಳ್ಳರ ಕೈಗೊಪ್ಪಿಸಿ ಪೇರಿಕಿತ್ತ ಮೂಢನಂತಾಗುತ್ತದೆ ನಮ್ಮ ಸ್ಥಿತಿ. ಶಾಂತಿ ಎಂದರೆ ಸುಮ್ಮನೆ ತಟಸ್ಥವಾಗಿರುವುದಲ್ಲ. ಜೀವನದ ಎಲ್ಲ ಸವಾಲುಗಳ ಮಧ್ಯೆಯೂ ಲಯ ತಪ್ಪದ ನಡೆಯೇ ಶಾಂತಿ. ಸಂತೋಷವಾಗಿರುವುದು ನಮ್ಮ ಹಕ್ಕು, ಜವಾಬ್ದಾರಿ. ಮೇಲಿನ ಸೂತ್ರಗಳ ನೆರವಿನಿಂದ ಅದನ್ನು ಸಾಧಿಸಿ ಸಂತೋಷವಾಗಿರೋಣ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ-2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮೊದಲ ಆಂಗ್ಲೋ-ಮರಾಠ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಘಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆ ಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣ ರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ(ರಘುನಾಥ ರಾವ್) ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775-1782ರ ವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್ ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರಿಸಲಾಗದೇ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು

1) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?

ಉತ್ತರ: ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನು ತನ್ನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಲು ಗವರ್ನರ್ ಜನರಲ್‌ನ ಸಮ್ಮತಿ ಬೇಕು.
6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

3) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಮೊದಲ ರಾಜ್ಯ ಯಾವುದು?

ಉತ್ತರ:- ಹೈದರಾಬಾದ್ ಸಂಸ್ಥಾನ.

4) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ರಾಜ್ಯಗಳನ್ನು ಹೆಸರಿಸಿ

ಉತ್ತರ:- ಮೈಸೂರು, ಔದ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು

5) ಎರಡನೇ ಆಂಗ್ಲೋ-ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ಈ ಯುದ್ಧಕ್ಕೆ ಕಾರಣವಾಯಿತು. ಹೋಳ್ಕರ್ ಮನೆತನದ ಯಶವಂತರಾವ್ ಒಂದು ಕಡೆಯಾದರೆ ಸಿಂಧಿಯಾ ಮನೆತನದ ದೌಲತ್ ರಾವ್ ಹಾಗೂ ಪೇಶ್ವೆ ಎರಡನೇ ಬಾಜಿರಾವ್ ಇನ್ನೊಂದು ಕಡೆಗಿದ್ದರು. 1802ರಲ್ಲಿ ಹೋಳ್ಕರ್ ಸೈನ್ಯವು ಸಿಂಧಿಯಾ ಮತ್ತು ಪೇಶ್ವೆಯ ಸೈನ್ಯವನ್ನು ಸೋಲಿಸಿತು. ಪೇಶ್ವೆ ಬ್ರಿಟಿಷರ ಸಹಾಯ ಯಾಚಿಸಿದನು. ಲಾರ್ಡ್ ವೆಲ್ಲೆಸ್ಲಿಗೆ ಮರಾಠರ ಆಂತರಿಕ ವಿಚಾರದಲ್ಲಿ ಪ್ರವೇಶಿಸಲು ಅವಕಾಶ ಸಿಕ್ಕಿತು. ಪೇಶ್ವೆಯು ಬೆಸ್ಸಿನ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್, ಭೋಂಸ್ಲೆ, ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು. 1803-1805ರವರೆಗೆ ಮರಾಠ ಮನೆತನಗಳ ಸೇನೆಯನ್ನು ವೆಲ್ಲೆಸ್ಲಿಯು ಅನೇಕ ಯುದ್ಧಗಳಲ್ಲಿ ಮಣಿಸಿದನು. ಆದರೆ ಅವನ ಯುದ್ಧಪ್ರಿಯ ನೀತಿಯಿಂದ ಕಂಪನಿಗೆ ಸಾಲದ ಹೊರೆ ಹೆಚ್ಚಿತು. ಇದರಿಂದ ತೀವ್ರ ಟೀಕೆಗೆ ಒಳಗಾದ ವೆಲ್ಲೆಸ್ಲಿಯು ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಿದನು. ಇದರಿಂದ ಆ ಪ್ರದೇಶದಲ್ಲಿ ತಾತ್ಕಾಲಿಕ ಶಾಂತಿ ನೆಲೆಸಿತು.

6) ಮೂರನೇ ಆಂಗ್ಲೋ-ಮರಾಠ ಯುದ್ಧದ ಬಗ್ಗೆ ಬರೆಯಿರಿ

ಉತ್ತರ: ಮರಾಠ ಮನೆತನಗಳು ತಮ್ಮ ಘನತೆ ಮತ್ತು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ನಡೆಸಿದವು. ಪೇಶ್ವೆ ಕೂಡ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಹವಣಿಸುತ್ತಿದ್ದನು. 1817ರಲ್ಲಿ ಪೇಶ್ವೆಯು ಪೂನಾದಲ್ಲಿ ಬ್ರಿಟಿಷ್ ರೆಸಿಡೆನ್ಸಿಯ ಮೇಲೆ ದಾಳಿ ನಡೆಸಿ ಸುಟ್ಟನು. ನಾಗಪುರದ ಅಪ್ಪಾ ಸಾಹೇಬ ಮತ್ತು ಮಲ್ಹಾರ ರಾವ್ ಹೋಳ್ಕರ್ ಕೂಡ ಬ್ರಿಟಿಷರ ವಿರುದ್ಧ ದಂಗೆ ಎದ್ದು ಸೋತರು. ಅಂತಿಮವಾಗಿ ಪೇಶ್ವೆ ಎರಡನೇ ಬಾಜಿರಾಯನು ಬ್ರಿಟಿಷರ ವಿರುದ್ಧ 1818ರಲ್ಲಿ ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು. ಬ್ರಿಟಿಷರು ಪೇಶ್ವೆ ಪದವಿಯನ್ನು ರದ್ದುಗೊಳಿಸಿ ಬಾಜಿರಾಯನಿಗೆ ವಿಶ್ರಾಂತಿ ವೇತನ ನೀಡಿದರು. ಬದಲಿಗೆ ಶಿವಾಜಿಯ ವಂಶಸ್ಥ ಪ್ರತಾಪ ಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ, ಮರಾಠರ ಸಾಂಪ್ರದಾಯಕ ಮುಖಂಡನಾಗಿಸುವ ಮೂಲಕ ಮರಾಠರ ಪ್ರತಿರೋಧವನ್ನು ನಿಗ್ರಹಿಸಿದರು.

7) ಆಂಗ್ಲೋ-ಸಿಖ್ ಯುದ್ಧಗಳ ಕುರಿತು

ಉತ್ತರ: 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. 1809ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು. 1845ರ ಡಿಸೆಂಬರ್‌ನಲ್ಲಿ ಬ್ರಿಟಿಷರಿಗೂ ಪಂಜಾಬ್ ಸೈನ್ಯಕ್ಕೂ ಯುದ್ಧ ಆರಂಭವಾಯಿತು. ವಿದೇಶಿಯರಿಂದ ಇರಬಹುದಾದ ಅಪಾಯವನ್ನರಿತ ಹಿಂದೂ, ಮುಸಲ್ಮಾನ ಹಾಗೂ ಸಿಖ್ಖರೆಲ್ಲರೂ ಬ್ರಿಟಿಷರನ್ನು ಮಣಿಸಲು ಒಂದಾದರು. ಅಂತಿಮವಾಗಿ ಕೆಲವು ದೇಶದ್ರೋಹಿ ನಾಯಕರಿಂದ ಸೋಲೊಪ್ಪಬೇಕಾಯಿತು. ಅವಮಾನಕರ ಲಾಹೋರ್ ಒಪ್ಪಂದಕ್ಕೆ 1846ರಲ್ಲಿ ಸಹಿ ಹಾಕಬೇಕಾಯಿತು. ಅಂದಿನಿಂದ ಬ್ರಿಟಿಷ್ ರೆಸಿಡೆಂಟನು ಪಂಜಾಬಿನ ನಿಜವಾದ ಆಡಳಿತಗಾರನಾದನು. ಹೀಗೆ ಪಂಜಾಬ್ ಬ್ರಿಟಿಷ್ ಆಶ್ರಿತ ರಾಜ್ಯವಾಯಿತು. 1848ರಲ್ಲಿ ಪಂಜಾಬಿನ ಮೇಲೆ ನೇರ ಬ್ರಿಟಿಷ್ ಆಳ್ವಿಕೆಯನ್ನು ಹೇರಲು ಹೊರಟಾಗ ಸಿಖ್ಖರು ಪ್ರತಿಭಟಿಸಿದರು. ಈ ಪ್ರತಿಭಟನೆಗಳ ನೇತೃತ್ವವನ್ನು 'ಚಟ್ಟಾರ್ ಸಿಂಗ್ ಅಟ್ಟಾರಿವಾಲ' ಮತ್ತು 'ಮೂಲರಾಜ್' ಅವರು ಕ್ರಮವಾಗಿ ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ವಹಿಸಿದ್ದರು. ಮತ್ತೆ ಸಿಖ್ಖರಿಗೆ ಸೋಲಾಯಿತು. ಅಂತಿಮವಾಗಿ ಲಾರ್ಡ್ ಡಾಲ್‌ಹೌಸಿಯು ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡನು.

8) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕುರಿತು ಬರೆಯಿರಿ.

ಉತ್ತರ:- 1848ರಲ್ಲಿ ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದ ಡಾಲ್‌ಹೌಸಿಯು ಭಾರತದ ಎಲ್ಲ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸುವ ಅಂತಿಮ ಪ್ರಯತ್ನವನ್ನು ನಡೆಸಿದ. ಡಾಲ್‌ಹೌಸಿಯು ತನ್ನ ವಿಸ್ತರಣಾ ನೀತಿಯನ್ನು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ಮೂಲಕ ಸಾಧಿಸಿದನು. (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC PHYSICS

Chapter – 1
ELECTRIC CHARGES AND FIELDS

Answer the following:-

1. Deduce Coulomb's law from Gauss' theorem.

Ans:- DEDUCTION OF COULOMB'S LAW FROM GAUSS' THEOREM

Consider two point charges q_1 and q_2 separated by a distance r. Draw a sphere of radius r with O (position of charge q_1) as the centre. Surface of this sphere is called **Gaussian Surface.**

Now consider a small area element of area dS over the sphere. The angle between $d\vec{S}$ and electric field intensity $\vec{E}$ is zero i.e., $\theta = 0^0$.



According to Gauss' theorem,

$$\oint_S \vec{E}.d\vec{S} = \frac{q_1}{\epsilon_0} \quad (or) \quad \oint_S E\,dS\cos\theta = \frac{q_1}{\epsilon_0}$$

$$(or) \quad \oint_S E\,dS\cos 0^0 = \frac{q_1}{\epsilon_0}$$

$$(or) \quad \oint_S E\,dS = \frac{q_1}{\epsilon_0} \qquad (\cos 0^0 = 1)$$

Since $\vec{E}$ is constant at all points on the Gaussian surface, so

$$E\oint_S dS = \frac{q_1}{\epsilon_0}.$$

But $\oint_S dS$ = surface area of the sphere $= 4\pi r^2$

$$\therefore E \times 4\pi r^2 = \frac{q_1}{\epsilon_0} \text{ (or) } E = \frac{1}{4\pi\epsilon_0}\frac{q_1}{r^2} \quad ....(i)$$

This is the value of electric field intensity at point P where charge q_2 is placed.

$\therefore$ force experienced by q_2 is given by

$$F = q_2 E = q_2 \times \frac{1}{4\pi\epsilon_0}\frac{q_1}{r^2}$$

$$\text{ie., } F = \frac{1}{4\pi\epsilon_0}\frac{q_1 q_2}{r^2} \quad ....(ii)$$

Eqn (ii) is mathematical from of Coulomb's law

2. Find the Electric field intensity due to an infinitely long straight uniformly charged wire or line applying Gauss' theorem.

Ans:- Consider an infinite and very thin straight wire having uniform linear charge density (i.e., charge per unit length) λ. This wire is symmetrical about linear axis.

To calculate the electric field intensity E at a point P, distant r from the line drawn on imaginary **cylinder** (*Gaussian surface*) of radius *r* and length *l* around the charged line.



The charge enclosed by the Gaussian surface, $q = \lambda l$.

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\lambda l}{\epsilon_0}$$

The charge enclosed by the Gaussian surface, $q = \lambda l$.

According to Gauss' theorem,

$$\oint_S \vec{E}.d\vec{S} = \frac{q}{\epsilon_0} = \frac{\lambda l}{\epsilon_0} \quad ....(i)$$

The cylindrical Gaussian surface is divided into three parts I, II and III i.e. top face, bottom face and curved surface respectively as shown in fig above.

$\therefore$ eqn. (i) can be written as,

$$\oint \vec{E}.\vec{dS} = \int_I \vec{E}.\vec{dS} + \int_{II} \vec{E}.\vec{dS} + \int_{III} \vec{E}.\vec{dS} = \frac{\lambda l}{\epsilon_0} \quad ....(ii)$$

For surfaces I and II, angle between $\vec{E}$ and $d\vec{S}$ is 90^0, so $\vec{E} \cdot d\vec{S} = E\ dS\cos\theta$

$$= E\ dS\cos 90 = 0$$

for these surfaces. Electric flux will cross through the curved surface only.

$\therefore$ eqn. (ii) becomes

$$\oint_S \vec{E}.d\vec{S} = \int_{III} \vec{E}.d\vec{S} = \frac{\lambda l}{\epsilon_0}$$

$$(or) \quad \oint_{III} \vec{E}.d\vec{S} = \frac{\lambda l}{\epsilon_0}$$

$$(or) \quad \int_{III} E\,ds\ \cos 0^0 = \frac{\lambda l}{\epsilon_0}$$

$$\text{i.e., } \int_{III} E\,ds = \frac{\lambda l}{\epsilon_0}$$

Since E is constant over the Gaussian surface.

$$\therefore \quad E\int_{III} ds = \frac{\lambda l}{\epsilon_0} \quad ....(iii)$$

But $\int_{III} ds$ = area of curved surface of the cylinder

$$= 2\pi r l$$

$$\therefore E \times 2\pi r l = \frac{\lambda l}{\epsilon_0} \text{ or } E = \frac{\lambda}{2\pi\epsilon_0 r}$$

Thus, $E \,\alpha\, \frac{1}{r}$

In vector from, $\vec{E} = \frac{\lambda}{2\pi\epsilon_0 r}\ n,$

where, n is a unit vector perpendicular to the curved surface of the wire.

Contd/-

ಮಹದೇಶ್ವರ ಬೆಟ್ಟದಲ್ಲಿ ಕಿರಣ್ ಸೆರೆ • ಕೃತ್ಯದ ಬಳಿಕ ಮುಡಿ ಕೊಡಲು ಹೋಗಿದ್ದ ಆರೋಪಿ

ಭೂ ವಿಜ್ಞಾನಿ ಪ್ರತಿಮಾ ಕೊಲೆ: ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿರಿಯ ಭೂ ವಿಜ್ಞಾನಿ ಕೆ.ಎಸ್. ಪ್ರತಿಮಾ (43) ಕೊಲೆ ಪ್ರಕರಣ ಭೇದಿಸಿರುವ ದಕ್ಷಿಣ ವಿಭಾಗದ ಪೊಲೀಸರು, ಆರೋಪಿ ಕಿರಣ್ ನನ್ನು (32) ಚಾಮರಾಜನಗರದ ಮಹದೇಶ್ವರ ಬೆಟ್ಟದಲ್ಲಿ ಬಂಧಿಸಿದ್ದಾರೆ.

ಕಿರಣ್

‘ಜಂಬೂಸವಾರಿ ದಿಣ್ಣೆ ನಿವಾಸಿ ಕಿರಣ್, ಗುತ್ತಿಗೆ ಆಧಾರದಲ್ಲಿ ಪ್ರತಿಮಾ ಕಾರಿನ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಅಪಘಾತ ಹಾಗೂ ನಡತೆ ಕಾರಣಕ್ಕೆ ಎರಡು ತಿಂಗಳ ಹಿಂದೆಯಷ್ಟೇ ಆತನನ್ನು ಪ್ರತಿಮಾ ಕೆಲಸದಿಂದ ತೆಗೆಸಿದ್ದರು. ಇದೇ ಕಾರಣಕ್ಕೆ ಆತ, ಕೊಲೆ ಮಾಡಿರುವುದಾಗಿ ಗೊತ್ತಾಗಿದೆ’ ಎಂದು ದಕ್ಷಿಣ ವಿಭಾಗದ ಡಿಸಿಪಿ ರಾಹುಲ್‌ಕುಮಾರ್ ಶಹಾಪುರ್ ವಾಡ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಶನಿವಾರ ರಾತ್ರಿ ಕೊಲೆ ಮಾಡಿದ್ದ ಕಿರಣ್, ಭಾನುವಾರ ಬೆಳಿಗ್ಗೆ ಮೂವರು ಸ್ನೇಹಿತರ ಜೊತೆ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದ. ಅಲ್ಲಿಗೆ ತೆರಳಿದ ಪೊಲೀಸರ ವಿಶೇಷ ತಂಡ, ಅಂದೇ ಆರೋಪಿಯನ್ನು ವಶಕ್ಕೆ ಪಡೆದು ನಗರಕ್ಕೆ ಕರೆತಂದಿತ್ತು. ತಾನೇ ಕೊಲೆ ಮಾಡಿರುವುದಾಗಿ ಆರೋಪಿ ವಿಚಾರಣೆಯಲ್ಲಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ಹೇಳಿದರು.

ಕಾದು ಕುಳಿತಿದ್ದ ಚಾಲಕ: ‘ಕೆಲಸ ಹೋಗಿದ್ದರಿಂದ ಕಿರಣ್‌ಗೆ ಜೀವನ ನಿರ್ವಹಣೆ ಕಷ್ಟವಾಗಿತ್ತು. ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ವಿನಂತಿಸಲು ಶುಕ್ರವಾರ (ನ.3) ಸಂಜೆ ಪ್ರತಿಮಾ ಮನೆಗೆ ಹೋಗಿದ್ದ. ಆದರೆ, ಅವರು ಇರಲಿಲ್ಲ. ಶನಿವಾರ ಭೇಟಿಯಾಗಲು ನಿರ್ಧರಿಸಿದ್ದ ಆತ, ಸಂಜೆ 7 ಗಂಟೆ ಸುಮಾರಿಗೆ ಪ್ರತಿಮಾ ಮನೆಗೆ ಹೋಗಿದ್ದ. ಅವರಿನ್ನೂ ಬಂದಿರಲಿಲ್ಲ. ದೂರದ ನಿರ್ಜನ ಪ್ರದೇಶದಲ್ಲಿ ಕಾಯುತ್ತ ನಿಂತಿದ್ದ’ ಎಂದು ಪೊಲೀಸರು ತಿಳಿಸಿದರು.

‘ರಾತ್ರಿ 7.45ರ ಸುಮಾರಿಗೆ ಪ್ರತಿಮಾ ಕಾರಿನಲ್ಲಿ ಮನೆಗೆ ಬಂದಿದ್ದರು. ಚಾಲಕ ಚೇತನ್, ಮನೆ ಎದುರು ಕಾರು ನಿಲ್ಲಿಸಿ ತಮ್ಮ ಬೈಕ್‌ನಲ್ಲಿ ಹೊರಟು ಹೋಗಿದ್ದರು. ಅದನ್ನು ಗಮನಿಸಿದ್ದ ಕಿರಣ್, ನೇರವಾಗಿ ಮನೆಗೆ ಹೋಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ಪ್ರತಿಮಾ ಬಾಗಿಲು ತೆರೆದು ಒಳಗೆ ಹೋಗುತ್ತಿದ್ದಂತೆ, ಆರೋಪಿಯೂ ಅವರನ್ನು ಹಿಂಬಾಲಿಸಿದ. ಆತನನ್ನು ನೋಡಿದ್ದ ಪ್ರತಿಮಾ, ‘ಮನೆಗೆ ಏಕೆ ಬಂದಿದ್ದೀಯಾ? ಹೊರಟು ಹೋಗು’ ಎಂದಿದ್ದರು. ಕಾಲಿಗೆ ಬಿದ್ದಿದ್ದ ಕಿರಣ್, ‘ಕೆಲಸಕ್ಕೆ ವಾಪಸು ತೆಗೆದುಕೊಳ್ಳಿ’ ಎಂದಿದ್ದ. ‘ಸಾಧ್ಯವಿಲ್ಲ’ ಎಂದು ಪ್ರತಿಮಾ ಹೇಳಿದ್ದರು. ಸಿಟ್ಟಾದ ಆರೋಪಿ, ಪ್ರತಿಮಾ ಅವರ ವೇಲ್ ಕಸಿದುಕೊಂಡು ಕುತ್ತಿಗೆಗೆ ಬಿಗಿದಿದ್ದ. ಈ ವೇಳೆ ಮಳೆ ಜೋರಾಗಿ ಸುರಿಯುತ್ತಿದ್ದುದರಿಂದ ಪ್ರತಿಮಾ ಕೂಗಾಡಿದರೂ ಹೊರಗೆ ಧ್ವನಿ ಕೇಳಿಸಿರಲಿಲ್ಲ’ ಎಂದು ಹೇಳಿದರು.

‘ಕುತ್ತಿಗೆ ಬಿಗಿದಿದ್ದರಿಂದ ಪ್ರತಿಮಾ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಆರೋಪಿಯೇ ಅವರನ್ನು ಎತ್ತಿಕೊಂಡು ಮಲಗುವ ಕೊಠಡಿಯ ಹಾಸಿಗೆ ಮೇಲೆ ಹಾಕಿದ್ದ. ಅಡುಗೆ ಕೊಠಡಿಯಲ್ಲಿದ್ದ ಚಾಕು ತಂದು ಕತ್ತು ಕೊಯ್ದಿದ್ದ. ಉಸಿರಾಟ ನಿಂತಿದ್ದನ್ನು ಖಾತ್ರಿಪಡಿಸಿಕೊಂಡು ಚಾಕು ಸಮೇತ ಸ್ಥಳದಿಂದ ಹೊರಟು ಹೋಗಿದ್ದ’ ಎಂದು ತಿಳಿಸಿದರು.

ಹೋಟೆಲ್ ಕೊಠಡಿಯಲ್ಲಿ ಮದ್ಯ: ‘ಪ್ರತಿಮಾ ಮನೆಯಿಂದ ಹೋಟೆಲ್ ಕೊಠಡಿಗೆ ಹೋಗಿದ್ದ ಆರೋಪಿ, ಮೂವರು ಸ್ನೇಹಿತರಿಗೆ ಕರೆ ಮಾಡಿ, ಪಾರ್ಟಿ ಮಾಡಲು ಕರೆಸಿಕೊಂಡಿದ್ದ. ಎಲ್ಲರೂ ಸೇರಿ ಮದ್ಯ ಕುಡಿದಿದ್ದರು. ಭಾನುವಾರ ಬೆಳಿಗ್ಗೆ 5.30ಕ್ಕೆ ಮೊಬೈಲ್ ಸ್ವಿಚ್ಡ್ ಆಫ್ ಮಾಡಿದ್ದ ಆರೋಪಿ, ‘ದೇವರಿಗೆ ಮುಡಿ ನೀಡಬೇಕು’ ಎಂದು ಸ್ನೇಹಿತರಿಗೆ ಹೇಳಿದ್ದ. ಸ್ನೇಹಿತನದ್ದೇ ಆಟೊದಲ್ಲಿ ಎಲ್ಲರೂ ಮಹದೇಶ್ವರ ಬೆಟ್ಟದತ್ತ ಹೊರಟಿದ್ದರು. ಬೆಟ್ಟ ತಲುಪಿ, ಸ್ನಾನ ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಜೊತೆ ಸ್ನೇಹಿತರಿರುವ ಮಾಹಿತಿ ಲಭ್ಯವಾಗಿತ್ತು. ಅವರ ಮೊಬೈಲ್ ಸಂಖ್ಯೆ ಆಧರಿಸಿ ಮಾಹಿತಿ ಕಲೆಹಾಕಿದಾಗ, ಎಲ್ಲರೂ ಮಹದೇಶ್ವರ ಬೆಟ್ಟದಲ್ಲಿರುವುದು ಗೊತ್ತಾಯಿತು. ಪೊಲೀಸರು, ಕಿರಣ್‌ನನ್ನು ಹಿಡಿದುಕೊಂಡಾಗಲೇ, ಆತ ಕೊಲೆ ಆರೋಪಿ ಎಂಬುದು ಸ್ನೇಹಿತರಿಗೆ ಗೊತ್ತಾಗಿತ್ತು’ ಎಂದು ಹೇಳಿದರು.

‘ಕೆಲಸಕ್ಕೆ ತೆಗೆದುಕೊಳ್ಳಲು ಅವರು ನಿರಾಕರಿಸಿದರು. ಸಿಟ್ಟಾಗಿ ವೇಲ್‌ನಿಂದ ಕುತ್ತಿಗೆ ಬಿಗಿದೆ. ಪ್ರಜ್ಞೆ ತಪ್ಪಿದ್ದರು. ಎಚ್ಚರಗೊಂಡರೆ, ಪೊಲೀಸರಿಗೆ ಮಾಹಿತಿ ನೀಡುತ್ತಾರೆಂದು ಭಾವಿಸಿ ಚಾಕುವಿನಿಂದ ಕತ್ತು ಕೊಯ್ದೆ’ ಎಂದು ಆರೋಪಿ ಹೇಳಿಕೆ ನೀಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಕೃತ್ಯಕ್ಕೆ ಬಳಸಿದ್ದ ಚಾಕುವನ್ನು ಆರೋಪಿ ನಿರ್ಜನ ಪ್ರದೇಶವೊಂದರಲ್ಲಿ ಬಿಸಾಕಿದ್ದು, ಅದಕ್ಕಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ತನಿಖಾ ತಂಡಕ್ಕೆ ಮೆಚ್ಚುಗೆ: ಪ್ರಕರಣ ದಾಖಲಾದ ಕೆಲ ಗಂಟೆಗಳೊಳಗೆ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ದಕ್ಷಿಣ ವಿಭಾಗದ ತನಿಖಾ ತಂಡದ ಕಾರ್ಯಕ್ಕೆ ಪೊಲೀಸ್ ಕಮಿಷನರ್ ಬಿ. ದಯಾನಂದ್ ಮೆಚ್ಚುಗೆ ವ್ಯಕ್ತಪಡಿಸಿದರು.

ಡಿಸಿಪಿ ರಾಹುಲ್‌ಕುಮಾರ್ ಶಹಾಪುರ್‌ವಾಡ್ ಮಾರ್ಗದರ್ಶನದಲ್ಲಿ ಎಸಿಪಿ ಎನ್. ಪವನ್ ನೇತೃತ್ವದಲ್ಲಿ ರಚಿಸಲಾಗಿದ್ದ ತನಿಖಾ ತಂಡದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಜಗದೀಶ್, ಎನ್. ಜಗದೀಶ್, ಪಿಎಸ್‌ಐಗಳಾದ ಕೆ.ಆರ್. ಶ್ರೀನಿವಾಸ್, ನಿರಂಜನ್, ಜ್ಯೋತಿ, ಕಾರ್ತಿಕ್, ಪ್ರವೀಣ್ ಶೆಟ್ಟಿ, ವಿನಯ್, ಸತೀಶ್, ನಾಗರಾಜು, ಕೆಂಡಗಣ್ಣಸ್ವಾಮಿ, ಕೆ.ಎನ್. ಪ್ರಸನ್ನಕುಮಾರ್, ಸಿಬ್ಬಂದಿಯಾದ ಗುರುಮೂರ್ತಿ, ವೆಂಕಟೇಶ್, ಎಸ್.ಎಸ್. ಪ್ರದೀಪ್, ಮೃತ್ಯುಂಜಯ, ಕೆ. ಬಸವರಾಜು, ಮಂಜುನಾಥ್, ರಂಗನಾಥ್, ಶಿವಪುಟ್ಟೇಗೌಡ, ಶಿವರಾಜಯ್ಯ, ಗಿರೀಶ್, ಶ್ರೀನಿವಾಸ್, ವಿಶ್ವನಾಥ್, ನರಸಿಂಹಮೂರ್ತಿ, ಗೋಪಾಲ್ ನಾಯಕ್ ಇದ್ದರು.

ಮುಖ್ಯಾಂಶಗಳು

- ಒಂದು ತಿಂಗಳು ಪತ್ನಿಯ ಮನೆಯಲ್ಲಿದ್ದ ಆರೋಪಿ
- ₹13,000 ಸಂಬಳ ಪಡೆಯುತ್ತಿದ್ದ ಕಿರಣ್
- ಸ್ನೇಹಿತರ ಮೊಬೈಲ್ ನೀಡಿದ್ದ ಸುಳಿವು

‘ಹಿರಿಯ ಅಧಿಕಾರಿ ಮನೆಗೆ ಹೋಗಿ ಹತ್ಯೆ ಮಾಡಲಾಗಿದೆ. ಇದು ಸರ್ಕಾರದ ವೈಫಲ್ಯಕ್ಕೆ ಹಿಡಿದ ಕನ್ನಡಿ. ಯಾವ ಅಧಿಕಾರಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯ

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಪ್ರತಿಮಾ ಅಂತ್ಯಸಂಸ್ಕಾರ

ತೀರ್ಥಹಳ್ಳಿ: ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕಿ ಕೆ.ಎಸ್. ಪ್ರತಿಮಾ (43) ಅವರ ಅಂತ್ಯಸಂಸ್ಕಾರ ಪಟ್ಟಣದಲ್ಲಿ ಸೋಮವಾರ ನಡೆಯಿತು.

ಸಮೀಪದ ತುಡ್ಕಿ ಗ್ರಾಮದ ಸ್ವಗೃಹದಲ್ಲಿ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಅಂತಿಮ ದರ್ಶನ ಪಡೆದರು. ಅವರ ಪುತ್ರ ಪಾರ್ಥ ಅವರು ತಾಯಿಯ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು. ಪತಿ ಸತ್ಯನಾರಾಯಣ ಸೇರಿದಂತೆ ಕುಟುಂಬದವರು, ಸಾರ್ವಜನಿಕರು ಇದ್ದರು.

ಪ್ರತಿಮಾ ಅವರು ತುಡ್ಕಿ ಗ್ರಾಮದಲ್ಲಿ ನಿರ್ಮಿಸಿದ್ದ ನೂತನ ಮನೆಯಲ್ಲಿ ವಿಜಯದಶಮಿಯ ಹಿಂದಿನ ದಿನ ಗೃಹಪ್ರವೇಶ ಕಾರ್ಯಕ್ರಮ ನಡೆದಿತ್ತು. ಸಮಾರಂಭದಲ್ಲಿ ಪ್ರತಿಮಾ ಸಂಭ್ರಮದಿಂದ ಭಾಗವಹಿಸಿದ್ದರು.

ನನ್ನನ್ನು ಜೈಲಿಗೆ ಕಳಿಸಲು ಸಂಚು ಶಾಸಕ ಮುನಿರತ್ನ ಆರೋಪ

ಬೆಂಗಳೂರು: ‘ಪ್ರತಿಮಾ ಕೊಲೆ ಪ್ರಕರಣದಲ್ಲಿ ನನ್ನನ್ನು ತಿಹಾರ್ ಜೈಲಿಗೆ ಕಳಿಸಬೇಕೆಂದು ಕೆಲವರು ಪ್ರಯತ್ನಿಸುತ್ತಿದ್ದಾರೆ’ ಎಂದು ಬಿಜೆಪಿ ಶಾಸಕ ಮುನಿರತ್ನ ಆರೋಪಿಸಿದ್ದಾರೆ.

‘ಲೋಕಸಭೆ ಚುನಾವಣೆ ಮುಗಿಯುವರೆಗೆ ನಾನು ಹೊರಗೆ ಇರಬಾರದು ಎಂದು ನನ್ನನ್ನು ಟಾರ್ಗೆಟ್ ಮಾಡುತ್ತಿದ್ದಾರೆ. ಅದಕ್ಕಾಗಿ ಪ್ರತಿಮಾ ಕೊಲೆ ಪ್ರಕರಣದಲ್ಲಿ ನನ್ನನ್ನು ತಳುಕು ಹಾಕಿ ಜೈಲಿಗೆ ಕಳುಹಿಸಲು ಸಂಚು ನಡೆಸಲಾಗಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಮನೆ ಮುಂದೆ ನಡೆಯುವ ಅಪಘಾತವನ್ನೂ ನನ್ನ ತಲೆಗೆ ಕಟ್ಟುವ ಕೆಲಸ ನಡೆದಿದೆ. ಪ್ರತಿಮಾ ಕೊಲೆ ಪ್ರಕರಣದ ತನಿಖೆ ನಡೆಯುತ್ತಿದೆ. ಈಗ ಮಾತನಾಡುವುದು ಸರಿಯಲ್ಲ. ತನಿಖೆ ಮುಗಿದ ಬಳಿಕ ಮಾತನಾಡುತ್ತೇನೆ. ರಾಜಕೀಯವಾಗಿ ಮುಗಿಸಬೇಕು ಎನ್ನುವವರಿಗೆ ಆಗ ಸೂಕ್ತ ಉತ್ತರ ನೀಡುತ್ತೇನೆ’ ಎಂದು ಮುನಿರತ್ನ ಹೇಳಿದರು.

‘ಚಿನ್ನಾಭರಣ ಕದ್ದೊಯ್ದರೆ ಸಿಕ್ಕಿ ಬೀಳುವ ಭಯ’

‘ಕೊಲೆ ಮಾಡಿದ ಬಳಿಕ ಕಿರಣ್, ಪ್ರತಿಮಾ ಬಳಿಯ ಚಿನ್ನಾಭರಣ ಹಾಗೂ ನಗದು ಮುಟ್ಟರಲಿಲ್ಲ. ಚಿನ್ನಾಭರಣ ಕದ್ದೊಯ್ದರೆ ತನ್ನ ಸುಳಿವು ಸಿಗಬಹುದೆಂದು ಕಿರಣ್ ಅಂದುಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

‘ಚಿನ್ನಾಭರಣ ಏಕೆ ಮುಟ್ಟಲಿಲ್ಲ ಎಂದು ಪ್ರಶ್ನಿಸಿದಾಗ, ‘ಚಿನ್ನಾಭರಣ ಕದ್ದು, ಮನೆಗೆ ಕೊಂಡೊಯ್ದರೆ ತಂದೆ–ತಾಯಿ ಬೈಯುತ್ತಾರೆ. ಆಗ, ಅವುಗಳನ್ನು ಎಲ್ಲಾದರೂ ಗಿರವಿ ಇರಿಸಬೇಕು. ಆಗ ನನ್ನ ಫೋಟೊ ಹಾಗೂ ಸಹಿ ಪಡೆಯುತ್ತಾರೆ. ಚಿನ್ನಾಭರಣ ಕಳವಾಗಿದ್ದರೆ, ಪೊಲೀಸರು ಮೊದಲು ಎಲ್ಲ ಗಿರವಿ ಅಂಗಡಿ ಹಾಗೂ ಏಜೆನ್ಸಿಗಳಲ್ಲಿ ಹುಡುಕಾಡುತ್ತಾರೆ. ಅವಾಗ, ನನ್ನ ಮಾಹಿತಿಯೂ ಸಿಗುತ್ತದೆ ಎಂಬ ಭಯ ಇತ್ತು’ ಎಂಬುದಾಗಿ ಆರೋಪಿ ಹೇಳಿದ’ ಎಂದು ಪೊಲೀಸರು ಮಾಹಿತಿ ನೀಡಿದರು.

‘13 ದಿನ ಜೈಲಿನಲ್ಲಿದ್ದ ಕಿರಣ್’

‘ಆರೋಪಿ ಕಿರಣ್, ಅಪರಾಧ ಹಿನ್ನೆಲೆಯುಳ್ಳವ. ಸುಲಿಗೆಗೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಈತನ ವಿರುದ್ಧ ಕೋಣನಕುಂಟೆ ಠಾಣೆಯಲ್ಲಿ 2017ರಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ಈತನನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘13 ದಿನ ಜೈಲಿನಲ್ಲಿದ್ದ ಕಿರಣ್, ಜಾಮೀನು ಮೇಲೆ ಹೊರಬಂದಿದ್ದ. ಇದಾದ ನಂತರ ಚಾಲಕನಾಗಿ ಕೆಲಸ ಸಿಕ್ಕಿತ್ತು’ ಎಂದು ತಿಳಿಸಿದರು.

‘ತವರು ಮನೆಗೆ ಹೋಗಿದ್ದ ಪತ್ನಿ’

‘ಆರೋಪಿ ಕಿರಣ್‌ನ ತಂದೆ ಸರ್ಕಾರಿ ಇಲಾಖೆಯೊಂದರಲ್ಲಿ ಕಾರು ಚಾಲಕರಾಗಿದ್ದಾರೆ. ಗುತ್ತಿಗೆ ಆಧಾರದಲ್ಲಿ ಚಾಲಕನ ಕೆಲಸ ಸಿಗುತ್ತಿದ್ದಂತೆ ಆರೋಪಿ ಕಿರಣ್, ಶಿವಮೊಗ್ಗದ ಯುವತಿಯನ್ನು ಮದುವೆಯಾಗಿದ್ದ. ಪತ್ನಿ ಈಗ ಗರ್ಭಿಣಿ’ ಎಂದು ಪೊಲೀಸರು ಹೇಳಿದರು.

‘ಕೆಲಸ ಹೋಗಿದ್ದರಿಂದ ಕಿರಣ್ ಹೆಚ್ಚು ಸಮಯ ಮನೆಯಲ್ಲಿರುತ್ತಿದ್ದ. ಪತ್ನಿ ಜೊತೆ ಜಗಳ ಮಾಡುತ್ತಿದ್ದ. ನೊಂದ ಪತ್ನಿ, ಮನೆ ಬಿಟ್ಟು ತವರಿಗೆ ಹೋಗಿದ್ದರು. ಪತ್ನಿಯನ್ನು ಕರೆತರಲೆಂದು ತವರು ಮನೆಗೆ ಹೋಗಿದ್ದ ಕಿರಣ್, ಅಲ್ಲಿಯೇ ಒಂದು ತಿಂಗಳು ವಾಸವಿದ್ದ. ಕೆಲ ದಿನಗಳ ಹಿಂದೆಯಷ್ಟೇ ವಾಪಸು ಬೆಂಗಳೂರಿಗೆ ಬಂದಿದ್ದ’ ಎಂದು ತಿಳಿಸಿದರು.

ಮತಾಂತರ: ವೈವಾಹಿಕ ಹಕ್ಕಿಗೆ ಸಂಚಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೂ ಧರ್ಮದ ಅನುಸಾರ ಮದುವೆಯಾಗಿ ನಂತರ ಪತ್ನಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರೆ ಪತಿಯ ಜೊತೆಗಿನ ಎಲ್ಲ ವೈವಾಹಿಕ ಹಕ್ಕುಗಳನ್ನು ಕಳೆದುಕೊಂಡಂತಾಗುತ್ತದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಪ್ರಕರಣವೊಂದರಲ್ಲಿ, ಕೌಟುಂಬಿಕ ದೌರ್ಜನ್ಯ ಆರೋಪದಡಿ ಪತ್ನಿಗೆ ₹4 ಲಕ್ಷ ಪರಿಹಾರ ನೀಡುವಂತೆ ಪತಿಗೆ ನಿರ್ದೇಶಿಸಿದ್ದ ಬೆಂಗಳೂರಿನ 67ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶವನ್ನು ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ರದ್ದುಪಡಿಸಿದೆ.

‘ಪತ್ನಿ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿರುವ ಕಾರಣ ಮದುವೆಯೇ ಅಸಿಂಧುಗೊಂಡಿದೆ. ಆದ್ದರಿಂದ, ಸೆಷನ್ಸ್ ನ್ಯಾಯಾಲಯ ಪತ್ನಿಗೆ ₹4 ಲಕ್ಷ ಪರಿಹಾರ ಘೋಷಿಸುವ ಮೂಲಕ ತಪ್ಪೆಸಗಿದೆ. ಇಲ್ಲಿ ನ್ಯಾಯದಾನದ ಹಾದಿತಪ್ಪಿದೆ. ಕೌಟುಂಬಿಕ ದೌರ್ಜನ್ಯ ಪ್ರಕರಣಗಳಲ್ಲಿ ಪತಿ ದೌರ್ಜನ್ಯ ಎಸಗಿರುವುದು ಸಾಬೀತಾಗದ ಹೊರತು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ–2005ರ ಅಡಿಯಲ್ಲಿ ಪತ್ನಿಗೆ ಪರಿಹಾರ ನೀಡಲು ಅವಕಾಶವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಮದುವೆ ಅಸ್ತಿತ್ವದಲ್ಲಿದೆ ಮತ್ತು ಜೀವನ ನಿರ್ವಹಣೆ ಮಾಡಲು ಪತ್ನಿ ಅಸಮರ್ಥರಾಗಿದ್ದಾರೆ ಎಂಬ ಏಕೈಕ ಆಧಾರದ ಮೇಲೆ ಜೀವನಾಂಶ ಪಾವತಿಸಲು ಪತಿಗೆ ಸೆಷನ್ಸ್ ನ್ಯಾಯಾಲಯ ನಿರ್ದೇಶಿಸಿದೆ. ಆದರೆ, ಪತ್ನಿಯು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ವಿವಾಹ ವಿಚ್ಛೇದನ ಮಂಜೂರಾಗದೇ ಇದ್ದರೂ ಆಕೆ ಪತಿಯೊಂದಿಗೆ ಹೊಂದಿದ್ದ ಎಲ್ಲ ವೈವಾಹಿಕ ಹಕ್ಕುಗಳನ್ನು ಕಳೆದುಕೊಂಡಂತಾಗುತ್ತದೆ’ ಎಂದು ಹೇಳಿದೆ.

‘ಕೌಟುಂಬಿಕ ದೌರ್ಜನ್ಯ ಕೃತ್ಯ ಸಾಬೀತಾದರೆ ಮಾತ್ರ ಕಾಯ್ದೆಯ ಕಲಂ 12ರ ಅಡಿಯಲ್ಲಿ ನೊಂದ ವ್ಯಕ್ತಿಗಳು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಹೆಚ್ಚುವರಿ ಪರಿಹಾರ ಮಂಜೂರು ಮಾಡಬಹುದಾಗಿದೆ. ಆದರೆ, ಈ ಪ್ರಕರಣದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮತ್ತು ಸೆಷನ್ಸ್ ನ್ಯಾಯಾಲಯ ಎರಡೂ ಪತ್ನಿಯ ಮೇಲೆ ಪತಿ ಕೌಟುಂಬಿಕ ದೌರ್ಜನ್ಯ ಎಸಗಿಲ್ಲ ಎಂದು ತೀರ್ಮಾನಿಸಿವೆ. ಇಂತಹ ಸನ್ನಿವೇಶದಲ್ಲಿ ಪರಿಹಾರ ಘೋಷಿಸಲು ಅವಕಾಶವಿಲ್ಲ’ ಎಂದು ನ್ಯಾಯಪೀಠ ಆದೇಶಿಸಿದೆ.

ರಾಜೀನಾಮೆ ಕೊಟ್ಟವರೇ ಹಿಂಪಡೆಯಬೇಕು: ಹೈಕೋರ್ಟ್

ಬೆಂಗಳೂರು: ‘ಉದ್ಯೋಗಿಯು ಉದ್ಯೋಗದಾತರಿಗೆ ಸಲ್ಲಿಸಿದ ರಾಜೀನಾಮೆ ಪತ್ರವನ್ನು ಆತನ ಪರವಾಗಿ ಪತ್ನಿ ಅಥವಾ ಮಕ್ಕಳು ಹಿಂಪಡೆಯಲು ಸಾಧ್ಯವಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಮದ್ದೂರಿನ ಡಿ.ವೆಂಕಟೇಶ್ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಇದು ಬಾಯಾರಿಕೆಯೇ ಇಲ್ಲದ ಕುದುರೆಯನ್ನು ನೀರು ಕುಡಿಯಲು ನದಿಗೆ ಎಳೆದಂತೆ. ಅಷ್ಟೇ ಅಲ್ಲದೆ ಇಂತಹ ಪರಿಕಲ್ಪನೆ ಸೇವಾ ಕಾನೂನಿಗೆ ವಿರುದ್ಧವಾಗಿದೆ’ ಎಂದು ಹೇಳಿದೆ.

‘ರಾಜೀನಾಮೆ ಉದ್ಯೋಗಿಯ ಸ್ವಯಂಪ್ರೇರಿತ ಕ್ರಿಯೆ. ಒಂದು ವೇಳೆ ಆತ ರಾಜೀನಾಮೆ ನೀಡಿದ ನಂತರ ಉದ್ಯೋಗದಲ್ಲಿ ಮುಂದುವರಿಯುವ ಇಚ್ಛೆ ಉದ್ಭವವಾದಲ್ಲಿ ಅಂಗೀಕರವಾಗುವ ಮೊದಲೇ ಸ್ವತಃ ಹಿಂಪಡೆಯ ಬೇಕು. ಉದ್ಯೋಗಿಯ ಪರವಾಗಿ ಪತ್ನಿ, ಮಕ್ಕಳು ಹಿಂಪಡೆಯಲು ಅವಕಾಶವಿಲ್ಲ’ ಎಂದು ಕೋರ್ಟ್ ತಿಳಿಸಿದೆ.

ಪ್ರಕರಣವೇನು?: ಡಿ.ವೆಂಕಟೇಶ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದಲ್ಲಿ ಉದ್ಯೋಗಿಯಾಗಿದ್ದರು. 2021ರ ನವೆಂಬರ್ 11ರಂದು ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿದ್ದರು. ಸಂಘವು ರಾಜೀನಾಮೆ ಅಂಗೀಕರಿಸುವ ನಿರ್ಣಯ ಕೈಗೊಂಡಿತ್ತು. ಬಳಿಕ ಉದ್ಯೋಗಿಯ ಪತ್ನಿ ರಾಜೀನಾಮೆ ಪತ್ರ ಹಿಂಪಡೆಯಲು ಅನುಮತಿ ಕೋರಿ ಉದ್ಯೋಗ ಸಂಸ್ಥೆಗೆ ಪತ್ರ ಸಲ್ಲಿಸಿದ್ದರು. ಇದನ್ನು ಆಧರಿಸಿ ರಾಜೀನಾಮೆ ಅಂಗೀಕರಿಸದೇ ಇರಲು ಸಂಘವು ನಿರ್ಣಯ ತೆಗೆದುಕೊಂಡಿತ್ತು.

ಇದನ್ನು ಪ್ರಶ್ನಿಸಿ ಸಂಘದ ಉದ್ಯೋಗಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ವೆಂಕಟೇಶ್ ರಾಜೀನಾಮೆ ಅಂಗೀಕರಿಸದಿರಲು ಸಂಘ ಕೈಗೊಂಡಿದ್ದ ನಿರ್ಣಯ ರದ್ದುಪಡಿಸಿ 2022ರ ಅ.13 ರಂದು ಆದೇಶಿಸಿತ್ತು. ಈ ಆದೇಶ ರದ್ದುಪಡಿಸುವಂತೆ ವೆಂಕಟೇಶ್ ಮೇಲ್ಮನವಿ ಸಲ್ಲಿಸಿದ್ದರು.

ಎಚ್.ಎನ್.ನಾಗಮೋಹನ್ ದಾಸ್ ಆಯೋಗಕ್ಕೆ ತಜ್ಞರ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿನ ಶೇ 40ರ ಕಮಿಷನ್ ಆರೋಪ, ಕಾಮಗಾರಿಗಳಲ್ಲಿನ ಅವ್ಯವಹಾರದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದಲ್ಲಿ ರಚಿಸಿರುವ ಆಯೋಗಕ್ಕೆ ಇಬ್ಬರು ನಿವೃತ್ತ ಅಧಿಕಾರಿಗಳನ್ನು ನೇಮಿಸಲಾಗಿದೆ.

ಬೆಂಗಳೂರು ನಿವಾಸಿ, ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಆರ್.ಸಿ. ದೇವರಾಜ್, ಹೊಸಪೇಟೆ ನಿವಾಸಿ, ನಿವೃತ್ತ ಮುಖ್ಯ ಎಂಜಿನಿಯರ್ ಓ.ಕೆ. ಸ್ವಾಮಿ ಅವರನ್ನು ಹಿರಿಯ ವಿಷಯ ತಜ್ಞರಾಗಿ ನೇಮಿಸುವಂತೆ ಆಯೋಗದ ಅಧ್ಯಕ್ಷರು ಸೂಚಿಸಿದ್ದರು. ಇದರನ್ವಯ ಇವರಿಬ್ಬರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿ ನ.6ರಂದು ಆದೇಶ ಹೊರಡಿಸಲಾಗಿದೆ.

ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದ, 2019ರ ಜುಲೈ 26ರಿಂದ 2023ರ ಮಾರ್ಚ್ 31ರ ಅವಧಿಯಲ್ಲಿ ನಡೆದ ಕಾಮಗಾರಿಗಳ ಬಿಲ್ ಮಂಜೂರು ಮಾಡಲು ಶೇ 40ರಷ್ಟು ಲಂಚ, ಅವ್ಯವಹಾರ ನಡೆದಿರುವ ಆರೋಪ ಬಗ್ಗೆ ತನಿಖೆ ನಡೆಸಲು ಎಚ್.ಎನ್. ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ವಿಚಾರಣಾ ಆಯೋಗವನ್ನು ರಾಜ್ಯ ಸರ್ಕಾರ ಅ.6ರಂದು ರಚಿಸಿದೆ.

ಮಣ್ಣಿನ ಹಣತೆಗೆ ಬಣ್ಣ...

ಮಂಗಳೂರಿನ ಸೇವಾಭಾರತಿಯ ಚೇತನಾ ಬಾಲವಿಕಾಸ ಕೇಂದ್ರದ ವಿಶೇಷ ಮಕ್ಕಳು ವಿವಿಧ ವಿನ್ಯಾಸದ ಮಣ್ಣಿನ ಹಣತೆ ತಯಾರಿಸಿ, ಅದಕ್ಕೆ ಬಣ್ಣದ ಮೆರುಗು ನೀಡಿದ್ದಾರೆ. ಮಕ್ಕಳ ಕೈಯಲ್ಲಿ ಅರಳಿದ ಈ ಹಣತೆಗಳಿಗೆ ಮಾರುಕಟ್ಟೆಯಲ್ಲಿ ಬಲು ಬೇಡಿಕೆ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಡಿ.14ರಿಂದ ಆಳ್ವಾಸ್ ವಿರಾಸತ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ‘ಆಳ್ವಾಸ್ ವಿರಾಸತ್– 2023’ ಡಿ.14ರಿಂದ 17ರ ವರೆಗೆ ಇಲ್ಲಿ ನಡೆಯಲಿದೆ.



ಮೋಹನ ಆಳ್ವ

ಆಳ್ವಾಸ್ ವಿರಾಸತ್‌ಗೆ 29ನೇ ವರ್ಷವಾಗಿದ್ದು, ಅಪೂರ್ವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ, ಸಂಸ್ಕೃತಿಪ್ರಿಯರಿಗೆ ರಸದೌತಣ ನೀಡಲು ಯೋಚಿಸಲಾಗಿದೆ. ಇದಕ್ಕಾಗಿ ಸಿದ್ಧತೆ ನಡೆಯುತ್ತಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿದಿನ ಸಂಜೆ 6 ಗಂಟೆಯಿಂದ ರಾತ್ರಿ 9.30ರ ವರೆಗೆ ಕಾರ್ಯಕ್ರಮ ನಡೆಯಲಿದೆ. ಸಭಾಂಗಣದಲ್ಲಿ ಸುಮಾರು 50 ಸಾವಿರ ಪ್ರೇಕ್ಷಕರಿಗೆ ಆಸನದ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಅವರು ತಿಳಿಸಿದರು.

ರೈತರಿಗೆ 7 ಗಂಟೆ ವಿದ್ಯುತ್

ಒಂದನೇ ಪುಟದಿಂದ...

ಈಗಾಗಲೇ ಕಬ್ಬು ಅರೆಯುವುದು ಆರಂಭವಾಗಿರುವುದರಿಂದ ಕೋ–ಜನರೇಷನ್ ಮೂಲಕ 450 ಮೆ.ವಾ ಉತ್ಪಾದನೆ ಆಗುತ್ತಿದೆ. ಕೂಡ್ಲಗಿಯಲ್ಲಿ 150 ಮೆ.ವಾ ರಾಜ್ಯಕ್ಕೆ ಉಳಿತಾಯವಾಗಲಿದೆ. ಉತ್ತರ ಪ್ರದೇಶ, ಪಂಜಾಬ್ ಮತ್ತು ಹಿಮಾಚಲ ಪ್ರದೇಶದಿಂದಲೂ ವಿನಿಮಯದ ಮೂಲಕ ವಿದ್ಯುತ್ ಪಡೆಯಲಾಗುತ್ತಿದೆ. ಇದರಿಂದಾಗಿ ವಿದ್ಯುತ್ ಕೊರತೆ ಇಲ್ಲ. ಕೈಗಾರಿಕೆಗಳು ಮತ್ತು ಗೃಹ ಬಳಕೆಗೆ ವಿದ್ಯುತ್ ಕಡಿತ ಮಾಡುವುದೂ ಇಲ್ಲ ಎಂದು ಸ್ಪಷ್ಟಪಡಿಸಿದರು.

‘ಶೇ 70 ರಷ್ಟು ವಿದ್ಯುತ್ ಉಷ್ಣ ವಿದ್ಯುತ್ ಸ್ಥಾವರಗಳ ಮೂಲಕವೇ ಉತ್ಪಾದನೆ ಆಗುತ್ತಿದೆ. ಆಮದು ಮಾಡಿಕೊಂಡ ಕಲ್ಲಿದ್ದಿಲಿನಿಂದ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯ. ನಾವು ಆಮದು ಮಾಡಿಕೊಂಡ ಮತ್ತು ಸ್ಥಳೀಯ ಕಲ್ಲಿದ್ದಲು ಮಿಶ್ರಣ ಮಾಡಿ ಬಳಸುತ್ತಿದ್ದೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಮುಂದಿನ ಮುಂಗಾರುವರೆಗೆ ವಿದ್ಯುತ್ ಕೊರತೆ ಆಗದಂತೆ ವಿದ್ಯುತ್ ಪೂರೈಕೆಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಖಾಸಗಿಯವರಿಂದ ವಿದ್ಯುತ್ ಖರೀದಿ ಮಾಡಿಲ್ಲ’ ಎಂದೂ ಅವರು ಸ್ಪಷ್ಟಪಡಿಸಿದರು.

ಹೆಚ್ಚಿದ ವಿದ್ಯುತ್ ಬಳಕೆ

15,978 ಮೆ.ವಾ
ಅಕ್ಟೋಬರ್ ಬೇಡಿಕೆ

45% ಹೆಚ್ಚು ಬೇಡಿಕೆ
ಹಿಂದಿನ ವರ್ಷಕ್ಕಿಂತ ಈ ವರ್ಷ

55%ರಿಂದ **119%**ಕ್ಕೆ ಹೆಚ್ಚಳ
ಕೃಷಿ ಕ್ಷೇತ್ರದ ಬೇಡಿಕೆ

9% ರಿಂದ **14%** ರಷ್ಟು ಹೆಚ್ಚಳ
ಇತರ ಕ್ಷೇತ್ರಗಳ ಬೇಡಿಕೆ

ದಿನಕ್ಕೆ **1.4** ಕೋಟಿ ಯೂನಿಟ್‌ಗಳು
ಐಪಿ ಸೆಟ್‌ಗಳಿಗೆ ನಿರಂತರ 7 ಗಂಟೆ ಪೂರೈಕೆಗೆ ಬೇಕಾಗುವ ವಿದ್ಯುತ್

₹1,500 ಕೋಟಿ
ತಗಲುವ ವೆಚ್ಚ

₹ 389.66 ಕೋಟಿ ಬಾಕಿ ಮನ್ನಾ

ಭಾಗ್ಯ ಜ್ಯೋತಿ, ಕುಟೀರ ಜ್ಯೋತಿ, ಅಮೃತ ಜ್ಯೋತಿ ಅಡಿ ವಿವಿಧ ವಿದ್ಯುತ್ ಕಂಪನಿಗಳಿಗೆ ಪಾವತಿ ಆಗಬೇಕಾಗಿದ್ದ ₹389.66 ಕೋಟಿ ಬಾಕಿಯನ್ನು ಒಂದು ಬಾರಿಗೆ ಮನ್ನಾ ಮಾಡಲು ತೀರ್ಮಾನಿಸಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಜೂನಿಯರ್ ಕಾಲೇಜುಗಳಿಗೆ ನ.1 ರಂದು ಘೋಷಿಸಿದಂತೆ ವಿದ್ಯುತ್ ಹಾಗೂ ನೀರಿನ ವೆಚ್ಚವನ್ನು ಸರ್ಕಾರವೇ ಭರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದರು.

ನಿಧನ ವಾರ್ತೆ

ಪೇಜಾವರ ಸ್ವಾಮೀಜಿಗೆ ಪಿತೃ ವಿಯೋಗ

ಮೂಲ್ಕಿ (ದಕ್ಷಿಣ ಕನ್ನಡ): ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರ ಪೂರ್ವಾಶ್ರಮದ ತಂದೆ, ಅಂಗಡಿಮಾರ್ ಕೃಷ್ಣ ಭಟ್ (102) ಅವರು ಹಳೆಯಂಗಡಿ ಸಮೀಪದ ಪಕ್ಷಿಕೆರೆಯಲ್ಲಿರುವ ಸ್ವಗೃಹದಲ್ಲಿ ಭಾನುವಾರ ರಾತ್ರಿ ನಿಧನರಾದರು.

ಅಂಗಡಿಮಾರ್ ಕೃಷ್ಣ ಭಟ್

ಪುತ್ರ ವಿಶ್ವೇಶ್ವರ ಭಟ್ ಜತೆ ವಾಸವಿದ್ದ ಅವರು ಸಾಂಪ್ರದಾಯಿಕ ಕೃಷಿಕರೂ, ವೈದಿಕ ವಿದ್ವಾಂಸರೂ ಆಗಿದ್ದರು. ತುಳು ಲಿಪಿಕಾರರು, ಪಂಚಾಂಗ ಕರ್ತೃವಾಗಿದ್ದರು. ಹಲವು ಕನ್ನಡ ಹಾಗೂ ತುಳು ಭಜನೆ, ಪ್ರಾರ್ಥನಾ ಶ್ಲೋಕಗಳನ್ನು ರಚಿಸಿದ್ದರು.

ಪೇಜಾವರ ಸ್ವಾಮೀಜಿ ಅವರು ಕೃಷ್ಣಭಟ್ ಅವರ ಎಂಟನೇ ಪುತ್ರ. ಅವರಿಗೆ ಸ್ವಾಮೀಜಿ ಸೇರಿದಂತೆ ಐವರು ಪುತ್ರರು, ಏಳು ಮಂದಿ ಪುತ್ರಿಯರು ಇದ್ದಾರೆ.

ಸೋಮವಾರ ಪಕ್ಷಿಕೆರೆಯಲ್ಲಿ ಅಂತ್ಯಕ್ರಿಯೆ ನಡೆಯಿತು.

ವಾಯುಪಡೆಯ ನಿವೃತ್ತ ಅಧಿಕಾರಿ ಲಕ್ಷ್ಮಣ್

ಮಂಗಳೂರು: ಭಾರತೀಯ ವಾಯುಪಡೆಯ ನಿವೃತ್ತ ಅಧಿಕಾರಿ, ನಗರದ ಚಿಲಿಂಬಿ ಹಿಲ್ ನಿವಾಸಿ ಎಚ್. ಲಕ್ಷ್ಮಣ್ (101) ಸೋಮವಾರ ನಿಧನರಾದರು.



ಎಚ್.ಲಕ್ಷಣ್

1948, 1962, 1965, 1971ರ ಯುದ್ಧಗಳಲ್ಲಿ ಭಾಗಿಯಾಗಿದ್ದರು. ಕರ್ತವ್ಯ ನಿಷ್ಠೆ ವಿಚಾರದಲ್ಲಿ ಸಹೋದ್ಯೋಗಿಗಳಿಗೆ ಆದರ್ಶರಾಗಿದ್ದ ಅವರು, ಭಾರತೀಯ ಸ್ವಾತಂತ್ರ್ಯ ಪದಕ, ರಕ್ಷಾ ಪದಕಗಳನ್ನು ಪಡೆದಿದ್ದರು. ವಿಶೇಷ ನಾಮೋಲ್ಲೇಖ ಗೌರವ, ಶೌರ್ಯ ಪ್ರಶಸ್ತಿಗೂ ಭಾಜನರಾಗಿದ್ದರು. ಅವರಿಗೆ ಮೂವರು ಪುತ್ರರು, ಪುತ್ರಿ ಇದ್ದಾರೆ.

ಕೆ.ಷರೀಫಾಗೆ ಮುಸ್ಲಿಂ ಸಾಹಿತ್ಯ ಪ್ರಶಸ್ತಿ

ಮಂಗಳೂರು: ಮುಸ್ಲಿಂ ಬರಹಗಾರರ ಕನ್ನಡದ ಪ್ರಕಟಿತ ಅತ್ಯುತ್ತಮ ಕೃತಿಗೆ, ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ಕೊಡಮಾಡುವ 2022ನೇ ಸಾಲಿನ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಸಾಹಿತಿ, ಚಿಂತಕಿ ಕೆ.ಷರೀಫಾ ಅವರ ‘ನೀರೊಳಗಣ ಕಿಚ್ಚು’ ಕಥಾಸಂಕಲನ ಆಯ್ಕೆಯಾಗಿದೆ.

ಕೆ. ಷರೀಫಾ

ದಿವಂಗತ ಯು.ಟಿ. ಫರೀದ್ ಸ್ಮರಣಾರ್ಥ ನೀಡಲಾಗುವ ಈ ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ನವೆಂಬರ್ 23ರಂದು ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮುಸ್ಲಿಂ ಲೇಖಕರ ಸಂಘದ ಅಧ್ಯಕ್ಷ ಉಮರ್ ಯು.ಎಚ್. ತಿಳಿಸಿದ್ದಾರೆ.

₹1.70 ಕೋಟಿ ವೆಚ್ಚದಲ್ಲಿ 50 ಸಾವಿರ ಮಂದಿಗೆ ವಸ್ತ್ರದಾನ: ಶಾಸಕ ಅಶೋಕ್

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ‘ರೈ ಎಸ್ಟೇಟ್ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ ವತಿಯಿಂದ ದೀಪಾವಳಿ ಪ್ರಯುಕ್ತ ಈ ಬಾರಿ ಸುಮಾರು ₹1.70 ಕೋಟಿ ವೆಚ್ಚದಲ್ಲಿ 50 ಸಾವಿರ ಮಂದಿಗೆ ವಸ್ತ್ರದಾನ, ಸಹಭೋಜನ ಕಾರ್ಯಕ್ರಮ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಟ್ರಸ್ಟ್ ಪ್ರವರ್ತಕ, ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಅಶೋಕ್

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ನ.13ರಂದು ತಾಲ್ಲೂಕು ಕ್ರೀಡಾಂಗಣದಲ್ಲಿ ಸಮಾರಂಭ ನಡೆಯಲಿದೆ. 60 ಸಾವಿರ ಮಂದಿಗೆ ವಿತರಿಸಲು ಬೇಕಾಗುವಷ್ಟು ವಸ್ತ್ರಗಳನ್ನು ಸೂರತ್‌ನಿಂದ ತರಿಸಲಾಗುತ್ತಿದೆ ಎಂದರು.

ಟ್ರಸ್ಟ್ ವತಿಯಿಂದ 10 ವರ್ಷಗಳಿಂದ ದೀಪಾವಳಿ ಸಂದರ್ಭದಲ್ಲಿ ವಸ್ತ್ರದಾನ ಮತ್ತು ಸಹಭೋಜನ ಕಾರ್ಯಕ್ರಮ ನಡೆಸಲಾಗುತ್ತಿದೆ. ಕಳೆದ ವರ್ಷ 35 ಸಾವಿರ ಮಂದಿಗೆ ವಸ್ತ್ರದಾನ ಮಾಡಲಾಗಿತ್ತು.

ಈ ಬಾರಿ ಪುತ್ತೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯವರಿಗೆ ಆದ್ಯತೆ ನೀಡಲಾಗುವುದು. ಬೇರೆ ಕಡೆಯಿಂದ ಬಂದವರಿಗೂ ವಸ್ತ್ರದಾನ ಮಾಡಲಾಗುವುದು. ಮಹಿಳೆಯರಿಗೆ ಸೀರೆ, ಪುರುಷರಿಗೆ ಮತ್ತು ಮಕ್ಕಳಿಗೆ ಬೆಡ್‌ಶೀಟ್ ನೀಡಲಾಗುವುದು. ಸ್ವಂತ ಉದ್ಯಮದ ಲಾಭದ ಒಂದಂಶವನ್ನು ಇದಕ್ಕಾಗಿ ಬಳಸಲಾಗುತ್ತಿದೆ. ಈ ಕಾರ್ಯಕ್ರಮ ರಾಜಕೀಯ ರಹಿತವಾಗಿ ನಡೆಯಲಿದೆ ಎಂದು ಹೇಳಿದರು.

20 ಮಂದಿ ಬಡ ಸಾಧಕರಿಗೆ ಸನ್ಮಾನ: ಬೀಡಿಕಟ್ಟುವ, ಕೂಲಿ ಕೆಲಸ ಮಾಡುವ, ತಮ್ಮ ಕಷ್ಟದ ನಡುವೆಯೂ ಇತರರಿಗೆ ಸಹಾಯಹಸ್ತ ನೀಡಿರುವ, ಕಷ್ಟಕರ ಪರಿಸ್ಥಿತಿಯಲ್ಲಿಯೂ ಮಕ್ಕಳ ಶಿಕ್ಷಣವನ್ನು ಉತ್ತೇಜಿಸಿ ತಳಮಟ್ಟದಲ್ಲಿ ಸಾಧನೆ ಮಾಡಿರುವ 20 ಮಂದಿಯನ್ನು ಗೌರವಿಸಲಾಗುವುದು ಎಂದರು.

ಸಮಿತಿಯಿಂದ ವರದಿ ಅಂಗೀಕಾರ

ನವದೆಹಲಿ (ಪಿಟಿಐ): ಸದ್ಯ ಚಾಲ್ತಿಯಲ್ಲಿರುವ ಕ್ರಿಮಿನಲ್ ಕಾಯ್ದೆಗಳಿಗೆ ಪರ್ಯಾಯವಾಗಿ ಜಾರಿಗೊಳಿಸಲು ಉದ್ದೇಶಿಸಿರುವ ಮೂರು ಕಾಯ್ದೆಗಳ ಮಸೂದೆಗಳಿಗೆ ಸಂಬಂಧಿತ ವರದಿಗಳನ್ನು ಗೃಹ ಸಚಿವಾಲಯದ ಸಂಸದೀಯ ಸಮಿತಿ ಸೋಮವಾರ ಅಂಗೀಕರಿಸಿತು.

ಬಿಜೆಪಿಯ ಸಂಸದ ಬ್ರಿಜ್‌ಲಾಲ್ ನೇತೃತ್ವದ ಸಂಸದೀಯ ಸಮಿತಿಯು ವರದಿ ಅಂಗೀಕರಿಸಿತು. ವಿರೋಧಪಕ್ಷಗಳ ಕೆಲವು ಸದಸ್ಯರು ಕರಡು ಮಸೂದೆಗಳಿಗೆ ತಮ್ಮ ಆಕ್ಷೇಪಗಳನ್ನು ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.





ಸುಭಾಷಿತ

ವಯಸ್ಸು ನಮ್ಮ ಚರ್ಮವು ಸುಕ್ಕಾಗುವಂತೆ ಮಾಡುತ್ತದೆ, ಆದರೆ ಉತ್ಸಾಹದ ಕೊರತೆಯು ನಮ್ಮ ಆತ್ಮವನ್ನೇ ಸುಕ್ಕುಗಟ್ಟಿಸುತ್ತದೆ. -ಸಾಕ್ರಟೀಸ್

ರಾಜ್ಯಪಾಲರು ಕೇಂದ್ರ ಸರ್ಕಾರದ ರಾಜಕೀಯ ಏಜೆಂಟರಲ್ಲ

ರಾಜ್ಯಪಾಲರ ಪ್ರತಿಕೂಲ ನಡವಳಿಕೆಯನ್ನು ತಡೆಯುವುದಕ್ಕಾಗಿ ತಮಿಳುನಾಡು, ಪಂಜಾಬ್ ಮತ್ತು ತೆಲಂಗಾಣ ಸರ್ಕಾರಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ಬಳಿಕ ಈಗ ಕೇರಳ ಸರ್ಕಾರವೂ ಅದೇ ಜಾಡು ಹಿಡಿದಿದೆ. ರಾಜ್ಯದ ಶಾಸನಸಭೆಯು ಅಂಗೀಕರಿಸಿದ ಹಲವು ಮಸೂದೆಗಳಿಗೆ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಅಂಕಿತ ಹಾಕಲು, ಸುದೀರ್ಘ ಕಾಲದಿಂದ ಮತ್ತು ಅನಿರ್ದಿಷ್ಟಾವಧಿ ಮಸೂದೆಗೆ ಅಂಗೀಕಾರ ನೀಡದೇ ಇರುವ ಮೂಲಕ ಅವರು ತಮ್ಮ ಸಾಂವಿಧಾನಿಕ ಅಧಿಕಾರ ಮತ್ತು ಕರ್ತವ್ಯಗಳಿಂದ ವಿಮುಖರಾಗಿದ್ದಾರೆ ಎಂದು ಕೇರಳ ಸರ್ಕಾರದ ಅರ್ಜಿಯಲ್ಲಿ ಹೇಳಲಾಗಿದೆ. ರಾಜ್ಯಪಾಲರ ಬಳಿ ಬಾಕಿ ಇರುವ ಮಸೂದೆಗಳನ್ನು ತಕ್ಷಣ ವಿಲೇವಾರಿ ಮಾಡಬೇಕು ಎಂದು ಅವರಿಗೆ ನಿರ್ದೇಶನ ನೀಡಬೇಕು ಎಂದು ಕೇರಳ ಸರ್ಕಾರವು ಸುಪ್ರೀಂ ಕೋರ್ಟನ್ನು ಕೋರಿದೆ. ಕಾನೂನಿನ ಆಳ್ವಿಕೆ ಮತ್ತು ಪ್ರಜಾಪ್ರಭುತ್ವಾತ್ಮಕ ಆಡಳಿತ ಸೇರಿದಂತೆ ಸಂವಿಧಾನದ ಮೂಲ ತಳಹದಿಯನ್ನೇ ಸೋಲಿಸುವ ರೀತಿಯಲ್ಲಿ ರಾಜ್ಯಪಾಲರ ನಡವಳಿಕೆ ಇದೆ ಎಂದು ಕೇರಳ ಸರ್ಕಾರ ಹೇಳಿದೆ. ರಾಜ್ಯಪಾಲರ ನಡವಳಿಕೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿರುವ ಇತರ ರಾಜ್ಯಗಳು ಕೂಡ ಇಂತಹುದೇ ಅಂಶಗಳನ್ನು ಉಲ್ಲೇಖಿಸಿವೆ. 'ನಿಷ್ಕ್ರಿಯತೆ, ಲೋಪ, ವಿಳಂಬ ಮತ್ತು ಸಾಂವಿಧಾನಿಕ ಕರ್ತವ್ಯ ನಿರ್ವಹಿಸುವಲ್ಲಿ ಆಗಿರುವ ವೈಫಲ್ಯ'ವು ಕಾನೂನಿಗೆ ವಿರುದ್ಧವಾಗಿವೆ ಎಂದು ಘೋಷಿಸಬೇಕು ಎಂದು ತಮಿಳುನಾಡು ಸರ್ಕಾರ ಸಲ್ಲಿಸಿದ ಅರ್ಜಿಯಲ್ಲಿ ಕೋರಲಾಗಿದೆ.

ರಾಜ್ಯಪಾಲರು ರಬ್ಬರ್ ಸ್ಟ್ಯಾಂಪ್ ಆಗಿರಬೇಕಾಗಿಲ್ಲ. ಹಾಗೆಂದು ಅವರು ಸೂಪರ್ ಸರ್ಕಾರವಾಗಿ ವರ್ತಿಸುವುದೂ ಸರಿಯಲ್ಲ

ಕೇರಳ ಶಾಸನಸಭೆಯು ಅಂಗೀಕರಿಸಿದ ಕೆಲವು ಮಸೂದೆಗಳು ಎರಡಕ್ಕೂ ಹೆಚ್ಚು ವರ್ಷಗಳಿಂದ ರಾಜ್ಯಪಾಲರ ಕೈಯಲ್ಲಿ ಬಾಕಿ ಇವೆ. ಇಷ್ಟೊಂದು ದೀರ್ಘ ಅವಧಿಗೆ ಬಾಕಿ ಉಳಿಸಿಕೊಳ್ಳಲು ತಕ್ಕದಾದ ಕಾರಣಗಳು ಇರಲು ಸಾಧ್ಯವಿಲ್ಲ. ಮಸೂದೆಗಳ ಕುರಿತಂತೆ ರಾಜ್ಯಪಾಲರು ಸ್ಪಷ್ಟೀಕರಣಗಳನ್ನು ಕೇಳಬಹುದು, ಶಾಸನಸಭೆಗೆ ಹಿಂತಿರುಗಿಸಬಹುದು ಅಥವಾ ರಾಷ್ಟ್ರಪತಿಯವರಿಗೂ ಸಲ್ಲಿಸಬಹುದು. ಅದರ ಬದಲಿಗೆ ಮಸೂದೆಗಳನ್ನು ಸುಮ್ಮನೆ ತಮ್ಮ ಬಳಿ 'ಇರಿಸಿಕೊಂಡರೆ' ಉದ್ದೇಶಪೂರ್ವಕವಾಗಿ ತೊಂದರೆ ನೀಡುತ್ತಿದ್ದಾರೆ ಎಂದೇ ಭಾವಿಸಬೇಕಾಗುತ್ತದೆ. ರಾಜ್ಯಪಾಲರ ಈ ರೀತಿಯ ನಡವಳಿಕೆಯು ಶಾಸನಸಭೆಗೆ ಮಾಡುವ ಅವಮಾನ; ಜೊತೆಗೆ, ಇದು ಚುನಾಯಿತ ಸರ್ಕಾರದ ಕಾರ್ಯನಿರ್ವಹಣೆಗೆ ಅಡ್ಡಿ ಮಾತ್ರವಲ್ಲದೆ, ಆಡಳಿತದಲ್ಲಿ ಹಸ್ತಕ್ಷೇಪವೂ ಹೌದು. ಸಂವಿಧಾನದ ರಕ್ಷಣೆಯು ರಾಜ್ಯಪಾಲರ ಹೊಣೆಗಾರಿಕೆ. ಆದರೆ, ಸರ್ಕಾರಕ್ಕೆ ತೊಂದರೆ ಕೊಡುವ ಮೂಲಕ ಈ ಹೊಣೆಗಾರಿಕೆಯಿಂದ ಅವರು ಪಲಾಯನ ಮಾಡುತ್ತಿದ್ದಾರೆ. ಮಸೂದೆಗೆ ಅಂಕಿತ ಹಾಕದೇ ಇರುವ ಮೂಲಕ ತಮ್ಮಲ್ಲದ ಪಾತ್ರ ವಹಿಸುವ ಮೂಲಕ ಕಾನೂನಿಗೆ ಸಮ್ಮತವಲ್ಲದ ರೀತಿಯ ವರ್ತನೆಯನ್ನು ಕಾಣಬಹುದು. ವಿವಿಧ ವಿಚಾರಗಳ ಮೇಲೆ ಸರ್ಕಾರದ ನಿಲುವಿಗೆ ತದ್ವಿರುದ್ಧ ನಿಲುವನ್ನು ರಾಜ್ಯಪಾಲರು ಬಹಿರಂಗವಾಗಿ ತಳೆಯುತ್ತಿದ್ದಾರೆ. ಇದು ಅನಗತ್ಯವಾದುದು. ಪಂಜಾಬ್ ಸರ್ಕಾರ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಿದ್ದು, ರಾಜ್ಯಪಾಲರು ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳಲ್ಲ ಎಂಬುದನ್ನು ಮರೆಯಬಾರದು ಎಂದು ಕಟುವಾಗಿಯೇ ಹೇಳಿದೆ. ರಾಜ್ಯಪಾಲರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದಿರುವ ಕೋರ್ಟ್, ಶಾಸನಸಭೆಯು ಅಂಗೀಕರಿಸಿದ ಮಸೂದೆಗಳ ಕುರಿತಂತೆ ಪಂಜಾಬ್ ರಾಜ್ಯಪಾಲರು ಕೈಗೊಂಡ ಕ್ರಮಗಳೇನು ಎಂಬ ಮಾಹಿತಿ ನೀಡುವಂತೆ ಸಾಲಿಸಿಟರ್ ಜನರಲ್‌ಗೆ ಸೂಚಿಸಿದೆ. ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದ ಅಭಿಪ್ರಾಯವು ರಾಜ್ಯ ಸರ್ಕಾರಗಳ ಕಳವಳಗಳಿಗೆ ಪುರಸ್ಕಾರದಂತೆ ಇದೆ ಎಂಬುದು ಗಮನಾರ್ಹ.

ರಾಜ್ಯಪಾಲರ ಈ ರೀತಿಯ ನಡವಳಿಕೆ ಕಂಡುಬಂದಿರುವುದು ಬಿಜೆಪಿ ವಿರೋಧಿ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ ಮಾತ್ರ ಎಂಬುದು ಗಮನಾರ್ಹ. ಈ ಅಸಹಕಾರವು ರಾಜಕೀಯ ಸ್ವರೂಪದ್ದು ಎಂಬುದನ್ನು ಇದು ಸೂಚಿಸುತ್ತದೆ. ರಾಜ್ಯಪಾಲರು ರಬ್ಬರ್ ಸ್ಟ್ಯಾಂಪ್ ಆಗಿರಬೇಕಾಗಿಲ್ಲ. ಹಾಗೆಂದು ಅವರು ಸೂಪರ್ ಸರ್ಕಾರವಾಗಿ ವರ್ತಿಸುವುದೂ ಸರಿಯಲ್ಲ. ನಿಜವಾದ ಅಧಿಕಾರವನ್ನು ಹೊಂದಿರುವ ಚುನಾಯಿತ ಸರ್ಕಾರಗಳು ಮತ್ತು ಶಾಸನಸಭೆಗಳ ಹಕ್ಕುಗಳು ಹಾಗೂ ಅಧಿಕಾರಕ್ಕೆ ರಾಜ್ಯಪಾಲರು ಗೌರವ ಕೊಡಬೇಕು. ತೆಲಂಗಾಣ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಈ ವರ್ಷದ ಆರಂಭದಲ್ಲಿ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು ಮಸೂದೆಗಳನ್ನು 'ಸಾಧ್ಯವಾದಷ್ಟು ಬೇಗ' ವಿಲೇವಾರಿ ಮಾಡಬೇಕು ಎಂಬ ಸಂವಿಧಾನದ 200ನೇ ವಿಧಿಗೆ ರಾಜ್ಯಪಾಲರು ಗೌರವ ಕೊಡಬೇಕು ಎಂದು ಹೇಳಿತ್ತು. ಸಂವಿಧಾನದ 200ನೇ ವಿಧಿಯಲ್ಲಿ ಇರುವ 'ಸಾಧ್ಯವಾದಷ್ಟು ಬೇಗ' ಎಂಬುದರ ಅರ್ಥ 'ಆದಷ್ಟು ಬೇಗ' ಎಂದೇ ಆಗಿದೆ. ಆದರೆ, ಸಂವಿಧಾನವು ನಿರ್ದಿಷ್ಟ ಕಾಲಮಿತಿಯನ್ನು ನಿಗದಿ ಮಾಡದಿರುವುದನ್ನು ರಾಜ್ಯಪಾಲರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ತಮ್ಮ ಸಾಂವಿಧಾನಿಕ ಕರ್ತವ್ಯದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ರಾಜ್ಯಪಾಲರು ರಾಷ್ಟ್ರಪತಿಯವರ ಪ್ರತಿನಿಧಿಯಾಗಿ ರಾಜ್ಯಗಳಲ್ಲಿ ಇರುತ್ತಾರೆಯೇ ಹೊರತು ಕೇಂದ್ರ ಸರ್ಕಾರದ ರಾಜಕೀಯ ಏಜೆಂಟರಾಗಿ ಅಲ್ಲ. ಇದನ್ನು ಅವರು ಸದಾ ನೆನಪಿನಲ್ಲಿ ಇರಿಸಿಕೊಳ್ಳಬೇಕು.

ದಿನದ ಟ್ವೀಟ್

ಶುದ್ಧ ಗಾಳಿಗಾಗಿ ಕೈಜೋಡಿಸೋಣ

ದೆಹಲಿ– ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿನ (ಎನ್‌ಸಿಆರ್) ಹೊಂಜು ಋತುಮಾನ ಆಧಾರಿತವಲ್ಲ ಅಥವಾ ದೀಪಾವಳಿ ಕಾರಣದಿಂದಲೂ ಅಲ್ಲ; ಅದೊಂದು ಬಿಕ್ಕಟ್ಟು. ಶುದ್ಧವಾದ ಗಾಳಿ ಹಾಗೂ ಸುರಕ್ಷಿತ ಪರಿಸರಕ್ಕಾಗಿ ನಾವೆಲ್ಲರೂ ಒಂದಾಗೋಣ ಮತ್ತು ಕಾರ್ಯನಿರ್ವಹಿಸೋಣ.

ಶಿಖರ್ ಧವನ್, ಕ್ರಿಕೆಟಿಗ

ಕಿಡಿನುಡಿ

ಪ್ರಧಾನಮಂತ್ರಿ ಜನ್‌ಧನ್ ಯೋಜನೆಗೆ ಸೇರಿದ 50 ಕೋಟಿ ಖಾತೆಗಳಲ್ಲಿ 10 ಕೋಟಿಗೂ ಹೆಚ್ಚು ಖಾತೆಗಳ ಫಲಾನುಭವಿಗಳು 11 ತಿಂಗಳಿನಿಂದಲೂ ಪತ್ತೆಯಾಗಿಲ್ಲ ಎಂಬುದನ್ನು ಹಣಕಾಸು ಸಚಿವರು ಒಪ್ಪಿಕೊಳ್ಳುತ್ತಿಲ್ಲವೇಕೆ? ಹಗರಣವೇ? ಈ ಸಂಬಂಧದ ₹ 40,000 ಕೋಟಿ ಹಣ ಬ್ಯಾಂಕುಗಳಲ್ಲಿ ಬಳಕೆಯಾಗದೇ ಬಿದ್ದಿದೆ– ಒಪ್ಪಿಕೊಳ್ಳಿ ಇಲ್ಲವೇ ನಿರಾಕರಿಸಿ!

ಜವಾಹರ್ ಸರ್ಕಾರ್, ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್

25 ವರ್ಷಗಳ ಹಿಂದೆ

ಶನಿವಾರ, 7-11-1998

• ಧರಣಿನಿರತ ಕಾಂಗ್ರೆಸ್ ಸದಸ್ಯರ ಹೊರಹಾಕಿ ಮೇಲ್ಮನೆ ಕಲಾಪ

ಬೆಂಗಳೂರು, ನ. 6– ಧರಣಿ ಕುಳಿತು, ಸಭೆಯ ಕಲಾಪಕ್ಕೆ ಅಡ್ಡಿ ಉಂಟು ಮಾಡಿದರೆಂಬ ಕಾರಣಕ್ಕೆ 19 ಮಂದಿ ಕಾಂಗ್ರೆಸ್ ಸದಸ್ಯರನ್ನು ಹೆಸರಿಸಿದ ಸಭಾಪತಿ ಡಿ.ಬಿ. ಕಲ್ಮಣ್‌ಕರ್ ಅವರು, ಕಲಾಪದಲ್ಲಿ ಭಾಗವಹಿಸದಂತೆ ಆದೇಶಿಸಿ ಹೊರಕ್ಕೆ ಕಳುಹಿಸಿದ ಅಪರೂಪದ ಪ್ರಸಂಗ ವಿಧಾನಪರಿಷತ್ತಿನಲ್ಲಿ ನಡೆಯಿತು.

ಧರಣಿ ನಿಲ್ಲಿಸಿ ಸಭೆಯ ಕಾರ್ಯಕಲಾಪ ನಡೆಯಲು ಸಹಕರಿಸಬೇಕೆಂದು ಸಭಾಪತಿ ಮತ್ತು ಕಂದಾಯ ಸಚಿವ ಬಿ. ಸೋಮಶೇಖರ್ ಅವರು ಹಲವು ಬಾರಿ ಕೇಳಿಕೊಂಡರೂ ಧರಣಿ ನಿಲ್ಲಿಸಲಿಲ್ಲ. ಇದರಿಂದ ಸಭಾಪತಿ ಅವರು, 'ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್ ಸೇರಿದಂತೆ ಕಾಂಗ್ರೆಸ್ಸಿನ ಎಲ್ಲಾ 19 ಸದಸ್ಯರೂ ದಿನದ ಉಳಿದ ಅವಧಿಗೆ ಸಭೆಯಿಂದ ಹೊರಹೋಗಬೇಕು' ಎಂದು ಆದೇಶಿಸಿದರು.

• 'ಸಿಯಾಚಿನ್' ಕುರಿತ ಚರ್ಚೆಗೆ ಸಮ್ಮತಿ

ನವದೆಹಲಿ, ನ. 6 (ಯುಎನ್‌ಐ,ಪಿಟಿಐ)– ಮುಂದಿನ ಸುತ್ತಿನಲ್ಲಿ ಚರ್ಚೆಯನ್ನು ಮತ್ತೆ ಕೈಗೆತ್ತಿಕೊಳ್ಳುವ ನಿರ್ಧಾರದೊಂದಿಗೆ, ನಿತ್ಯ ಕಾಳಗ ನಡೆಯುತ್ತಿರುವ ಗಡಿಯಂಚಿನ ಸಿಯಾಚಿನ್ ಹಿಮನದಿ ಕುರಿತ ಮಾತುಕತೆಯನ್ನು ಭಾರತ ಮತ್ತು ಪಾಕ್‌ನ ಕಾರ್ಯದರ್ಶಿಗಳು ಇಂದು ಮುಕ್ತಾಯ ಗೊಳಿಸಿದರು.

50 ವರ್ಷಗಳ ಹಿಂದೆ

ಬುಧವಾರ, 7-11-1973

• ವಿಧಾನಸಭೆಗೆ ವಾಟಾಳ್ ಆಯ್ಕೆ ರದ್ದು: ಸಾಗರ್ ಗೆಲುವಿನ ಘೋಷಣೆ

ಬೆಂಗಳೂರು, ನ. 6– ನಗರದ ಚಾಮರಾಜಪೇಟೆ ಕ್ಷೇತ್ರದಿಂದ ರಾಜ್ಯದ ವಿಧಾನಸಭೆಗೆ ಚುನಾಯಿತರಾಗಿದ್ದ ಕನ್ನಡ ಚಳವಳಿಗಾರ, ಪಕ್ಷೇತರ ಸದಸ್ಯ ಶ್ರೀ ವಾಟಾಳ್ ನಾಗರಾಜ್ ಅವರ ಆಯ್ಕೆಯನ್ನು ಕರ್ನಾಟಕ ಹೈಕೋರ್ಟ್ ಇಂದು ರದ್ದುಪಡಿಸಿ ಆ ಕ್ಷೇತ್ರದ ಇನ್ನೊಬ್ಬ ಉಮೇದುವಾರರಾಗಿದ್ದ ದಯಾನಂದ ಸಾಗರ್ ಅವರು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಿತು.

ಸಂಸತ್ತಿನ ಉಭಯ ಸದನಗಳಿಗಾಗಲಿ ಅಥವಾ ರಾಜ್ಯದ ವಿಧಾನಸಭೆಗಾಗಲಿ ಅಥವಾ ವಿಧಾನಪರಿಷತ್ತಿಗಾಗಲಿ, ಈ ಆಜ್ಞೆ ಜಾರಿಗೆ ಬರುವ ದಿನದಿಂದ ಆರು ವರ್ಷಗಳ ಕಾಲ ಅವರು (ಶ್ರೀ ನಾಗರಾಜ್) ಸದಸ್ಯರಾಗಲು ಅನರ್ಹರಾಗಿದ್ದಾರೆಂದು ಘೋಷಿಸಿತು.

• ಗೃಹ ನಿರ್ಮಾಣ ಮಂಡಳಿ ಅಧ್ಯಕ್ಷರಿಂದ ಬೀಗ ಒಡೆಸಿ ಕಾರ್ಯನಿರ್ವಹಣೆ

ಬೆಂಗಳೂರು, ನ. 6– ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷ ಶ್ರೀ ಎಸ್.ಎ. ಅಗಡಿ ಅವರು, ಅಧ್ಯಕ್ಷರ ಕಚೇರಿಯ ಬೀಗ ಒಡೆದು ಪ್ರವೇಶಿಸಿದ ಅಪೂರ್ವ ಘಟನೆ ಇಂದು ಬೆಳಿಗ್ಗೆ ನಡೆದಿದೆ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷ ಶ್ರೀ ಅಗಡಿ ಮತ್ತು 5 ಮಂದಿ ಸದಸ್ಯರ ಅಧಿಕಾರಾವಧಿಯನ್ನು ರದ್ದುಗೊಳಿಸಿ ಹಾಗೂ ಗೃಹ ನಿರ್ಮಾಣ ಇಲಾಖೆಯ ಕಾರ್ಯದರ್ಶಿ ಶ್ರೀ ಎಸ್. ವೆಂಕಟೇಶ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ನವೆಂಬರ್ 3ರಂದು ಸರ್ಕಾರ ಹೊರಡಿಸಿದ್ದ ಪ್ರಕಟಣೆ ವಿರುದ್ಧ ರಾಜ್ಯ ಹೈಕೋರ್ಟ್ ನಿನ್ನೆ ತಡೆಯಾಜ್ಞೆ ನೀಡಿದೆ.

ಹಮಾಸ್ ಬಂಡುಕೋರರನ್ನು ಇಸ್ರೇಲ್ ಹತ್ತಿಕ್ಕಿದರೂ ಸಮಸ್ಯೆ ಬಗೆಹರಿಯಲಾರದು

ಇಸ್ರೇಲ್– ಹಮಾಸ್ ಸಮರ, ಮುಂದೆ?

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಇಸ್ರೇಲ್ ಮತ್ತು ಹಮಾಸ್ ನಡುವಿನ ಕದನ ಆರಂಭವಾಗಿ ಒಂದು ತಿಂಗಳು ಕಳೆದಿದೆ. ಆದರೆ ಇನ್ನೂ ಇಸ್ರೇಲ್ ಮೇಲಿನ ರಾಕೆಟ್ ದಾಳಿ, ಹಮಾಸ್ ಅಡಗುತಾಣಗಳ ಮೇಲಿನ ಇಸ್ರೇಲ್ ಪ್ರತಿದಾಳಿ ನಿಂತಿಲ್ಲ. ಗಾಜಾಪಟ್ಟಿ ಎಂಬ ಜನಸಂದಣಿಯ ತುಂಡುಭೂಮಿಯಲ್ಲಿ ಮಾನವೀಯ ಬಿಕ್ಕಟ್ಟು ಉಂಟಾಗಿದೆ. ಆಹಾರ, ನೀರು, ಇಂಧನ ಮತ್ತು ವೈದ್ಯಕೀಯ ಸೌಲಭ್ಯದ ಅಭಾವ ಜನರನ್ನು ಕೊಲ್ಲುತ್ತಿದೆ. ಗಾಜಾಪಟ್ಟಿಯ ಜನರಿಗೆ ಹೆಚ್ಚು ಆಯ್ಕೆಗಳು ಉಳಿದಿಲ್ಲ.

ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಇಸ್ರೇಲ್‌ನ ಹಿಂದಿನ ಯುದ್ಧಗಳಿಗೂ ಈಗಿನ ಯುದ್ಧಕ್ಕೂ ವ್ಯತ್ಯಾಸವಿದೆ. ಈ ಎಪ್ಪತ್ತೈದು ವರ್ಷಗಳಲ್ಲಿ ನಾಲ್ಕಾರು ಬಾರಿ ಇಸ್ರೇಲ್ ನೆರೆಯ ರಾಷ್ಟ್ರಗಳೊಂದಿಗೆ ಕಾದಾಡಿದೆಯಾದರೂ ಅವು ನೇರ ಯುದ್ಧಗಳಾಗಿದ್ದವು. ಇಸ್ರೇಲ್ ತನ್ನ ಸೇನಾ ಸಾಮರ್ಥ್ಯವನ್ನು, ಆಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ಆ ಯುದ್ಧಗಳಲ್ಲಿ ಜಯಿಸಿತ್ತು.

ಆದರೆ ಈಗಿನದ್ದು ಬೇರೆಯದೇ ಕತೆ. ಹಮಾಸ್ ಹಲವು ವರ್ಷಗಳ ಪೂರ್ವತಯಾರಿ ಮಾಡಿಕೊಂಡೇ ಇಸ್ರೇಲ್ ಮೇಲೆ ಸಮರ ಸಾರಿದೆ. ಸುರಂಗಗಳನ್ನು ಗಾಜಾಪಟ್ಟಿಯ ಉದ್ದಗಲಕ್ಕೂ ನಿರ್ಮಿಸಿಕೊಂಡಿದೆ. ಗಾಜಾದ ಆಸ್ಪತ್ರೆ, ಶಾಲೆ ಮತ್ತು ಜನವಸತಿಗಳ ಅಡಿಯಲ್ಲಿ ತನ್ನ ಶಸ್ತ್ರಾಗಾರವನ್ನು ಮತ್ತು ಅಡಗುತಾಣಗಳನ್ನು ನಿರ್ಮಿಸಿಕೊಂಡು ಇಸ್ರೇಲ್ ಮೇಲೆ ದಾಳಿಗೆ ಇಳಿದಿದೆ.

ಇಸ್ರೇಲ್ ಸೇನೆ ಇಕ್ಕಟ್ಟಿನ ಕಾಲುದಾರಿಗಳ ಮೂಲಕ ಹೋಗಿಯೇ ಹಮಾಸ್ ಜೊತೆಗೆ ಕಾದಾಡಬೇಕಾದ ಪರಿಸ್ಥಿತಿಯಿದೆ. ಆದರೆ ಭೂಮಾರ್ಗದ ಕಾರ್ಯಾಚರಣೆ ಸುಲಭವಿಲ್ಲ. ಇಸ್ರೇಲ್ ಸೈನಿಕರನ್ನು ಗುರಿಯಾಗಿಸಿಕೊಂಡು ಹಮಾಸ್ ಅಡಗುತಾಣದಿಂದಲೇ ದಾಳಿ ನಡೆಸಿದರೆ, ಇಸ್ರೇಲ್ ಸೇನೆ ಪ್ರತಿದಾಳಿ ನಡೆಸುವುದು ತ್ರಾಸದಾಯಕ. ಬರೀ ವಾಯುದಾಳಿಯನ್ನು ನೆಚ್ಚಿಕೊಂಡರೆ ಅದು ಅಮಾಯಕರ ಸಾವಿಗೆ ಕಾರಣವಾಗುತ್ತದೆ ಮತ್ತು ಜಾಗತಿಕ ಆಕ್ರೋಶ ಇಸ್ರೇಲ್ ಕಡೆ ತಿರುಗುತ್ತದೆ.

ಈಗ ಆಗಿರುವುದೇ ಅದು. ಅಕ್ಟೋಬರ್ 7ರ ಹಮಾಸ್ ದಾಳಿಯ ಬಳಿಕ, ಭಾರತ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳು ಇಸ್ರೇಲ್‌ಗೆ ಬೆಂಬಲವಾಗಿ ನಿಂತಿದ್ದವು ಮತ್ತು ಹಮಾಸ್ ಕೃತ್ಯವನ್ನು ಭಯೋತ್ಪಾದನೆ ಎಂದು ಒಕ್ಕೊರಲಿನಿಂದ ಖಂಡಿಸಿದ್ದವು. ನಂತರ ಹಮಾಸ್ ವಿರುದ್ಧ ಇಸ್ರೇಲ್ ದಾಳಿಗೆ ಇಳಿಯಿತು. ಎಷ್ಟೇ ಶಕ್ತಿಶಾಲಿ ರಾಷ್ಟ್ರವಾದರೂ ಭಾವನಾತ್ಮಕವಾಗಿ ಸಿಟ್ಟಿನ ಭರದಲ್ಲಿ ಯುದ್ಧ ಘೋಷಿಸಿದರೆ ಅದು ಗುರಿ ಮುಟ್ಟಲಾರದು. ಅಫ್ಗಾನಿಸ್ತಾನ ಮತ್ತು ಇರಾಕ್‌ನಲ್ಲಿ ಅಮೆರಿಕಕ್ಕೆ ಹಿನ್ನಡೆ ಯಾದದ್ದು ಆ ಕಾರಣದಿಂದಲೇ. ಹಮಾಸ್ ಹಿಡಿದಿಟ್ಟುಕೊಂಡಿರುವ ಒತ್ತೆಯಾಳುಗಳನ್ನು ಬಂಧಮುಕ್ತಗೊಳಿಸುವುದು ಇಸ್ರೇಲಿನ ಮೊದಲ ಆದ್ಯತೆ ಆಗಬೇಕಿತ್ತು, ಆ ದಿಸೆಯಲ್ಲಿ ಕಾರ್ಯಾಚರಣೆ ನಡೆಸುತ್ತೇವೆ ಎಂದು ಇಸ್ರೇಲ್ ಹೊರಟಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ. ಆದರೆ 'ಹಮಾಸ್ ಅನ್ನು ಮೂಲೋತ್ಪಾಟನೆ ಮಾಡುತ್ತೇವೆ' ಎಂದು ಇಸ್ರೇಲ್ ಹೊರಟಿತು. ಹಮಾಸ್ ದಾಳಿಯ ಬಳಿಕ ಆಂತರಿಕವಾಗಿ ಇಸ್ರೇಲ್ ಸರ್ಕಾರದ ವಿರುದ್ಧ ಭುಗಿಲೆದ್ದ ಇಸ್ರೇಲೀಯರ ಆಕ್ರೋಶವನ್ನು ತಣಿಸಲು ಇಂತಹ ಹೇಳಿಕೆಯನ್ನು ಇಸ್ರೇಲ್ ನಾಯಕರು ನೀಡಿದರು ಖರೆ, ಆದರೆ ವಾಯುದಾಳಿ ಆರಂಭವಾದ ಬಳಿಕ ಜಾಗತಿಕ ಅಭಿಪ್ರಾಯ ಬದಲಾಯಿತು. ಗಾಜಾದ ಜನರ ಆಕ್ರಂದನ, ಜನವಸತಿ ಮತ್ತು ಆಸ್ಪತ್ರೆಗಳ ಮೇಲಿನ ದಾಳಿಯ ಚಿತ್ರ ಹೊರಬೀಳುತ್ತಿದ್ದಂತೆಯೇ ಇಸ್ರೇಲ್ ಪರ ಇದ್ದ ಅಭಿಪ್ರಾಯ ಕರಗತೊಡಗಿತು.

ಗಾಜಾದಲ್ಲಿ ಮಾನವೀಯ ಬಿಕ್ಕಟ್ಟು ಎದುರಾದಾಗ ಇಸ್ರೇಲಿನ ಕಿವಿ ಹಿಂಡುವ ಕೆಲಸವನ್ನು ಅಮೆರಿಕ ತೆರೆಮರೆಯಲ್ಲಿ ಮಾಡಿತು. ಇಸ್ರೇಲ್ ತನ್ನ ಕಾರ್ಯಾಚರಣೆಯನ್ನು ನಿಧಾನಗೊಳಿಸಿತು. ಇಲ್ಲಿ ಕೆಲವು ಪ್ರಶ್ನೆಗಳಿವೆ. ಇಸ್ರೇಲ್ ಮೇಲಿನ ದಾಳಿಯ ಮೂಲಕ ಹಮಾಸ್ ಸಾಧಿಸಿದ್ದೇನು? ಒಂದೊಮ್ಮೆ ಇಸ್ರೇಲ್ ಹೇಳುತ್ತಿರುವಂತೆ, ಹಮಾಸ್‌ನ ನಿರ್ನಾಮ ಸಾಧ್ಯವಾದರೂ ಅಲ್ಲಿಗೆ ಸಮಸ್ಯೆ ಮುಗಿಯುತ್ತದೆಯೇ? ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ಸಮಸ್ಯೆಯ ಮೂಲದಲ್ಲಿರುವುದು ಅಸ್ತಿತ್ವದ ಪ್ರಶ್ನೆ. ಅದು ಅಪನಂಬಿಕೆ, ಪರಸ್ಪರ ನಿರಾಕರಣೆ ಮತ್ತು ಪ್ರತೀಕಾರ ಎಂಬ ಕವಲುಗಳಾಗಿ ಹೆಮ್ಮರವಾಗಿದೆ.

ಒಂದು ಹಂತದಲ್ಲಿ ದ್ವಿರಾಷ್ಟ್ರದ ಸೂತ್ರಕ್ಕೆ ಇಸ್ರೇಲ್ ಬದ್ಧವಾಗಿತ್ತಾದರೂ, ಪಶ್ಚಿಮ ದಂಡೆಯಲ್ಲಿ ಇಸ್ರೇಲೀಯರನ್ನು ತುಂಬುತ್ತಾ ತನ್ನ ಹಿಡಿತ ಸಾಧಿಸುವ ಪ್ರಯತ್ನಕ್ಕೆ ಮುಂದಾಯಿತು. ಮೊದಲಿಗೆ ಇಸ್ರೇಲಿನ ಅಸ್ತಿತ್ವವನ್ನು ಸಾರಾಸಗಟಾಗಿ ತಿರಸ್ಕರಿಸಿದ್ದ ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆ, ಕ್ಲಿಂಟನ್ ಅವಧಿಯಲ್ಲಿ ಇಸ್ರೇಲ್ ಎಂಬ ವಾಸ್ತವವನ್ನು ಒಪ್ಪಿಕೊಂಡಿತು. ಆದರೆ ಸಮಸ್ಯೆ ಬಗೆಹರಿಯಲಿಲ್ಲ. ಓಸ್ಲೋ ಒಪ್ಪಂದದ ಬಳಿಕ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ಹುಡುಕುವ ಪ್ರಯತ್ನಗಳು ನಡೆಯಲಿಲ್ಲ. ಅದು ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆಯ ಕುರಿತ ಅಪನಂಬಿಕೆಗೆ ಜಾಗ ಒದಗಿಸಿತು. ಆ ಜಾಗದಲ್ಲಿ ಹುಟ್ಟಿಕೊಂಡ ಹಮಾಸ್, ಗಾಜಾದ ಮೇಲೆ ಹಿಡಿತ ಸಾಧಿಸಿತು.

ಪಶ್ಚಿಮ ದಂಡೆಯಲ್ಲಿ ಪ್ರಭಾವ ಹೊಂದಿದ್ದ ಫತಾಹ್ ಮತ್ತು ಹಮಾಸ್ ನಡುವೆ ಮತ್ತೊಂದು ಬಗೆಯ ಪೈಪೋಟಿ ಆರಂಭವಾಯಿತು. ಪ್ಯಾಲೆಸ್ಟೀನ್ ಪರ ಇರುವ ಏಕೈಕ ರಾಜಕೀಯ ಧ್ವನಿಯಾಗಿ ತಾನು ಹೊರಹೊಮ್ಮಬೇಕು ಎಂಬ ತುಡಿತವನ್ನು ಹಮಾಸ್ ಹೊಂದಿತ್ತು. ಇಸ್ರೇಲ್ ಮೇಲಿನ ದಾಳಿಯಿಂದ ತನ್ನ ಕಾರ್ಯಸಾಧನೆಗೆ ಅನುಕೂಲವಾದೀತು ಎಂದು ಹಮಾಸ್ ಭಾವಿಸಿರಬಹುದು. ಹಾಗಾಗಿ, ಮಾನವ ಗುರಾಣಿ ಹಿಡಿದು ಅದು ತನ್ನ ಧ್ಯೇಯವನ್ನು ಈಡೇರಿಸಿಕೊಳ್ಳಲು ಹೊರಟಿರಬಹುದು. ಒತ್ತೆಯಾಳುಗಳನ್ನು ಮುಂದಿರಿಸಿ, ಇಸ್ರೇಲನ್ನು ಕದನವಿರಾಮಕ್ಕೆ ಒಪ್ಪಿಸುವ ತಂತ್ರವನ್ನು ಹಮಾಸ್ ಅನುಸರಿಸುತ್ತಿರಬಹುದು.

ಆದರೆ ಕದನವಿರಾಮ ಘೋಷಿಸಿ ಒತ್ತೆಯಾಳುಗಳ ಬಿಡುಗಡೆಗೆ ಹಮಾಸ್ ಜೊತೆಗೆ ಮಾತುಕತೆಗೆ ಕೂತರೆ, ಅದನ್ನು ಜಗತ್ತು ಇಸ್ರೇಲಿನ ಸೋಲು ಎಂದು ನೋಡುತ್ತದೆ. ಅದು ಇಸ್ರೇಲಿಗೆ ಬೇಕಿಲ್ಲ. ಹಾಗಾಗಿಯೇ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸುವ ಹೊಣೆಯನ್ನು ಅದು ಅಮೆರಿಕದ ಹೆಗಲಿಗೆ ಹಾಕಿದಂತಿದೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಬ್ಲಿಂಕೆನ್ ಅವರು, ಜೋರ್ಡನ್, ಕತಾರ್, ಸೌದಿ, ಈಜಿಪ್ಟ್, ಯುಎಇ ಮತ್ತು ಟರ್ಕಿ ನಾಯಕರ ಜೊತೆ ಮಾತುಕತೆಗೆ ಇಳಿದಿದ್ದಾರೆ. ಯುದ್ಧದ ವ್ಯಾಪ್ತಿ ಹಿರಿದಾಗುವುದನ್ನು ತಡೆಯುವ ಮತ್ತು ಒತ್ತೆಯಾಳುಗಳನ್ನು ಸುರಕ್ಷಿತವಾಗಿ ಹಿಂದಕ್ಕೆ ಕರೆತರುವ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಅಮೆರಿಕ ಮಾಡುತ್ತಿದೆ.

ಹಮಾಸ್ ಅನ್ನು ಕಿತ್ತೊಗೆಯಲು ಪಣ ತೊಟ್ಟಿರುವ ಇಸ್ರೇಲ್ ಒಂದೊಮ್ಮೆ ಅದನ್ನು ಸಾಧ್ಯಮಾಡಿದರೂ, ಸಮಸ್ಯೆ ಬಗೆಹರಿಯಲಾರದು. 1967ರಿಂದ 2005ರವರೆಗೆ ಗಾಜಾವನ್ನು ಹಿಡಿದಿಟ್ಟುಕೊಂಡಿದ್ದ ಇಸ್ರೇಲ್, ಅಲ್ಲಿ ಏನನ್ನೂ ಸಾಧಿಸಲು ಸಾಧ್ಯವಾಗಿರಲಿಲ್ಲ. ಗಾಜಾದಿಂದ ಇಸ್ರೇಲ್ ಹೊರನಡೆದ ಕೂಡಲೇ ಹಮಾಸ್ ತನ್ನ ಹಿಡಿತವನ್ನು ಬಿಗಿಗೊಳಿಸಿತು. ಈಗ ಮತ್ತೊಮ್ಮೆ ಗಾಜಾವನ್ನು ಅಧೀನಕ್ಕೆ ತೆಗೆದುಕೊಂಡರೂ, ಆ ಕಿರಿದಾದ ಪ್ರದೇಶವನ್ನು ಸಂಭಾಳಿಸುವುದು ಸುಲಭವಿಲ್ಲ ಎಂಬುದು ಇಸ್ರೇಲಿಗೂ ಗೊತ್ತಿದೆ. ಕೆಲ ಸಮಯದ ಬಳಿಕ ಗಾಜಾವನ್ನು ಇಸ್ರೇಲ್ ತೊರೆದರೆ ಹಮಾಸ್ ಜಾಗಕ್ಕೆ ಇಸ್ಲಾಮಿಕ್ ಜಿಹಾದ್ ಸಂಘಟನೆ ಬಂದು ಕೂರುತ್ತದೆ. ಕತಾರ್ ಅಥವಾ ಮತ್ತಿನ್ನಾವುದೋ ದೇಶದಲ್ಲಿ ಕೂತ ನಾಯಕರ ಆಣತಿಯಂತೆ ಅದು ಕಾರ್ಯನಿರ್ವಹಿಸುತ್ತದೆ.

ಅತ್ತ ಪಶ್ಚಿಮದಂಡೆಯ ಆಡಳಿತವನ್ನು ಫತಾಹ್ ನೋಡಿಕೊಳ್ಳುತ್ತಿದೆ ಮತ್ತು ಅದರಿಂದ ಇಸ್ರೇಲಿಗೆ ಹೆಚ್ಚಿನ ತೊಂದರೆಯಾಗಿಲ್ಲ ನಿಜ. ಗಾಜಾವನ್ನು ಫತಾಹ್ ನಿಯಂತ್ರಣಕ್ಕೆ ಬಿಡುವ ಯೋಚನೆ ಮಾಡಿದರೂ, ಗಾಜಾದ ಜನ ಫತಾಹ್ ನಾಯಕತ್ವವನ್ನು ಒಪ್ಪಿಕೊಳ್ಳುವರೇ ಎಂಬ ಪ್ರಶ್ನೆ ಇದೆ.

ಒಂದೊಮ್ಮೆ ಅರಬ್ ರಾಷ್ಟ್ರಗಳು ಮತ್ತು ಅಮೆರಿಕ ಜೊತೆಗೂಡಿ, ದ್ವಿರಾಷ್ಟ್ರ ಸೂತ್ರದ ಅನುಷ್ಠಾನಕ್ಕೆ ಇದೇ ಸರಿಯಾದ ಸಮಯ ಎಂದು ನಿರ್ಧರಿಸಿ ಕಾರ್ಯೋನ್ಮುಖವಾದರೂ, ಪ್ಯಾಲೆಸ್ಟೀನ್ ಭದ್ರತೆ ಮತ್ತು ಪುನರ್ನಿರ್ಮಾಣ ಕಾರ್ಯವನ್ನು ಈಜಿಪ್ಟ್, ಜೋರ್ಡನ್, ಸೌದಿಯಂತಹ ಅರಬ್ ರಾಷ್ಟ್ರಗಳು ಒಟ್ಟಾಗಿ ವಹಿಸಿಕೊಳ್ಳಬೇಕಾಗುತ್ತದೆ. ಪಶ್ಚಿಮದಂಡೆಯಲ್ಲಿರುವ ಇಸ್ರೇಲ್‌ನ ಸೆಟಲ್ಮೆಂಟ್‌ಗಳನ್ನು ತೆರವುಗೊಳಿಸುವಂತೆ ಇಸ್ರೇಲನ್ನು ಅಮೆರಿಕ ಒಪ್ಪಿಸಬೇಕಾಗುತ್ತದೆ. ಒಂದೊಮ್ಮೆ ಇಸ್ರೇಲ್ ಒಪ್ಪಿದರೂ ಅಮೆರಿಕ, ಅರಬ್ ರಾಷ್ಟ್ರಗಳು ಮತ್ತು ಇಸ್ರೇಲ್ ಒಂದಾಗಿ ನಿಂತು ಬಿಕ್ಕಟ್ಟು ಬಗೆಹರಿಸಿಕೊಳ್ಳುವುದನ್ನು ಇರಾನ್, ಟರ್ಕಿ, ರಷ್ಯಾ ಮತ್ತು ಚೀನಾ ಸಹಿಸಲಾರವು. ಹಾಗಾಗಿ ಇಸ್ರೇಲ್– ಹಮಾಸ್ ಸಮರ ತಿಂಗಳೊಪ್ಪತ್ತಿನಲ್ಲಿ ನಿರ್ಣಾಯಕ ಹಂತಕ್ಕೆ ಬಂದರೂ ಮುಂದೇನು ಎಂಬ ಪ್ರಶ್ನೆಗೆ ಉತ್ತರ ಸುಲಭವಿಲ್ಲ.

ಚುರುಮುರಿ



ಕಾಡಿನ ಕಥೆ

• ಲಿಂಗರಾಜು ಡಿ.ಎಸ್.

ಕಾಡಿನಲ್ಲಿ ಸರ್ವ ಪ್ರಾಣಿಗಳ ಸಭೆ ಸೇರಿತ್ತು. ಪ್ರಾಣಿಗಳ ಸಂಘದ ಅಧ್ಯಕ್ಷರಾದ ಸಿಂಹಯ್ಯನವರು ಮಾತನಾಡ್ತಾ ಇದ್ದರು.

'ನನ್ನ ಪ್ರೀತಿಯ ಪ್ರಜೆಗಳೇ. ನಮ್ಮ ಚಿರತೆರಾಯರು ಕಾಡುಬುಟ್ಟು ಊರಿಗೋಗಿದ್ದರು ಅಂತ ಗುಂಡಿಟ್ಟು ಕೊಂದವ್ರೆ. ಅವರ ಸಾವಿಗೆ ನಾವು ಒಂದು ನಿಮಿಷ ಮೌನಾಚರಣೆ ಮಾಡೋಣ!' ಅಂದರು ಸಿಂಹಯ್ಯ.

'ಸ್ವಾಮಿ, ದಿನಪರ್ತಿ ನಮ್ಮನ್ನ ಹಿಂಗೇ ಕೊಲ್ತಾವ್ರೆ. ನಾವು ತೆಪ್ಪಗಿರೋದು ಬುಟ್ಟು ಪ್ರತಿಭಟಿಸಬೇಕು!' ಅಂತ ಚಿರತೆಯೊಂದು ಕೂಗಾಡಿತು. ಇತರೇ ಪ್ರಾಣಿಗಳು 'ಹೌದು, ಹಗಲೊತ್ತು ಸಫಾರಿಗೆ ಬರೋರು, ರಾತ್ರಿ ಹೊತ್ತು ಕಳ್ಳಬೇಟೆಗಾರರು ನೆಮ್ಮದಿ ಇಲ್ದಂಗೆ ಮಾಡ್ಯವುರೆ!' ಅಂದವು.

'ದೊಡ್ಡೋರೆಲ್ಲಾ ನಮ್ಮ ಉಗುರನ್ನ ಕೊಳ್ಳಿಗಾಕ್ಯಂದು ಮೆರೀತಿದ್ರಲ್ಲ, ಈಗ ಉಗುರು ಪ್ಲಾಸ್ಟಿಕ್ಕಿಂದು ಅಂತ ಚೀರಾಡ್ತಾವ್ರೆ. ನಮ್ಮ ಚರ್ಮದ ಮ್ಯಾಲೆ ಕುತುಗಂಡ್ರೆ ಯೇಗ್ತೆ ಜಾಸ್ತಿಯಾದದಂತೆ!' ಹುಲಿಯಪ್ಪ ಗೋಳಾಡಿತು.

'ನಮ್ಮ ಜಾಗದಲ್ಲೆಲ್ಲಾ ಬೇಲಿ ಹಾಕ್ಯಂದು ತೋಟ ಮಾಡ್ಯವುರೆ. ನಾವು ಅತ್ತಗೋದ್ರೆ ಪಟಾಕಿ ಹೊಡೆದು ಬೆದರಿಸಿ ಜೂಟಾಟ ಆಡ್ತರೆ' ಆನೆ ಗುಂಪಿಗೆ ಸಿಟ್ಟು ಬಂದಿತ್ತು.

'ಅರಣ್ಯ ಇಲಾಖೆಯೋರು 'ಹುಲಿ ಉಗುರು ಎಲ್ಲ್ಯದೆ?' ಅಂತ ದೊಡ್ಡೋರಿಗೆ ನೋಟೀಸು, ಚಿಕ್ಕೋರಿಗೆ ಜೈಲು ತೋರಿಸ್ತಾ ಅವ್ರೆ. ಇಲಾಖೆ ಆಪೀಸೆಲ್ಲಾ ಕಾಡಿನ ತುದಿಯಲ್ಲಿರಬೇಕಲ್ಲುವ್ರಾ? ದೊಡ್ಡಾಪೀಸರುಗಳು ಏಸಿ ರೂಮಿನಗೆ ಕುತುಗಂಡು ಕಾಡಿನ ರಿಪೋರ್ಟು ಬರೀತರೆ!' ಕಂದು ಗೂಬೆ ಗೊಳ್ ಅಂತು.

'ಆಯ್ತು ಕನ್ರಯ್ಯಾ, ನಮಗೂ ತಿಂಗಳಿಗೆ ತಲಾ ಎರಡು ಸಾವಿರ ಕೊಡಿ, ಅನ್ನಭಾಗ್ಯ ಕೊಡಿ, ಕುಡಿಯೋ ನೀರಿಗೆ ಜಲಜ್ಯೋತಿ ಗ್ಯಾರಂಟಿ ಕೊಡಿ ಅಂತ ಡಿಮ್ಯಾಂಡ್ ಇಕ್ಕಮು' ಅಂದರು ಸಿಂಹಯ್ಯ.

'ಬುಡಣ್ಣೆ, ಸೀಎಮ್ಮು ಗ್ಯಾರಂಟಿಗೆ ಕಾಸಿಲ್ಲ ಅಂತ ದೇಕ್ತಾವ್ರೆ. ಡಿಸಿಎಂ ಕುರ್ಚಿ ಕನಸು ಕಾಣ್ತಾವ್ರೆ. ಮಂತ್ರಿಗಳು ಕೆಲಸ-ಬೊಗಸೆ ಬುಟ್ಟು ದೋಣು ಬಾರಿಸಿಕ್ಯಂಡು ತಿರುಗ್ತಾವ್ರೆ. ವಿರೋಧ ಪಕ್ಷದೋರು ಮುಳುಗೋಯ್ತಿವಿ ಅಂತ ತೆನೆ ಹಿಡುಕಂಡು ಕೂತವ್ರೆ. ಇವೇನು ಕಾಡುಪ್ರಾಣಿಗಳ ಥರ ಆಡ್ತವೆ?' ಅಂತ ಹಾವು ಬುಸುಗುಟ್ಟಿತು.

ಸಂಗತ

ಬೇಕು ಜೀವಕಳೆಯ ತರಗತಿ

ವಿದ್ಯಾರ್ಥಿಗಳನ್ನು ತರಗತಿ ಬೋಧನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ಅನುಭವ, ಆಲೋಚನೆಗೆ ಆಸ್ಪದವಾಗುವ ಬೋಧನಾ ವಿಧಾನಗಳನ್ನು ಬಳಸಬೇಕು

• ಎಚ್.ಬಿ.ಚಂದ್ರಶೇಖರ್

ಶಿಕ್ಷಕ ಮಿತ್ರರೊಬ್ಬರು ನನ್ನೊಂದಿಗೆ ಮಾತನಾಡುವಾಗ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ 'ನಾನು ತರಗತಿಯಲ್ಲಿ ಪಾಠ ಬೋಧನೆ ಮಾಡುವಾಗ ವಿದ್ಯಾರ್ಥಿಗಳ ಪ್ರತಿಕ್ರಿಯೆ ನೀರಸವಾಗಿರುತ್ತದೆ. ಇದರಿಂದ ಅನೇಕ ಬಾರಿ ನನ್ನ ಬೋಧನೆಯ ಉತ್ಸಾಹವೇ ಕುಗ್ಗಿಬಿಡುತ್ತದೆ' ಎಂದರು. ನನಗೂ ಈ ಅನುಭವ ಆಗಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರೇರಣಾ ಸಂವಾದ ನಡೆಸುವಾಗ ಕೆಲವು ತರಗತಿಗಳಲ್ಲಿ ಬಹಳ ನೀರಸ ಪ್ರತಿಕ್ರಿಯೆಯನ್ನು ಕಾಣುತ್ತೇನೆ.

ಕೆಲವರು ಸ್ವಲ್ಪ ಹೊತ್ತಿನ ನಂತರ ನಿಧಾನವಾಗಿ ಸ್ಪಂದಿಸುವ, ಪ್ರತಿಕ್ರಿಯಿಸಿ ಸಂವಾದಿಸುವ ಆಸಕ್ತಿ ತೋರುತ್ತಾರೆ. ಆದರೆ ಕೆಲವು ತರಗತಿಗಳಲ್ಲಿ ವಿದ್ಯಾರ್ಥಿಗಳನ್ನು ಸ್ಪಂದಿಸುವಂತೆ ಮಾಡುವುದು ನಿಜಕ್ಕೂ ಸವಾಲೆನಿಸುತ್ತದೆ. ಈ ವಿಷಯದಲ್ಲಿ ಬಾಲಕರು ಬಾಲಕಿಯರಿಗಿಂತ ಹೆಚ್ಚಿನ ನೀರಸ ಮನೋಭಾವ, ಅನಾಸಕ್ತಿ ತೋರುವುದು ಕಂಡುಬರುತ್ತದೆ. ಒಂದಷ್ಟು ವಿದ್ಯಾರ್ಥಿಗಳ ಗಮನ ಎಲ್ಲೋ ಇರುತ್ತದೆ. ಕೆಲವರ ನೋಟ ನಮ್ಮ ಕಡೆ ಇದ್ದಾಗ್ಯೂ ಅವರಲ್ಲಿ ಅನ್ಯಮನಸ್ಕತೆಯನ್ನು ಕಾಣಬಹುದು. ಏನೋ ಕಳೆದುಕೊಂಡಿರುವವರಂತೆ ಇರುವ ಕೆಲವರ ಮನೋಭಾವವು ಬೋಧಕರ ಉತ್ಸಾಹ ಕರಗಿಸುವಂತೆ ಇರುತ್ತದೆ.

ಶಾಲೆ ಎಂಬುದು ಪರಮ ಬೋರ್ ಹೊಡೆಸುವ ತಾಣ ಎಂಬುದರಲ್ಲಿ ಸಂಶಯವಿಲ್ಲ. ಚಿಕ್ಕಂದಿನಲ್ಲಿ ಖುಷಿ, ಸಂತಸ, ಉತ್ಸಾಹದಿಂದ ಪುಟಿಯುವ ಮಗು ಶಾಲೆಗೆ ಸೇರಿದ ಆರಂಭದಲ್ಲಿ ಖುಷಿಯಾಗಿಯೇ ಇದ್ದು, ಹೊಸದನ್ನು ಕಲಿಯಲು ಪ್ರಾರಂಭಿಸುತ್ತದೆ. ದಿನಗಳೆದಂತೆ ಮಗುವಿನ ಉತ್ಸಾಹವು ನಿಧಾನವಾಗಿ ಇಳಿಯುತ್ತಾ ಹೋಗುತ್ತದೆ. ಎರಡು-ಮೂರು ವರ್ಷಗಳು ಕಳೆದ ನಂತರ ಶಾಲೆಯ ಬಗ್ಗೆ ಮೊದಲಿದ್ದ ಆಸಕ್ತಿ ಹೊರಟುಹೋಗಿ, ಆ ಜಾಗದಲ್ಲಿ ಬೇಸರ ಆವರಿಸುತ್ತದೆ. ಶಾಲೆಗೆ ಆಗಾಗ್ಗೆ ಗೈರುಹಾಜರಾಗುವ ಮಗು, ಕಲಿಯುವ ವಿಷಯಗಳಲ್ಲಿ ನಿರಂತರತೆ ಕಾಣದೆ ಕಲಿಕೆಯಲ್ಲಿ ಹಿಂದೆ ಬೀಳುತ್ತಾ ಹೋಗುತ್ತದೆ.

ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಆಸಕ್ತಿಯಿಂದ ತೊಡಗಿಸಿಕೊಳ್ಳದ ಶಿಕ್ಷಕರಿದ್ದಲ್ಲಿ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಮನೆಯವರ ಒತ್ತಾಯಕ್ಕಾಗಿ ಶಾಲೆಗೆ ಹಾಜರಾಗುವ ಇಂತಹ ಮಕ್ಕಳು ಬೇಸರ, ನಿರುತ್ಸಾಹದ ಮೂರ್ತಿಗಳಾಗಿ ಶಾಲೆಗಳಲ್ಲಿ ಪ್ರತಿಷ್ಠಾಪಿತರಾಗುತ್ತಾರೆ. ಉದಾರವಾಗಿ ಉತ್ತೀರ್ಣ ಮಾಡುವ ನಿಯಮದಿಂದ ಅವರು ಪ್ರೌಢಶಾಲೆಯವರೆಗೂ ತಲುಪಿಬಿಡುತ್ತಾರೆ. ಇಂತಹ ಮಕ್ಕಳಿಗೆ ಓದು, ಬರಹ, ಸರಳ ಲೆಕ್ಕದಂತಹ ಮೂಲ ಕೌಶಲಗಳನ್ನು ಕಲಿಸುವುದೋ ಅಥವಾ ಅವರ ತರಗತಿಗೆ ಮೀಸಲಾದ ಪಠ್ಯಪುಸ್ತಕಗಳ ವಿಷಯವನ್ನು ಕಲಿಸುವುದೋ ಎಂಬ ಗೊಂದಲಕ್ಕೆ ಶಿಕ್ಷಕರು ಬೀಳುತ್ತಾರೆ.

ಜರ್ಮನಿಯ ಸಂಶೋಧಕ ರೀನ್‌ಹಾರ್ಡ್ ಪೆಕ್ರುನ್ ಹಾಗೂ ಇತರರು ದೇಶದ 5ರಿಂದ 9ನೇ ತರಗತಿವರೆಗಿನ ವಿದ್ಯಾರ್ಥಿಗಳ ಮೇಲೆ ಕೈಗೊಂಡ ಅಧ್ಯಯನದಂತೆ, ವಿದ್ಯಾರ್ಥಿಗಳಲ್ಲಿನ ಸಕಾರಾತ್ಮಕ ಭಾವನೆಗಳಾದ ಸಂತಸ ಮತ್ತು ಆತ್ಮಾಭಿಮಾನವು ಗಣಿತ ವಿಷಯದ ಕಲಿಕೆಗೆ ಅನುಕೂಲ ಕಲ್ಪಿಸಿವೆ. ಇದಕ್ಕೆ ಬದಲಾಗಿ, ವಿದ್ಯಾರ್ಥಿಗಳಲ್ಲಿನ ನಕಾರಾತ್ಮಕ ಭಾವನೆಗಳಾದ ಕೋಪ, ಆತಂಕ, ಅವಮಾನ, ಬೇಸರ, ಅಸಹಾಯಕತೆಯು ಗಣಿತ ವಿಷಯದ ಕಲಿಕೆಯನ್ನು ಕುಂಠಿತಗೊಳಿಸುತ್ತವೆ. ಈ ರೀತಿ ಕುಂಠಿತವಾದ ಸಾಧನೆಯ ಕಾರಣದಿಂದ ವಿದ್ಯಾರ್ಥಿಗಳಲ್ಲಿ ನಕಾರಾತ್ಮಕ ಭಾವನೆಗಳು ಮತ್ತಷ್ಟು ಹೆಚ್ಚಾಗುತ್ತವೆ. ಈ ಸಂಶೋಧನೆಯಿಂದ ಬಲವಾಗಿ ತಿಳಿದುಬರುವುದೇನೆಂದರೆ, ಮಕ್ಕಳು ಮತ್ತು ಹದಿಹರೆಯದವರ ಭಾವನೆಗಳಿಗೂ ಅವರ ಶೈಕ್ಷಣಿಕ ಸಾಧನೆಗೂ ನಿಕಟ ಸಂಬಂಧವಿದೆ ಎಂಬುದಾಗಿದೆ. ಇದೇ ರೀತಿಯ ಫಲಿತಾಂಶವನ್ನು ವ್ಯಕ್ತಪಡಿಸುವ ಇತರ ಸಂಶೋಧನಾ ಅಧ್ಯಯನಗಳೂ ಇವೆ.

ಈ ಹಿನ್ನೆಲೆಯಲ್ಲಿ ಶಿಕ್ಷಕರು ಉತ್ಸಾಹ, ಹುಮ್ಮಸ್ಸು, ಆಸಕ್ತಿಯಿಂದ ತರಗತಿಯ ಬೋಧನಾ- ಕಲಿಕಾ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ಕಲಿಕೆಯ ದೃಷ್ಟಿಯಿಂದ ಅನುಕೂಲಕರವಾಗಬಲ್ಲದು. ಜೊತೆಗೆ ವಿದ್ಯಾರ್ಥಿಗಳ ಕಲಿಕೆಯ ಕೊರತೆಗಳನ್ನು ಅನುಭೂತಿಯಿಂದ ಪರಿಗಣಿಸಿ, ಅವರಲ್ಲಿ ಧೈರ್ಯ ತುಂಬಿ, ಸಾವಧಾನದಿಂದ ಕಲಿಕೆಯತ್ತ ಸಾಗುವಂತೆ ಮಾಡುವುದು ಅಗತ್ಯವಾದ ಅಂಶವಾಗಿದೆ. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಕಲಿಯದಿದ್ದಲ್ಲಿ ಶಿಕ್ಷಕರು ತಮ್ಮ ಸಮಾಧಾನ ಕಳೆದುಕೊಂಡು ಅವರನ್ನು ಬೈಯುವುದು, ಶಿಕ್ಷಿಸುವುದು ಫಲ ನೀಡದು. ಇದರಿಂದ ಅವರಲ್ಲಿ ನಕಾರಾತ್ಮಕ ಭಾವನೆಗಳು ತೀವ್ರಗೊಂಡು, ಶಾಲಾ ತರಗತಿಗಳು ಅಸಹನೀಯ ಎನಿಸಿಕೊಳ್ಳುತ್ತವೆ.

ವಿದ್ಯಾರ್ಥಿಗಳನ್ನು ತರಗತಿ ಬೋಧನೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗುವಂತೆ ಅನುಭವ, ಆಲೋಚನೆಗೆ ಆಸ್ಪದವಾಗುವ ಬೋಧನಾ ವಿಧಾನಗಳನ್ನು ಬಳಸಬೇಕು. ಮಕ್ಕಳ ಕುತೂಹಲ, ಆಸಕ್ತಿ, ಸೃಜನಶೀಲತೆಯು ಉದ್ದೀಪನ ಆಗುವ ಕಲಿಕಾ ಚಟುವಟಿಕೆಗಳ ಆಯೋಜನೆಗೆ ಕ್ರಮ ವಹಿಸಬೇಕು. ಶಿಕ್ಷಕರು ವಿಷಯ ಬೋಧನೆ ಮಾಡುವಾಗ ತರಗತಿಗಳಲ್ಲಿ ಹೆಚ್ಚು ಮಾತನಾಡುವುದಕ್ಕಿಂತ ಪ್ರತಿ ವಿದ್ಯಾರ್ಥಿಯೂ ಮಾತನಾಡುವಂತೆ, ಪ್ರಶ್ನಿಸುವಂತೆ ಅಥವಾ ಸ್ಪಂದಿಸುವಂತೆ ಮಾಡಬೇಕು. ಈ ದಿಸೆಯಲ್ಲಿ ಶಿಕ್ಷಕರನ್ನು ಸಜ್ಜುಗೊಳಿಸುವ ಅಗತ್ಯ ಇದೆ.

ತರಗತಿಗಳು ಜೀವತಳೆಯುವಂತೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಶಿಕ್ಷಕ-ವಿದ್ಯಾರ್ಥಿಗಳಿಬ್ಬರಲ್ಲಿಯೂ ಆಸಕ್ತಿ, ಹುಮ್ಮಸ್ಸು, ಉತ್ಸಾಹವಿರುವಂತೆ ನೋಡಿಕೊಳ್ಳಬೇಕಾದ ಜರೂರು ಇದೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು

ವಾಚಕರ ವಾಣಿ

ಹೀಗಿದೆ ನಮ್ಮ ಶಾಲಾ ಶೌಚಾಲಯ!

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇತ್ತೀಚೆಗೆ ನಡೆಸಿದ ಎರಡು ದಿನಗಳ ನೇಮಕಾತಿ ಪರೀಕ್ಷೆಗೆ ಹಾಜರಾದ ನನಗೆ, ಪರೀಕ್ಷಾ ಕೇಂದ್ರವಾಗಿದ್ದ ಆ ಶಾಲೆಯಲ್ಲಿನ ಶೌಚಾಲಯದ ಸ್ಥಿತಿ ನೋಡಿ ತುಂಬಾ ಬೇಸರವಾಯಿತು. ನಾವು ಒಂದು ಬಾರಿ ಕೂಡಾ ಬಳಸಲು ಸಾಧ್ಯವಾಗದ ಸ್ಥಿತಿಯಲ್ಲಿರುವ ಶೌಚಾಲಯವನ್ನು ಆ ಶಾಲೆಯ ಮಕ್ಕಳು ಪ್ರತಿದಿನವೂ ಹೇಗೆ ಬಳಸುತ್ತಿದ್ದಾರೆ? ಇಂತಹ ಮೂಲ ಅಗತ್ಯಗಳನ್ನು ಸಹ ಪೂರೈಸಲಾಗದ ಸ್ಥಿತಿಯಲ್ಲಿ ನಮ್ಮ ಸರ್ಕಾರ ಇದೆಯೇ? ಇದೇ ರೀತಿ ಮುಂದುವರಿದರೆ ನಮ್ಮ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಇನ್ನೂ ಗಣನೀಯವಾಗಿ ಇಳಿಕೆಯಾಗುವ ಸಾಧ್ಯತೆ ಇದೆ. ಶಿಕ್ಷಣ ಇಲಾಖೆ ಕೂಡಲೇ ಇತ್ತ ಗಮನಹರಿಸಲಿ.

ಮಧುಸೂದನ್ ಡಿ.ಕೆ., ಬೆಂಗಳೂರು

ಮೊಬೈಲ್ ಸೇವಾ ಶುಲ್ಕ ಇಳಿಕೆ ಪ್ರಸ್ತಾಪಿಸುವ ಮುನ್ನ...

'ಕಾಂಗ್ರೆಸ್ ಪಕ್ಷವು ಕರ್ನಾಟಕಕ್ಕೆ ಧಕ್ಕೆ ಉಂಟುಮಾಡಿದೆ. ಸಿದ್ದರಾಮಯ್ಯ ಎಷ್ಟು ದಿನ ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯುತ್ತಾರೋ ಎಂಬ ಅನುಮಾನವಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದ್ದಾರೆ. ಜೊತೆಗೆ, ಬಿಜೆಪಿ ನೇತೃತ್ವದ ಸರ್ಕಾರದ ನೀತಿಗಳಿಂದ ಮೊಬೈಲ್ ಫೋನ್ ಸೇವಾ ಶುಲ್ಕ, ಮೊಬೈಲ್ ಫೋನ್ ಬೆಲೆ ಕಡಿಮೆ ಇದೆ. ಕಾಂಗ್ರೆಸ್ ಆಡಳಿತದಲ್ಲಿ ಇದ್ದಿದ್ದರೆ ಜನ ಮೊಬೈಲ್ ಬಳಕೆಗೆ ತಿಂಗಳಿಗೆ ನಾಲ್ಕೈದು ಸಾವಿರ ರೂಪಾಯಿ ಖರ್ಚು ಮಾಡಬೇಕಾಗಿತ್ತು ಎಂದಿದ್ದಾರೆ.

ಸಂಪೂರ್ಣ ಬಹುಮತ ಇರುವ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿ ಎಷ್ಟು ದಿನ ಅಧಿಕಾರದಲ್ಲಿ ಇರುತ್ತಾರೋ ಎಂಬ ಅನುಮಾನ ಇದೆ ಎಂಬ ಮಾತು, ಪ್ರಧಾನಿಯಾದವರಿಗೆ ಶೋಭೆ ತರದು. ವಾಸ್ತವವಾಗಿ ಕಡಿಮೆ ಆಗಬೇಕಾದದ್ದು ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ. ಇಂಧನ ಸೇರಿದಂತೆ ಅನೇಕ ವಸ್ತುಗಳ ಬೆಲೆ ಗಗನಕ್ಕೇರಿದೆ. ಅವುಗಳ ಬೆಲೆ ಇಳಿಸುವ ಕುರಿತು ಚಿಂತಿಸಲಿ. ಮೊಬೈಲ್ ಸೇವೆಯ ಶುಲ್ಕ ಕಡಿಮೆ ಇರುವುದರಿಂದ ಯುವಜನತೆ ಅದರಲ್ಲೇ ಮುಳುಗಿ ಕಾಲಹರಣ ಮಾಡುತ್ತಾ ವೃತ್ತಿಯ ಬಗ್ಗೆ ಸರಿಯಾಗಿ ಗಮನಹರಿಸದೆ ಆಲಸಿಗಳಾಗಿರುವುದು ಗಮನಾರ್ಹ. ಎಂಟು ಗಂಟೆಗಳ ಕಾಲ ಕೆಲಸ ಮಾಡಬೇಕಾದ ಕಾರ್ಮಿಕರು ಗಂಟೆಗಟ್ಟಲೆ ಮೊಬೈಲಿನಲ್ಲಿ ಮಾತನಾಡುತ್ತಾ ಕಾಲಹರಣ ಮಾಡುತ್ತಾ ಉತ್ಪಾದನೆ ಕುಂಠಿತವಾಗಿದೆ. ಎಷ್ಟೋ ಬಾರಿ 'ಮಂಗನ ಕೈಲಿ ಮಾಣಿಕ್ಯ' ಎಂಬ ಗಾದೆ ಇಲ್ಲಿ ಸರಿಯಾಗಿ ಅನ್ವಯವಾಗುವುದೇನೋ ಅನಿಸುತ್ತದೆ. ಮೊಬೈಲ್ ಫೋನ್ ಈ ಕಾಲಕ್ಕೆ ಅತ್ಯಗತ್ಯ. ಆದರೆ ಅದೇ ಪ್ರಮುಖ ಅಲ್ಲ. ಮಕ್ಕಳು ಮತ್ತು ಯುವಕರಿಗೆ ಅದು ಗೀಳಾಗಿರುವುದು ಯೋಚಿಸಬೇಕಾದ ವಿಚಾರ. ಮೊಬೈಲ್ ಶುಲ್ಕ ಕಡಿಮೆಯಾಗಿದೆ ಎಂದು ಹೇಳಿಕೊಳ್ಳುವ ಮುನ್ನ ಅಗತ್ಯ ವಸ್ತುಗಳ ಬೆಲೆ ಇಳಿಸಲು ಕೂಡಾ ಮನಸ್ಸು ಮಾಡಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಗೊಂದಲ ಸೃಷ್ಟಿಸುವ ಅನಗತ್ಯ ಹೇಳಿಕೆ

ಪ್ರಗತಿಪರ ವಿಚಾರಧಾರೆಗಳನ್ನು ಪ್ರತಿಪಾದಿಸುವ ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ, ಗಣೇಶ ಪೂಜಾ ಆಚರಣೆಯನ್ನು ವಿರೋಧಿಸಿದ್ದಾರೆ. ಇದು ಬರೀ ಲಿಂಗಾಯತರಿಗೆ ಕೊಟ್ಟ ಕರೆಯೋ ಅಥವಾ ಸಮಸ್ತ ಹಿಂದೂಗಳಿಗೋ ಎನ್ನುವುದು ಸ್ಪಷ್ಟವಾಗಿಲ್ಲ. ಪ್ರತ್ಯೇಕ ಲಿಂಗಾಯತ ಧರ್ಮದ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಸ್ವಾಮೀಜಿಯ ಈ ಹೇಳಿಕೆ ಅನಗತ್ಯವಾಗಿತ್ತು. ವಿಚಿತ್ರವೆಂದರೆ, ಬಸವಣ್ಣನವರ ವಚನಗಳ ಸಾರ ಉಪನಿಷತ್‌ನಲ್ಲೂ ಇತ್ತು ಎನ್ನುವುದು ಇತ್ತೀಚಿನ ಅಧ್ಯಯನಗಳಿಂದ ತಿಳಿದುಬಂದಿದೆ. ಧಾರ್ಮಿಕ ಆಚರಣೆಗಳನ್ನು ಅವರವರ ಪಾಡಿಗೆ ಬಿಟ್ಟರೆ ಯಾವುದೇ ಗೊಂದಲ ಸೃಷ್ಟಿಯಾಗುವುದಿಲ್ಲ, ಅಲ್ಲವೇ?

ಗುರು ಜಗಳೂರು, ಹರಿಹರ

ಸ್ವಚ್ಛ ಕನ್ನಡ: ಭಾಷಾ ಬೆಳವಣಿಗೆಗೆ ಅನಿವಾರ್ಯ

'ವಿವಿಧ ಬಗೆಯಲ್ಲಿ ಕನ್ನಡ ಮಾತನಾಡುವುದನ್ನು ಗಮನಿಸಿದಾಗ, ಸ್ಪಷ್ಟವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲದ, ಆದರೂ ಭಿನ್ನವಾದ ಅಸಂಖ್ಯಾತ ಶೈಲಿಗಳು ನಮಗೆ ಕಾಣಸಿಗುತ್ತವೆ' ಎಂಬ ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ ಅವರ ಮಾತು (ಸಂಗತ, ನ. 6) ಮೇಲ್ನೋಟಕ್ಕೆ ನಿಜವೆನಿಸಿದರೂ ಸ್ವಚ್ಛ ಕನ್ನಡ ಭಾಷೆಯ ಬಳಕೆ ಅದರ ಸರಿಯಾದ ಬೆಳವಣಿಗೆಗೆ ಅನಿವಾರ್ಯ ಎನ್ನುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕೆಲವು ಟಿ.ವಿ ವಾಹಿನಿಗಳ ಬ್ರೇಕಿಂಗ್ ಸುದ್ದಿಗಳಲ್ಲಿ ಮತ್ತು ಪತ್ರಿಕೆಗಳ ಕೆಲವು ತಲೆಬರಹಗಳಲ್ಲಿ ನಿರಂತರವಾಗಿ ಆಗುತ್ತಿರುವ ತಪ್ಪುಗಳನ್ನು ಅವಲೋಕಿಸಿದಾಗ, ಭಾಷೆಯ ಸರಿಯಾದ ಬಳಕೆಯ ಬಗೆಗಿನ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಅನಿಸಿದರೆ ತಪ್ಪಾಗಲಾರದು.

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಾಗಿ ಇದೀಗ 50 ವರ್ಷಗಳಾದವು. ಈ ಸುವರ್ಣ ಸಂದರ್ಭದಲ್ಲಿ ಸ್ವಚ್ಛ ಭಾಷೆಯ ಕಲಿಕೆ ಹಾಗೂ ಬಳಕೆಯು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಬಹಳ ಮುಖ್ಯವಾಗುತ್ತದೆ. ಪ್ರೊ. ಪಾಷ ಅವರು 'ಉಚ್ಚಾರಣೆ' ಸರಿಯೋ 'ಉಚ್ಛಾರಣೆ' ಸರಿಯೋ ಎಂದು ಓದುಗರನ್ನು ಕೇಳಿದ್ದಾರೆ. ಇಲ್ಲಿ ಉತ್ + ಚಾರಣ = ಉಚ್ಚಾರಣ ಎಂಬ ಸಂಸ್ಕೃತ ಶಬ್ದದಿಂದ ಕನ್ನಡದ ಉಚ್ಚಾರಣೆ ಎಂಬ ರೂಪ ಆಗುತ್ತದೆ. ಆದ್ದರಿಂದ ಉಚ್ಚಾರಣೆ ಸರಿಯಾದ ಶಬ್ದ. ಉಚ್ಚಾರಣೆ ಎಂದರೆ ಬಾಯಿಯಲ್ಲಿ ಹೇಳುವುದು ಅಂತ ಅರ್ಥ.

ಪುರುಷೋತ್ತಮ ಭಟ್ಟ ಪೆಲ್ತಾಜೆ, ಬೆಂಗಳೂರು

ನಾಳೆ ಬದುಕಿರುವ ಬಗೆಗೆ ನಂಬಿಕೆ ಇದೆಯೇ?!

ಜನತಾದರ್ಶನ ನಡೆಯುತ್ತಿತ್ತು. ತಮ್ಮ ತಮ್ಮ ಸಮಸ್ಯೆಗಳನ್ನು ಪ್ರಜೆಗಳು ಧರ್ಮರಾಯನ ಮುಂದೆ ಹೇಳಿಕೊಳ್ಳುತ್ತಿದ್ದರು. ಧರ್ಮಜ ಸಹಾಯ ನೀಡುತ್ತಿದ್ದ. ಅಷ್ಟರಲ್ಲಿ ಸೂರ್ಯಾಸ್ತದ ಸಮಯವಾಯಿತು. ಒಬ್ಬ ಪ್ರಜೆಯ ಸಮಸ್ಯೆಯನ್ನು ಆಲಿಸಿದ ಧರ್ಮಜ, 'ಈಗ ಸೂರ್ಯಾಸ್ತದ ಸಮಯ, ಆದ್ದರಿಂದ ನೀನು ನಾಳೆ ಬಾ. ನಾನು ನಿನಗೆ ಸಹಾಯ ಮಾಡುತ್ತೇನೆ' ಎಂದು ಭರವಸೆ ನೀಡುತ್ತಿದ್ದಂತೆಯೇ ಅಲ್ಲಿಯೇ ಇದ್ದ ಭೀಮಸೇನ ಕಿಸಕ್ಕನೆ ನಕ್ಕ! ಅದನ್ನು ಧರ್ಮಜ ಪ್ರಶ್ನಿಸಿದಾಗ, ಭೀಮಸೇನ ನೀಡಿದ ಉತ್ತರ ಮಾರ್ಮಿಕವಾಗಿತ್ತು. 'ಅಣ್ಣಾ, ಪರಿಹಾರ ಕೇಳಿಕೊಂಡು ಬಂದ ಪ್ರಜೆಗೆ ನೀನು ನಾಳೆ ಬಾ ಸಹಾಯ ಮಾಡುತ್ತೇನೆ ಎಂದೆಯಲ್ಲಾ, ನಾಳೆ ಬದುಕಿರುತ್ತೀಯೆಂಬ ನಂಬಿಕೆ ನಿನಗಿದೆಯೇ?'

'... ಎರಡೂವರೆ ವರ್ಷದ ನಂತರ ನಾನೇ ಸಿಎಂ..., ಒಂದೂವರೆ ವರ್ಷದ ನಂತರ ನಾನೇ ಸಿಎಂ..., ಮುಂದಿನ ಸಿಎಂ ನಾನೇ..., ಇನ್ನೈದೂ ವರ್ಷ ನಾನೇ ಸಿಎಂ...' ಎಂಬ ನಮ್ಮ ನಾಯಕರ ಘೋಷಣೆಗಳನ್ನು ಕೇಳುವಾಗ, ಭೀಮಸೇನನು ಧರ್ಮರಾಜನಿಗೆ ಹೇಳಿದ ಮಾತು ನೆನಪಾಯಿತು.

ಪಿ.ಜೆ.ರಾಘವೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಮಾಸ್–ಇಸ್ರೇಲ್ ಸಂಘರ್ಷ

'ಸಾಕು, ಮಕ್ಕಳ ಮೇಲಿನ ಯುದ್ಧ ನಿಲ್ಲಿಸಿ'



• ಸುಕೃತ ಎಸ್., ಜಯಸಿಂಹ ಆರ್.

ಬೂದಿ ಮೆತ್ತಿದ, ರಕ್ತ ಮೆತ್ತಿದ ಪುಟ್ಟ ಕಂದಮ್ಮಗಳನ್ನು ಎದೆಗವಚಿಕೊಂಡ ತಂದೆ, ತಾಯಿಯರು ಗಾಜಾಪಟ್ಟಿಯ ಬೀದಿ ಬೀದಿಗಳಲ್ಲಿ, ಆಸ್ಪತ್ರೆಗಳಲ್ಲಿ ಆಕ್ರಂದಿಸುತ್ತಿದ್ದಾರೆ. ತನ್ನ ಇಷ್ಟದ ಬೊಂಬೆಯ ಜೊತೆ ಮಲಗಿದ್ದ ಮಗು ಈಗ ಹೆಣವಾಗಿದೆ. ತಾಯಿಯ ಮಡಿಲಲ್ಲಿ ಮಲಗಿದ್ದ ಕೂಸು, ತಾಯಿಯ ಜೊತೆಯಲ್ಲಿಯೇ, ಮಲಗಿದ ಹಾಗೆಯೇ ಚಿರನಿದ್ರೆಗೆ ಜಾರಿದೆ. ಬಾಂಬ್ ಬಿದ್ದ ಮನೆಗಳ ಅವಶೇಷಗಳ ಅಡಿಗಳಿಂದ ಮಕ್ಕಳನ್ನು ಎತ್ತಿ ಓಡುತ್ತಿರುವ, ಭುಜದ ಮೇಲೆ ಶಿಶುಗಳ ಹೆಣಗಳನ್ನು ಹೊತ್ತು ಕೂತಿರುವ ತಂದೆಯರು. ಬಾಂಬುಗಳ ಶಬ್ದಗಳಿಂದ ಬೆದರಿದ, ಕೈ ಕಾಲು ನಡುಗುತ್ತಿರುವ ಪುಟ್ಟ ಮಕ್ಕಳನ್ನು ಸಂತೈಸುತ್ತಿರುವ ವೈದ್ಯರು, ಪೋಷಕರು...

ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ಯುದ್ಧದ ವರದಿಗಾರಿಕೆಗೆ ದುಡಿಯುತ್ತಿರುವ ಸುದ್ದಿಸಂಸ್ಥೆಗಳ ಛಾಯಾಚಿತ್ರ ಪತ್ರಕರ್ತರು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ಚಿತ್ರಗಳು ಮತ್ತು ವಿಡಿಯೊಗಳ ದೃಶ್ಯಗಳಿವು. ಸುದ್ದಿಸಂಸ್ಥೆಗಳು ಜಗತ್ತಿಗೆ ಹಂಚುತ್ತಿರುವ ಚಿತ್ರಗಳೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ. 'ಗಾಜಾಪಟ್ಟಿಯ ಮೇಲಿನ ದಾಳಿಯ ದುಷ್ಪರಿಣಾಮಗಳಿಗೆ ಗುರಿಯಾಗುತ್ತಿರುವುದು ಏನೂ ಅರಿಯದ ಕಂದಮ್ಮಗಳು. ದಾಳಿಗೆ ಬಲಿಯಾದವರು ಒಂದೆಡೆ, ದಾಳಿಯಿಂದ ದೈಹಿಕವಾಗಿ, ಮಾನಸಿಕವಾಗಿ ಜರ್ಜರಿತರಾಗುತ್ತಿರುವ ಮಕ್ಕಳು ಇನ್ನೊಂದೆಡೆ'. ಅಕ್ಟೋಬರ್ ಕಡೆಯ ವಾರದಲ್ಲಿ ಯುನಿಸೆಫ್ ಬಿಡುಗಡೆ ಮಾಡಿದ ವರದಿಯಲ್ಲಿರುವ ಮಾತಿದು.

ಕಮರುತ್ತಿದೆ ಬಾಲ್ಯ

4,000+
ಇಸ್ರೇಲ್‌ನ ದಾಳಿಯಲ್ಲಿ ಮೃತಪಟ್ಟ ಪ್ಯಾಲೆಸ್ಟೀನ್‌ನ ಮಕ್ಕಳ ಸಂಖ್ಯೆ

1,356
ಇಸ್ರೇಲ್‌ನ ವಾಯುದಾಳಿಯ ನಂತರ ನಾಪತ್ತೆಯಾಗಿರುವ ಪ್ಯಾಲೆಸ್ಟೀನ್‌ನ ಮಕ್ಕಳ ಸಂಖ್ಯೆ. ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಈ ಮಕ್ಕಳು ಸಿಲುಕಿರಬಹುದು. ಆದರೆ ಅವರಲ್ಲಾ ಉಳಿದಿರುವ ಸಾಧ್ಯತೆ ತೀರಾ ಕಡಿಮೆ

150+
ಅಕ್ಟೋಬರ್ 7ರಂದು ಹಮಾಸ್ ಬಂಡುಕೋರರು ಇಸ್ರೇಲ್‌ನ ಮೇಲೆ ನಡೆಸಿದ ದಾಳಿಯಲ್ಲಿ ಮೃತಪಟ್ಟ ಮತ್ತು ನಾಪತ್ತೆಯಾದ ಇಸ್ರೇಲ್‌ನ ಮಕ್ಕಳ ಸಂಖ್ಯೆ

ಇದು ಪ್ಯಾಲೆಸ್ಟೀನ್ ಇಂಟರ್‌ನ್ಯಾಷನಲ್ ಸ್ವಯಂಸೇವಾ ಸಂಸ್ಥೆ ಟ್ವೀಟ್ ಮಾಡಿದ್ದ ಪೋಸ್ಟರ್. ಯುದ್ಧಪೀಡಿತ ಗಾಜಾಪಟ್ಟಿಯಲ್ಲಿ ಮಕ್ಕಳು ವಯಸ್ಕರಾಗುವ ಮುನ್ನವೇ ಅವರ ಬದುಕು ಮುಗಿದುಹೋಗುತ್ತದೆ ಎಂದು ಆ ಸಂಸ್ಥೆ ಈ ಪೋಸ್ಟರ್‌ಗೆ ವಿವರಣೆ ನೀಡಿತ್ತು. ಟ್ವಿಟರ್‌ನಲ್ಲಿ ಲಕ್ಷಕ್ಕೂ ಹೆಚ್ಚು ಬಾರಿ ಈ ಪೋಸ್ಟರ್ ಅನ್ನು ಹಂಚಿಕೊಳ್ಳಲಾಗಿತ್ತು

ಗಾಜಾದಲ್ಲಿ 15–19 ವರ್ಷದ ಸುಮಾರು 2.5 ಲಕ್ಷ ಮಕ್ಕಳಿದ್ದಾರೆ. ಈ ಮಕ್ಕಳು ಐದು ಯುದ್ಧ ಕಂಡಿದ್ದಾರೆ. 10 ವರ್ಷದ ಸುಮಾರು 2.7 ಲಕ್ಷ ಮಕ್ಕಳು, ನಾಲ್ಕು ಯುದ್ಧಕ್ಕೆ ಸಾಕ್ಷಿಯಾಗಿದ್ದಾರೆ. 2.8 ಲಕ್ಷದಷ್ಟಿರುವ 8 ವರ್ಷದ ಮಕ್ಕಳು ಮೂರು ಯುದ್ಧಗಳನ್ನು, ಅದರ ಪರಿಣಾಮಗಳನ್ನು ಎದುರಿಸಿವೆ. 3.3 ಲಕ್ಷದಷ್ಟಿರುವ 5 ವರ್ಷದ ಮಗು ಕೂಡ ಎರಡು ಯುದ್ಧಗಳನ್ನು ಕಂಡಿದೆ. ಗಾಜಾಪಟ್ಟಿಯಲ್ಲಿರುವ ಅಂದಾಜು 15 ಲಕ್ಷ ಮಕ್ಕಳಲ್ಲಿ 11 ಲಕ್ಷಕ್ಕೂ ಹೆಚ್ಚು ಮಕ್ಕಳು ಯುದ್ಧದ ಮಧ್ಯೆಯೇ ಹುಟ್ಟಿ, ಅಲ್ಲಿಯೇ ಬೆಳೆಯುತ್ತಿವೆ. ಆದರೆ ಇಷ್ಟೂ ಯುದ್ಧದಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ ಸಾವಿರ ಮುಟ್ಟುವುದಿಲ್ಲ. ಆದರೆ, ಈ ಬಾರಿಯ ಯುದ್ಧ ಮಕ್ಕಳನ್ನು ಗುರಿಯಾಗಿಸಿಯೇ ನಡೆಯುತ್ತಿರುವ ಯುದ್ಧದಂತೆ ಭಾಸವಾಗುತ್ತಿದೆ. ಇದೊಂದೇ ಯುದ್ಧದಲ್ಲಿ ಇಸ್ರೇಲ್‌ನ ದಾಳಿಗೆ ಬಲಿಯಾದ ಮಕ್ಕಳ ಸಂಖ್ಯೆ 4,000 ದಾಟಿದೆ. ಇನ್ನೊಂದೆಡೆ ಹಮಾಸ್‌ನ ರಾಕೆಟ್‌ಗಳು ಇಸ್ರೇಲ್‌ನ 150ಕ್ಕೂ ಹೆಚ್ಚು ಮಕ್ಕಳನ್ನು ರಕ್ತದ ಮಡುವಿಗೆ ದೂಡಿವೆ.

ಮಕ್ಕಳ ಕಾಡುವ ಕತ್ತಲು, ಬಾಂಬುಗಳ ಶಬ್ದ...: 'ರಾತ್ರಿ ವೇಳೆ ಮಕ್ಕಳ ಸಂಕಟ ಹೇಳತೀರದು. ರಾತ್ರಿ ಇಡೀ ಅಳುತ್ತವೆ. ಮಲಗಿದಲ್ಲೇ ಮೂತ್ರ ಮಾಡುತ್ತವೆ. ಅವರಿಗೆ ಮೂತ್ರ ಬಂದಿದ್ದೂ ತಿಳಿಯುತ್ತಿಲ್ಲ. ಕುರ್ಚಿಯನ್ನು ಅತ್ತಿತ್ತ ಎಳೆದಾಡಿದರೆ ಸಾಕು ಮಕ್ಕಳು ಬೆದರುತ್ತವೆ. ಯಾರೂ ದೊಡ್ಡ ದನಿಯಲ್ಲಿ ಮಾತನಾಡುವಂತಿಲ್ಲ. ಶಬ್ದ ಅವರನ್ನು ಆತಂಕಕ್ಕೆ ತಳ್ಳುತ್ತದೆ' ಎನ್ನುತ್ತಾರೆ ಗಾಜಾದ ಆರು ಮಕ್ಕಳ ತಾಯಿ ತಹ್ರೀರ್.

'ಪಕ್ಕದ ಕಟ್ಟಡಕ್ಕೆ ಬಾಂಬು ಬಿದ್ದ ಶಬ್ದ ಕೇಳಿದರೆ, ಸಾಕು ಮಕ್ಕಳು ಚೀರಾಡುತ್ತವೆ. ಯಾವಾಗಲು ಭಯದಲ್ಲೇ ಇರುತ್ತವೆ. ಏನೂ ಆಗುವುದಿಲ್ಲ. ಇದು ಪಟಾಕಿಯಷ್ಟೇ ಎನ್ನುತ್ತಾ ಸಣ್ಣ ಮಕ್ಕಳನ್ನು ಸಂತೈಸುತ್ತಿದ್ದೇವೆ. ಕಟ್ಟಡಗಳ ಅವಶೇಷಗಳ ಮಧ್ಯೆ ತಮ್ಮವರಿಗಾಗಿ ಕೂಗಾಡುವ, ಹುಡುಕಾಡುವ ಮಹಿಳೆಯರನ್ನು ನೋಡುತ್ತಾ ಕುಳಿತು ಬಿಡುತ್ತಾರೆ. ಅವರ ಮುಖದಲ್ಲಿ ಯಾವ ಭಾವವೂ ಹೊಮ್ಮುವುದಿಲ್ಲ' ಎನ್ನುತ್ತಾರೆ ಖಾನ್ ಯೂನಿಸ್‌ನ ಇಬ್ರಾಹಿಂ.

'ಕುಡಿಯಲು ನೀರಿಲ್ಲ. ಅಡುಗೆಗೂ ನೀರಿಲ್ಲ. ಸಮುದ್ರದ ಉಪ್ಪು ನೀರನ್ನೇ ಕುದಿಸಿ ಕೊಡುತ್ತೇನೆ. ನನ್ನ ನಾಲ್ಕು ವರ್ಷದ, ಏಳು ವರ್ಷದ ಮಕ್ಕಳು ಕುಡಿಯುವ ನೀರಿಗಾಗಿ ನನ್ನ ಬಳಿ ಗೋಗರೆಯುತ್ತವೆ. ನನ್ನ ಎದೆ ಒಡೆದೇ ಹೋಗುತ್ತದೆ. ಎಲ್ಲಿಂದ ನೀರು ತರುವುದು? 7 ವರ್ಷದ ಮಗಳಂತೂ ರಚ್ಚೆ ಹಿಡಿದು ಕೂರುತ್ತಾಳೆ; ಕೂದಲು ಕೆದರಿಕೊಂಡು, ರಕ್ತ ಬರುವವರೆಗೆ ಕಾಲುಗಳನ್ನು ನೆಲದ ಮೇಲೆ ಉಜ್ಜಿಕೊಳ್ಳುತ್ತಾ...' ಎಂದು ಕಣ್ಣೀರು ಹಾಕುತ್ತಾರೆ ನೆಸ್ಮಾ. 'ಮಕ್ಕಳ ಮೇಲಿನ ಯುದ್ಧ ನಿಲ್ಲಿಸಿ' ಎನ್ನುತ್ತಿದ್ದಾರೆ ಗಾಜಾದ ಪೋಷಕರು.

ಮಾನಸಿಕವಾಗಿ ಕುಗ್ಗಿರುವ ಮಕ್ಕಳು: 'ನನ್ನ ಮನೆಗೆ ಏನಾಯಿತು ಎಂದು ನನಗೆ ತಿಳಿಯದು. ಬಹುಶಃ ನನ್ನ ಪುಸ್ತಕಗಳು ನನ್ನ ಆಟಿಕೆಗಳು ಹಾಳಾಗಿರಬಹುದು'... 'ನನಗೆ ಆಟವಾಡಬೇಕು. ಹೆದರಿಕೆ ಇಲ್ಲದೆಯೇ ಆಟವಾಡಬೇಕು. ನಾನು ವಾಪಸು ಮನೆಗೆ ಹೋಗಬೇಕು'... ಗಾಜಾಪಟ್ಟಿಯಲ್ಲಿನ ವಿಶ್ವಸಂಸ್ಥೆಯ ನಿರಾಶ್ರಿತ ಶಿಬಿರಗಳಲ್ಲಿ ಇರುವ ಪುಟ್ಟ ಮಕ್ಕಳ ಬೇಡಿಕೆ ಇದು.

ಶಿಬಿರಗಳಲ್ಲಿ ಜಾಗವಿಲ್ಲದಷ್ಟು ನಿರಾಶ್ರಿತರು ತುಂಬಿದ್ದಾರೆ. ಕೆಲವೆಡೆಯಂತೂ ಪಾಳಿ ಮೇಲೆ ಜನರು ಮಲಗುತ್ತಾರೆ. ನೀರಿಲ್ಲದ ಶೌಚಾಲಯಗಳ ಸ್ಥಿತಿಗಳನ್ನು ಊಹಿಸಿಕೊಳ್ಳುವಂತೆಯೂ ಇಲ್ಲ. ಯಾವ ಜಾಗವು ಸುರಕ್ಷಿತವಲ್ಲ. ಅಡಗಿಕೊಳ್ಳಲು ಜಾಗವಿಲ್ಲ. ಆಹಾರ, ಕುಡಿಯುವ ನೀರೂ ಇಲ್ಲ. ಈ ಎಲ್ಲವೂ ಮಕ್ಕಳ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಬೀರಿವೆ.

'ಯುದ್ಧದ ನಂತರ ಆಘಾತದಿಂದ ಉಂಟಾದ ಒತ್ತಡದ ಕಾಯಿಲೆಯು ಗಾಜಾದ ಮಕ್ಕಳನ್ನು ಅವರ ಜೀವಿತಾವಧಿಯವರೆಗೂ ಕಾಡಲಿದೆ' ಎನ್ನುತ್ತಾರೆ ಗಾಜಾದ ಮನಃಶಾಸ್ತ್ರಜ್ಞ ಫಾದೆಲ್ ಅಬು ಹೀನ್.

ಭೀಕರ ಚಿತ್ರಗಳು

- 'ಈ ಜಗತ್ತು ಈ ಮಕ್ಕಳನ್ನು ಮರೆಯಬಾರದು. ಇಸ್ರೇಲ್‌ನಿಂದ ಹತ್ಯೆಯಾದ ಈ ಮಕ್ಕಳನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಗಾಜಾದಲ್ಲಿ ಎಷ್ಟು ಮಕ್ಕಳು ಸತ್ತರು ಎಂಬ ಸಂಖ್ಯೆಯನ್ನಲ್ಲ, ಮಕ್ಕಳ ಹೆಸರನ್ನು ನೆನಪಿಡಬೇಕು. ಅವರ ಕಥೆಗಳನ್ನು, ಅವರ ಕನಸುಗಳನ್ನು ಈ ಜಗತ್ತು ನೆನಪಿಟ್ಟುಕೊಳ್ಳಬೇಕು' ಎನ್ನುತ್ತಾ, ಸಾರಾ ತನ್ನ ಸತ್ತ ಮಗುವಿನ ದೇಹದ ಮೇಲೆ ಅದರ ಹೆಸರುಗಳನ್ನು ಅಚ್ಚೆ ಹಾಕಿಸಿದಳು. ಪ್ಯಾಲೆಸ್ಟೀನ್‌ನ ನೂರಾರು ಪೋಷಕರು ಹೀಗೆ ತಮ್ಮ ಮೃತ ಮಕ್ಕಳ ದೇಹಗಳ ಮೇಲೆ ಹೆಸರುಗಳನ್ನು ಅಚ್ಚೆ ಹಾಕಿಸುತ್ತಿದ್ದಾರೆ
- 'ಹಮಾಸ್‌ನ ಅ.7ರ ದಾಳಿಯಲ್ಲಿ ನನ್ನ ಪೋಷಕರನ್ನು ಕಳೆದುಕೊಂಡೆ. 7.35ಕ್ಕೆ ಅವರಿಗೆ ಕರೆ ಮಾಡಿದ್ದೆ. 7.45ರ ಹೊತ್ತಿಗೆ ಕರೆ ಮಾಡುವುದರಲ್ಲಿ ಅವರು ಹತ್ಯೆಯಾಗಿ ಹೋಗಿದ್ದರು. ಶಾಂತಿ ನೆಲೆಸಲು ಹೋರಾಡುವ ಕಾರ್ಯಕರ್ತನಾಗಬೇಕು ಎಂದು ಆಗ ನಿರ್ಧರಿಸಿದೆ. ಪ್ರತೀಕಾರ ನನ್ನ ಪೋಷಕರನ್ನು ವಾಪಸು ತಂದುಕೊಡುವುದಿಲ್ಲ' ಎನ್ನುತ್ತಾರೆ ಇಸ್ರೇಲ್‌ನ ಮೋಜ್ ಇನನ್
- ಮಕ್ಕಳನ್ನು ಗುರಿ ಮಾಡಿ ಯುದ್ಧ ಮಾಡಬಾರದು ಎಂಬ ಯುದ್ಧ ನಿಯಮವೇನೊ ಇದೆ. ಆದರೆ, ಇಸ್ರೇಲ್–ಹಮಾಸ್ ಯುದ್ಧದಲ್ಲಿ ಅದು ಪಾಲನೆಯಾಗುತ್ತಿಲ್ಲ. 1949ರ ಜಿನೀವಾ ಒಪ್ಪಂದವನ್ನು ಎಲ್ಲಾ ದೇಶಗಳು ಒಪ್ಪಿಕೊಂಡಿವೆ. ಆದರೆ, ಆಕ್ರಮಿತ ಪ್ರದೇಶದ ನಾಗರಿಕ ರಕ್ಷಣೆಯ ಕುರಿತು ಇರುವ ನಾಲ್ಕನೇ ಜಿನೀವಾ ಸಮಾವೇಶದ ಒಪ್ಪಂದಕ್ಕೆ ಇಸ್ರೇಲ್ ಒಪ್ಪಿಗೆ ನೀಡಲಿಲ್ಲ. ಯಾಕೆಂದರೆ, ಪ್ಯಾಲೆಸ್ಟೀನ್ ಅನ್ನು 'ಆಕ್ರಮಿತ ಪ್ರದೇಶ' ಎಂದು ಇಸ್ರೇಲ್ ಪರಿಗಣಿಸಿಯೇ ಇಲ್ಲ. ಇದರ ಅಡಿಯಲ್ಲಿ ಮಕ್ಕಳಿಗೆ ಇರುವ ರಕ್ಷಣೆಯನ್ನೂ ಇಸ್ರೇಲ್ ಪಾಲಿಸುತ್ತಿಲ್ಲ



'ನನಗೆ ನನ್ನ ಕಾಲುಗಳೇ ಬೇಕು'

'ನನಗೆ ಈ ಪ್ಲಾಸ್ಟಿಕ್ ಕಾಲುಗಳು ಬೇಡ. ನನಗೆ ನನ್ನ ಕಾಲುಗಳೇ ಬೇಕು. ನನಗೆ ನನ್ನ ಕಾಲುಗಳನ್ನೇ ಹಾಕಿ'.

ದಕ್ಷಿಣ ಗಾಜಾಪಟ್ಟಿಯ ಖಾನ್ ಯೂನಿಸ್‌ನ ನಸ್ಸೇರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 13 ವರ್ಷದ ಲಯಾನಾ ಅಲ್-ಬಜ್ ಪ್ರತಿದಿನ ತನ್ನನ್ನು ನೋಡಲು ಬರುವ ವೈದ್ಯರಿಗೆ ಹೇಳುವ ಮಾತಿದು.

ಅಕ್ಟೋಬರ್ ಕೊನೆಯ ವಾರದಲ್ಲಿ ಖಾನ್ ಯೂನಿಸ್ ಬಳಿ ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಲಯಾನಾ ತೀವ್ರವಾಗಿ ಗಾಯಗೊಂಡಿದ್ದಳು. ಇಸ್ರೇಲ್ ನಡೆಸಿದ ವಾಯುದಾಳಿಗೆ ಲಯಾನಾಳ ಮನೆ ನೆಲಕಚ್ಚಿತ್ತು. ಆಕೆಯ ಇಬ್ಬರು ಸೋದರರು ಸಣ್ಣಪುಟ್ಟ ಗಾಯಗಳೊಂದಿಗೆ ಬಚಾವಾಗಿದ್ದರು. ತಾಯಿಗೂ ಹೆಚ್ಚು ಗಾಯಗಳಾಗಿರಲಿಲ್ಲ. ಆದರೆ, ಗೋಡೆಯೊಂದು ಲಯಾನಾಳ ಕಾಲುಗಳ ಮೇಲೆ ಬಿದ್ದಿತ್ತು. ಅವಳ ಕಾಲು ನುಜ್ಜುಗುಜ್ಜಾಗಿದ್ದವು. ಅವಳ ಜೀವ ಉಳಿಸಲು ಕಾಲುಗಳನ್ನು ಕತ್ತರಿಸದೇ ಬೇರೆ ದಾರಿ ಇರಲಿಲ್ಲ.

'ನನ್ನ ಗೆಳೆಯರೆಲ್ಲಾ ಅವರದ್ದೇ ಕಾಲುಗಳಲ್ಲಿ ನಡೆದುಕೊಂಡು ಶಾಲೆಗೆ ಬರುತ್ತಾರೆ. ನಾನು ಈ ಪ್ಲಾಸ್ಟಿಕ್ ಕಾಲು ಹಾಕಿಕೊಂಡು ಅವರ ಜೊತೆ ಹೇಗೆ ಹೋಗುವುದು?' ಲಯಾನಾ ಕೇಳುವ ಪ್ರಶ್ನೆ ಇದು.

ಗಾಜಾಪಟ್ಟಿಯಲ್ಲಿನ ದಾಳಿಯಲ್ಲಿ ಮೃತಪಟ್ಟ ಮತ್ತು ಗಾಯಗೊಂಡ ಮಕ್ಕಳ ಚಿತ್ರಗಳು: ಎಎಫ್‌ಪಿ
ಆಧಾರ: ವಿಶ್ವಸಂಸ್ಥೆ ವರದಿಗಳು, ಯುನಿಸೆಫ್ ವರದಿಗಳು, ಎಎಫ್‌ಪಿ, ರಾಯಿಟರ್ಸ್, ಅಲ್‌ಜಜೀರಾ

ಸಿನಿ ಬಿಟ್ಸ್

'ಸಪ್ತ ಸಾಗರದಾಚೆ...' ಸೈಡ್–ಬಿ ಕಥೆಯಲ್ಲಿ ವೇಗ

ನಟ ರಕ್ಷಿತ್ ಶೆಟ್ಟಿ ನಟನೆಯ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಎರಡನೇ ಭಾಗ ನ.17ರಂದು ತೆರೆಕಾಣುತ್ತಿದೆ. ಸಿನಿಮಾದ ಮೊದಲ ಭಾಗದಲ್ಲಿ ನಿಧಾನಗತಿಯ ಚಿತ್ರಕಥೆಯ ಕುರಿತು ಕೆಲ ಪ್ರೇಕ್ಷಕರಿಗೆ ಅಸಮಾಧಾನವಿತ್ತು. ಆದರೆ ಸಿನಿಮಾದ ಎರಡನೇ ಭಾಗದ ಚಿತ್ರಕಥೆ ವೇಗವಾಗಿ ಸಾಗಲಿದೆ ಎನ್ನುವ ಸುಳಿವನ್ನು ನಿರ್ದೇಶಕ ಹೇಮಂತ್ ರಾವ್ ನೀಡಿದ್ದಾರೆ.

''ಸೈಡ್-ಎ'ಯಲ್ಲಿ ಕಥೆ ಕಮ್ಮಿ ಇತ್ತು. ನಾಲ್ಕೇ ವಾಕ್ಯದಲ್ಲಿ ಆ ಕಥೆಯನ್ನು ಹೇಳಬಹುದಿತ್ತು. ಆದರೆ ಕೆಲವೊಂದು ಪಾತ್ರಗಳ ಭಾವನೆಗಳನ್ನು ಪ್ರೇಕ್ಷಕರು ಗಾಢವಾಗಿ ಅನುಭವಿಸಬೇಕು ಎನ್ನುವ ಉದ್ದೇಶದಿಂದಲೇ ಸುದೀರ್ಘವಾದ ನಿರೂಪಣೆ ಮಾಡಿದ್ದೆ. 'ಸೈಡ್-ಬಿ' ಕಥೆ ಶೈಲಿಯೇ ಬೇರೆ ಇದೆ. ಇಲ್ಲಿ ಚಿತ್ರಕಥೆಗೆ ವೇಗವಿದೆ. ಜೊತೆಗೆ ಕಥೆ ಇನ್ನಷ್ಟು ಬಿಗಿಯಾಗಿದೆ, ಸಂಕೀರ್ಣವಾಗಿದೆ. ಇದರ ವೀಕ್ಷಣೆಯ ಅನುಭವವೂ ವಿಭಿನ್ನವಾಗಿರುತ್ತದೆ'' ಎನ್ನುತ್ತಾರೆ ಹೇಮಂತ್.

''ಸೈಡ್-ಎ'ನಲ್ಲಿ 'ಮನು' ಎಷ್ಟು ಮುಗ್ಧನೋ ಅದನ್ನು ಮುಂದುವರಿಸಿಕೊಂಡೇ ಎರಡನೇ ಭಾಗವಿದೆ. ಆತನಿಗೆ ಸಿಕ್ಕಿರುವ ಅನುಭವ ಹೊಸದಾಗಿದೆ. ಅದರಿಂದ ಆತನ ವ್ಯಕ್ತಿತ್ವದಲ್ಲಿ ಕೊಂಚ ಬದಲಾವಣೆಗಳು ಕಾಣಿಸಿಕೊಂಡಿವೆ' ಎಂದು ತಮ್ಮ ಪಾತ್ರದ ವಿವರಣೆ ನೀಡಿದ ರಕ್ಷಿತ್, 'ಸಿನಿಮಾದ ಎರಡನೇ ಭಾಗವನ್ನು ಕೇವಲ ದಕ್ಷಿಣ ಭಾರತದಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಮೊದಲನೇ ಭಾಗವನ್ನು ಮಲಯಾಳಂನಲ್ಲೂ ಬಿಡುಗಡೆ ಮಾಡುವ ಯೋಜನೆ ಇತ್ತು. ಆದರೆ ಅದೇ ವೇಳೆಗೆ ಒಟಿಟಿಯಲ್ಲೂ ಸಿನಿಮಾ ಬಿಡುಗಡೆ ದಿನಾಂಕ ಬಂದಿತ್ತು. ಹೀಗಾಗಿ ಕೊನೆಯ ಕ್ಷಣದಲ್ಲಿ ಮಲಯಾಳಂನಲ್ಲಿ ಸಿನಿಮಾ ಬಿಡುಗಡೆ ಕೈಬಿಟ್ಟೆವು. ಇದೀಗ ತಮಿಳಿನಲ್ಲಿ 'ಚಾರ್ಲಿ' ಸಿನಿಮಾ ವಿತರಣೆ ಮಾಡಿದ್ದ ಶಕ್ತಿ ವೇಲನ್ ಅವರು 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಎರಡನೇ ಭಾಗವನ್ನು ವಿತರಣೆ ಮಾಡುತ್ತಿದ್ದಾರೆ. ಮಲಯಾಳಂನಲ್ಲಿ ನಟ ಪೃಥ್ವಿರಾಜ್ ಅವರ ವಿತರಣಾ ಸಂಸ್ಥೆ ಹಾಗೂ ತೆಲುಗಿನಲ್ಲಿ ಪೀಪಲ್ ಮೀಡಿಯಾ ಫ್ಯಾಕ್ಟರಿ ಸಂಸ್ಥೆ ವಿತರಣೆ ಮಾಡುತ್ತಿದೆ. ಹಿಂದಿ ಪ್ರಾಂತ್ಯಗಳಲ್ಲಿ ಪ್ರಚಾರಕ್ಕೇ ₹4–5 ಕೋಟಿ ಖರ್ಚು ಮಾಡಬೇಕು. ಹಾಗಾಗಿ ಹಿಂದಿಯಲ್ಲಿ ಬಿಡುಗಡೆ ಮಾಡುತ್ತಿಲ್ಲ. ಹಿಂದಿಯಲ್ಲಿ ಸಿನಿಮಾ ಡಬ್ ಮಾಡಿ ಸಿದ್ಧವಿಟ್ಟುಕೊಂಡಿದ್ದೇವೆ' ಎಂದರು. ❖

ಹೇಮಂತ್, ಚೈತ್ರಾ, ರಕ್ಷಿತ್ ಶೆಟ್ಟಿ ಹಾಗೂ ರುಕ್ಮಿಣಿ

ತೆಲುಗಿನಲ್ಲಿ ರಿಷಿ ಹೊಸ ಪ್ರಾಜೆಕ್ಟ್

ಹಾಸ್ಯ ಪ್ರಧಾನ ಚಿತ್ರಗಳಷ್ಟೇ ಅಲ್ಲದೆ ಸಸ್ಪೆನ್ಸ್, ಥ್ರಿಲ್ಲರ್ ಕಥೆಗಳಲ್ಲೂ ತಮ್ಮ ನಟನೆಯ ಸಾಮರ್ಥ್ಯ ಪ್ರದರ್ಶಿಸಿರುವ ನಟ ರಿಷಿ ಅವರಿಗೆ ತೆಲುಗು ಇಂಡಸ್ಟ್ರಿಯಲ್ಲಿ ಹೊಸ ಪ್ರಾಜೆಕ್ಟ್‌ಗಳು ಕೈಸೇರುತ್ತಿವೆ. 'ಶೈತಾನ್' ಎಂಬ ವೆಬ್‌ಸಿರೀಸ್‌ನಲ್ಲಿ ರಗಡ್ ಆಗಿ ಕಾಣಿಸಿಕೊಂಡಿದ್ದ ರಿಷಿ, ಹೊಸ ತೆಲುಗು ಸಿನಿಮಾವೊಂದಕ್ಕೆ ಸಹಿ ಹಾಕಿದ್ದಾರೆ.

ರಿಷಿ

'ಆಪರೇಷನ್ ಅಲಮೇಲಮ್ಮ', 'ಕವಲುದಾರಿ', 'ನೋಡಿ ಸ್ವಾಮಿ ನಾವು ಇರೋದು ಹೀಗೆ' ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ರಿಷಿ, ಇತ್ತೀಚೆಗೆ 'ಶೈತಾನ್'ನಲ್ಲಿನ ನಟನೆಗಾಗಿ ಅತ್ಯುತ್ತಮ ಖಳನಾಯಕ ಒಟಿಟಿ ಪ್ಲೇ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದೇ ವೆಬ್ ಸಿರೀಸ್ ಮೂಲಕ ತೆಲುಗು ಪ್ರೇಕ್ಷಕರಿಗೆ ರಿಷಿ ಹತ್ತಿರವಾಗಿದ್ದಾರೆ. ಇದರಿಂದಾಗಿಯೇ ತೆಲುಗು ಇಂಡಸ್ಟ್ರಿಯಿಂದ ಹೊಸ ಅವಕಾಶಗಳೂ ರಿಷಿ ಅವರನ್ನು ಅರಸಿ ಬಂದಿವೆ.

ರವಿ ಪಸನ ಫಿಲ್ಮ್ ಕಾರ್ಪೊರೇಷನ್‌ನಡಿ ನಿರ್ಮಾಣವಾಗುತ್ತಿರುವ, ಗೋಪಿ ವಿಹಾನಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಹೊಸ ಚಿತ್ರದಲ್ಲಿ ತಿರುವೀರ್, ಫರಿಯಾ ಅಬ್ದುಲ್ಲಾ, ರವೀಂದರ್ ವಿಜಯ್, ಶೆಲ್ಲಿ ಕಿಶೋರ್, ಕಾಲಕೇಯ ಪ್ರಭಾಕರ್, ಚಿರಾಗ್ ಜಾನಿ ಮುಂತಾದವರು ನಟಿಸುತ್ತಿದ್ದಾರೆ. ಹೈದರಾಬಾದ್‌ನಲ್ಲಿ ಸಿನಿಮಾದ ಶೂಟಿಂಗ್ ಭರದಿಂದ ಸಾಗಿದೆ. ನೈಜ ಘಟನೆ ಪ್ರೇರೇಪಿತ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ರಿಷಿ ಪ್ರಮುಖ ಪಾತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಕನ್ನಡದಲ್ಲಿ 'ರಾಮನ ಅವತಾರ' ಎನ್ನುವ ಸಿನಿಮಾ ಬಿಡುಗಡೆಗೆ ರಿಷಿ ಎದುರುನೋಡುತ್ತಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ಸತ್ಯವನ್ನು ಮರೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಸರ್ವವೂ ಜಗದೊಡೆಯ ಶಿವನದೇ. ಮೆಕ್ಕಾದಲ್ಲಿರುವುದು ಶಿವಲಿಂಗ. ಎಲ್ಲಾ ಹಿಂದೂಗಳೂ ತಪ್ಪದೇ ಶೇರ್ ಮಾಡಿ. ಹರ ಹರ ಮಹಾದೇವ' ಎಂಬ ಬರಹ ಇರುವ ಪೋಸ್ಟ್ ಫೇಸ್‌ಬುಕ್‌ನಲ್ಲಿ ಹರಿದಾಡುತ್ತಿದೆ. ಅದರ ಜತೆಯಲ್ಲಿ ವಿಡಿಯೊ ಒಂದನ್ನು ಹಂಚಿಕೊಳ್ಳಲಾಗಿದೆ. ಮುಸ್ಲಿಮರು ಪರದೆಯ ಮರೆಯಲ್ಲಿರುವ ಶಿಲೆಯೊಂದನ್ನು ಮುಟ್ಟಿ ಪ್ರಾರ್ಥಿಸುತ್ತಿರುವ ದೃಶ್ಯ ಅದರಲ್ಲಿದೆ. ಮೆಕ್ಕಾದಲ್ಲಿ ಶಿವಲಿಂಗವಿದೆ. ಅದನ್ನೇ ಪರದೆಯಿಂದ ಮುಚ್ಚಲಾಗಿದೆ ಎಂದು ಹಲವರು ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಇದು ತಪ್ಪು ಮಾಹಿತಿ.

✓ 'ಇದು ಸುಳ್ಳು ಸುದ್ದಿ. ಮೆಕ್ಕಾದಲ್ಲಿರುವ ಕಾಬಾದ ನಾಲ್ಕು ಮೂಲೆಗಳ ಪೈಕಿ ಯೆಮನ್ ಮೂಲೆಯ ವಿಡಿಯೊವನ್ನು ಈ ಪೋಸ್ಟ್‌ನಲ್ಲಿ ಹಂಚಿಕೊಳ್ಳಲಾಗಿದೆ. ಆ ವಿಡಿಯೊದಲ್ಲಿ ಇರುವ ಶಿಲೆಯನ್ನು ಮುಸ್ಲಿಮರು ಮುಟ್ಟಿ ಪ್ರಾರ್ಥನೆ ಮಾಡುತ್ತಾರೆ. ಭಾರತದ ಹಜ್ ಸಮಿತಿ ಸಿದ್ಧಪಡಿಸಿದ ಹಜ್ ಯಾತ್ರೆ ಕೈಪಿಡಿಯಲ್ಲೂ ಈ ಮಾಹಿತಿ ಇದೆ. ಮೆಕ್ಕಾದ ಯೆಮನ್ ಮೂಲೆಯ ಶಿಲೆಯ ಬಗೆಗಿನ ಮಾಹಿತಿಯನ್ನು ತಿರುಚಿ ಈ ಸುಳ್ಳು ಸುದ್ದಿ ಸೃಷ್ಟಿಸಲಾಗಿದೆ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಕತ್ತರಿಸುವ ಕತ್ತರಿಯಾಗಬೇಡ ಹೊಲಿಯುವ ದಾರದಂತಾಗು

ಪಿ. ಚಂದ್ರಿಕಾ

ಸಂತ ನಾಮದೇವ ಬಟ್ಟೆಯನ್ನು ಹೊಲಿಯುತ್ತಾ ಕುಳಿತಿದ್ದರು. ಅವರ ಬಳಿಗೆ ಭಿನ್ನ ಕೋಮಿನ ಇಬ್ಬರು ಒಂದು ದೂರನ್ನು ತಂದರು. ಅವರ ದೂರು ಬಹುವಿಚಿತ್ರವಾಗಿತ್ತು. ಬಹುಕಾಲ ಮಿತ್ರರಾಗಿದ್ದ ಅವರಲ್ಲಿ ಈಗ ವೈಷಮ್ಯ ಮೂಡಿತ್ತು. ಕಾರಣ ಒಬ್ಬ ಇನ್ನೊಬ್ಬನ ಧರ್ಮವನ್ನು ಹೀಯಾಳಿಸಿದ್ದ. ಅದನ್ನು ಕೇಳಿ ಮತ್ತೊಬ್ಬ ಕೆರಳಿ ಸ್ನೇಹಿತನ ಧರ್ಮವನ್ನು ಹೀಯಾಳಿಸಿದ್ದ.

ನಾಮದೇವ ನಗುತ್ತಾ ಕೇಳಿದರು, 'ನೀವಿಬ್ಬರು ಬಹುಕಾಲದ ಮಿತ್ರರಲ್ಲವೇ?' ಒಬ್ಬ ಹೇಳಿದ, 'ಹೌದು ಬಾಲ್ಯದಿಂದಲೂ ನಾವಿಬ್ಬರೂ ಕಾಡು ಸುತ್ತಿದ್ದೇವೆ, ಮೇಡು ಅಲೆದಿದ್ದೇವೆ, ಬಾವಿಗೆ ನದಿಗೆ ಹಾರಿ ಈಜಿದ್ದೇವೆ. ಒಮ್ಮೆ ನಾನು ಹರಿವ ನೀರಲ್ಲಿ ಕೊಚ್ಚಿ ಹೋಗುವಾಗ, ಜೀವದ ಹಂಗು ತೊರೆದು ಇವನು ಉಳಿಸಿದ್ದ' ಎಂದ. ಇನ್ನೊಬ್ಬ ಅದಕ್ಕೆ 'ಹೌದು ಆಗೆಲ್ಲಾ ಮನೆಯಿಂದ ಇವನು ನನಗಾಗಿ ತಿಂಡಿ ತರುತ್ತಿದ್ದ. ಬಿಡಿಸಲಾಗದ ಸಂಬಂಧ ನಮ್ಮಿಬ್ಬರ ಮಧ್ಯೆ ಇತ್ತು. ಆದರೆ ಈಗ ನಾವಿಬ್ಬರೂ ಸ್ನೇಹಿತರಾಗಿ ಉಳಿದಿಲ್ಲ' ಎಂದ.

'ಹೌದೇ ನಿಮ್ಮ ಸ್ನೇಹ ಈಗ ವೈರವಾಗಿ ಪರಿವರ್ತಿತವಾಗಿದ್ದು ಯಾಕೆ?' ಎಂದು ಮರುಪ್ರಶ್ನೆ ಮಾಡಿದರು ನಾಮದೇವ.

'ಇಷ್ಟು ದಿನ ಧರ್ಮದ ಬಗ್ಗೆ ಮಾತಾಡಿರಲಿಲ್ಲ. ಹಾಗಾಗಿ ಸ್ನೇಹ ಉಳಿದಿತ್ತು. ಆದರೆ ಈಗ ಹಾಗಲ್ಲ' ಎಂದ ಒಬ್ಬ. ಅದಕ್ಕೆ ಇನ್ನೊಬ್ಬ 'ಅದು ನಮ್ಮ ಪವಿತ್ರವಾದ ಚಿಹ್ನೆ ಅದನ್ನೇ ಅಣಕಿಸಿದರೆ ನನಗೆ ಸಹಿಸಲು ಹೇಗೆ ಸಾಧ್ಯ? ಅಪಮಾನಗೊಳಿಸಿದ ಇವನು ಇನ್ನು ನನ್ನ ಸ್ನೇಹಿತ ಅಲ್ಲ' ಎಂದ.

ಆಗ ನಾಮದೇವರು, 'ನಾನೊಂದು ಪ್ರಶ್ನೆ ಕೇಳುವೆ. ಕಾಡು ಮೇಡು ಅಲೆದು ಈಜುತ್ತಾ ಇರುವಾಗ ಇವನು ನಿನ್ನ ಸ್ನೇಹಿತನಾಗಿದ್ದ. ಆಗ ನಿನ್ನ ಜೀವವನ್ನೂ ಉಳಿಸಿದ್ದ. ಧರ್ಮದ ವಿಷಯ ಬಂದ ತಕ್ಷಣ ಶತ್ರುವಾದ. ಇದು ಹೇಗೆ ಸಾಧ್ಯ?' ಇಬ್ಬರೂ ತಬ್ಬಿಬ್ಬಾದರು. 'ಯಾರಾದರೂ ನಮ್ಮ ಸ್ನೇಹವನ್ನು ಸಂಬಂಧವನ್ನು ಒಡೆಯುತ್ತಾರೆ ಎಂದರೆ ಅದು ಕೆಟ್ಟದಲ್ಲವೇ?' ಎಂದು ಕೇಳಿದರು ನಾಮದೇವ. ಇಬ್ಬರಿಗೂ ಉತ್ತರ ಹೇಳುವುದು ಕಷ್ಟವಾಯಿತು.

ಆಗ ನಾಮದೇವರು ನಿಟ್ಟುಸಿರಿಟ್ಟು, 'ಹಾಗಾದರೆ ನಿಮ್ಮ ಧರ್ಮ ಕೆಟ್ಟದ್ದೇ ಇರಬೇಕು' ಎಂದರು. ಇಬ್ಬರೂ ಕೆರಳಿ 'ನೀವು ಆಧ್ಯಾತ್ಮಿಗಳು ಸಂತರು ಎಂದು ಬಂದರೆ ಇದನ್ನಾ ನೀವು ಹೇಳುವುದು?' ಎಂದರು. ಆಗ ನಾಮದೇವರು, 'ನನ್ನ ಧರ್ಮ ಯಾವತ್ತೂ ನನಗೆ ಕೆಟ್ಟದ್ದನ್ನು ಮಾಡು ಇನ್ನೊಬ್ಬರನ್ನು ಹೀಯಾಳಿಸು ಎಂದಿಲ್ಲ. ನನ್ನ ಧರ್ಮ ಒಳ್ಳೆಯದೆ. ನಿಮ್ಮಿಬ್ಬರ ನಡುವೆ ಕೆಟ್ಟದ್ದು ನಡೆಯಲು ಕಾರಣವಾದರೆ ನಿಮ್ಮ ಮಧ್ಯೆ ಇರುವ ಧರ್ಮ ಕೆಟ್ಟದ್ದು' ಎಂದರು. ಆಗ ನಾಮದೇವರು ಏನು ಹೇಳಲಿಕ್ಕೆ ಹೊರಟರು ಎನ್ನುವುದು ಇಬ್ಬರಿಗೂ ಅರ್ಥವಾಯಿತು. ಮುಂದುವರಿದ ಅವರು 'ಭಕ್ತಿ, ಧರ್ಮ, ಆಧ್ಯಾತ್ಮ ಎಲ್ಲವೂ ಹೊಲಿಯುವ ದಾರದಂತಾಗಬೇಕೇ ಹೊರತು ಕತ್ತರಿಸುವ ಕತ್ತರಿಯಾಗಬಾರದು' ಎಂದರು. ಮತ್ತೆ ಎಂದಿಗೂ ಆ ಇಬ್ಬರು ಸ್ನೇಹಿತರು ಜಗಳವಾಡಲಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ನವೆಂಬರ್ 7, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದಶಮಿ ಅಹೋರಾತ್ರ ನಕ್ಷತ್ರ: ಮಘಾ ಗಂ. 16-24 ಯೋಗ: ಬ್ರಹ್ಮ ಗಂ 15-20 ಕರಣ: ವಣಿಜ ಗಂ. 19-09, ತುಲಾ ಮಾಸದ 21 ನೇ ದಿನ, ಮಳೆನಕ್ಷತ್ರ: ವಿಶಾಖ 1. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-30 ಸೂರ್ಯಾಸ್ತ : 05-58 ಮುಸ್ಲಿಂ ದಿನಾಂಕ : 22 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 8, 6

ಮೇಷ: ಸುಗಂಧ ವಸ್ತುಗಳ ತಯಾರಕರಿಗೆ ಮತ್ತು ಮಾರಾಟಗಾರರಿಗೆ ಹೆಚ್ಚಿನ ಆದಾಯ ದೊರಕುವುದು. ಸಹಕಾರ ಮನೋಭಾವದಿಂದ ಸಂಬಂಧಗಳು ಮತ್ತಷ್ಟು ಸುಧಾರಿಸಲಿವೆ. ದೀರ್ಘಕಾಲದ ಯೋಜನೆಗಳು ಚಾಲನೆಗೊಳ್ಳಲಿವೆ.

ವೃಷಭ: ಸಹಚರರಲ್ಲಿನ ವಾದ ವಿವಾದಗಳಲ್ಲಿ ಸೋಲನ್ನು ಎದುರು ನೋಡಿದರೂ ಅದರಿಂದಾಗಿ ತಪ್ಪು ತಿಳಿವಳಿಕೆಗಳು ದೂರಾಗಲಿವೆ. ಆಹಾರದಲ್ಲಿನ ಬದಲಾವಣೆಯಿಂದ ಉಷ್ಣವ್ಯಾಧಿ ನಿವಾರಣೆಯಾಗುವುದು.

ಮಿಥುನ: ಮಾನಸಿಕ ಅಸ್ಥಿರತೆಯಿಂದಾಗಿ ಕೆಲಸ ಕಾರ್ಯಗಳಲ್ಲಿದ್ದ ಉದಾಸೀನತೆ ದೂರಾಗಲಿದೆ. ಸಿಬ್ಬಂದಿಯೊಂದಿಗಿನ ಮುಕ್ತ ಮಾತುಕತೆ ಕಾರ್ಯಾನುಕೂಲ ಉಂಟುಮಾಡಲಿದೆ. ಮಾತಿನ ಕೌಶಲದಿಂದ ಕಾರ್ಯ ಸಾಧಿಸಿಕೊಳ್ಳುವಿರಿ.

ಕರ್ಕಾಟಕ: ಅವಕಾಶಗಳು ಅರಸಿ ಬಂದರೂ ಸರಿಯಾದದನ್ನು ಆಯ್ಕೆ ಮಾಡುವುದರಲ್ಲಿ ದುಡುಕುವ ಲಕ್ಷಣಗಳಿರುವುದು. ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಬಿಗಿ ಹಿಡಿತದಲ್ಲಿರುವುದು ಒಳ್ಳೆಯದು.

ಸಿಂಹ: ಅಂಕಿ ಅಂಶಗಳು ಅಥವಾ ದಾಖಲೆಗಳಿಲ್ಲದೆ ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ವ್ಯವಹರಿಸುವ ವ್ಯಕ್ತಿಯ ಪೂರ್ವಾಪರ ವಿಚಾರ ತಿಳಿದಿರಲಿ.

ಕನ್ಯಾ: ಮನೆ ಬದಲಾವಣೆಯ ಯೋಜನೆಯಲ್ಲಿರುವವರಿಗೆ ಉತ್ತಮವಾದದ್ದೆ ಪ್ರಾಪ್ತಿಯಾಗಲಿದೆ. ಡಿಸೈನಿಂಗ್ ಕ್ಷೇತ್ರದವರಿಗೆ ಉತ್ತಮ ಅವಕಾಶಗಳು ಲಭಿಸಲಿದೆ. ಮನದಲ್ಲಿ ಭಯದ ಭೀತಿ ತೋರಿಬಂದೀತು.

ತುಲಾ: ಗೃಹೋಪಕರಣ ಖರೀದಿ ಅಥವಾ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ಆಗಲಿದೆ. ಆಸಕ್ತಿ ತರುವ ಕೆಲವು ವಿಚಾರಗಳು ತಿಳಿದು ಬರಲಿದೆ. ನಿರಂತರ ಕೆಲಸಗಳಿಂದಾಗಿ ವಿಶ್ರಾಂತಿ ಬೇಕೆನಿಸಲಿದೆ.

ವೃಶ್ಚಿಕ: ಹಿರಿಯರ ಜೀವನದ ನಡೆ-ನುಡಿಗಳು ಕಿರಿಯರ ಜೀವನಕ್ಕೆ ಮಾರ್ಗದರ್ಶನ ನೀಡಲು ಸಹಕಾರಿಯಾಗುವುದು. ಬೆಂಬಲಕ್ಕೆ ನಿಲ್ಲುವ ಗೆಳೆಯನೊಬ್ಬ ಸಿಗಲಿದ್ದಾನೆ. ದೈನಂದಿನ ಕೆಲಸದಲ್ಲಿ ಬದಲಾವಣೆ ಇರುವುದಿಲ್ಲ.

ಧನು: ಸಹೋದರರಲ್ಲಿ ಉಂಟಾದ ಭಿನ್ನಾಭಿಪ್ರಾಯವು ಸೇಡಿಗೆ ತಿರುಗದಂತೆ ಕಾಪಾಡಿಕೊಳ್ಳಿರಿ. ಧೈರ್ಯದಿಂದ ಕಾರ್ಯ ಪ್ರವೃತ್ತರಾದಲ್ಲಿ ಇಷ್ಟಾರ್ಥ ಸಿದ್ಧಿಸಲಿದೆ. ನೋವಿನ ಸಂಗತಿಗಳೆಲ್ಲಾ ಕಳೆದು ನಲಿವಿನ ದಿನ ಇದಾಗಲಿದೆ.

ಮಕರ: ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ಸಣ್ಣಪುಟ್ಟ ಬದಲಾವಣೆ ಮಾಡಿಕೊಳ್ಳಬೇಕಾಗುವುದು. ಕೆಲಸ ಕಾರ್ಯಗಳು ವಿಳಂಬ ನೀತಿಯನ್ನು ತೊರೆದು ಸರಾಗವಾಗಿ ನಡೆದು ಆರ್ಥಿಕವಾಗಿ ಮುನ್ನಡೆಯಲಿದೆ.

ಕುಂಭ: ರಾಜಕೀಯ ವರ್ಗದವರಿಗೆ ಜನಪ್ರಿಯತೆ ಹೆಚ್ಚುವುದರಿಂದ ಶತ್ರು ಪೀಡೆಯಂತಹ ಸಮಸ್ಯೆ ಕಂಡುಬರಲಿದೆ. ಆತ್ಮಸಾಕ್ಷಿಗೆ ಅನುಗುಣವಾಗಿ ನಡೆಯಬೇಕಾದ ಸಂದರ್ಭ ಎದುರಾಗುವುದು. ಒತ್ತಡಗಳಿಂದ ಹೊರಬರುವಿರಿ.

ಮೀನ: ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನಭೀತಿ ಇರುತ್ತದೆ. ಕಾರ್ಯ ಸಾಧಕರ ಮನೋಕಾಮನೆಗಳು ಪೂರ್ಣಗೊಳ್ಳುವಂಥ ದಿನ. ಎಲ್ಲವನ್ನೂ ಮಾಡಬಲ್ಲೆನೆಂಬ ಹುಮ್ಮಸ್ಸು ಸಾಧನೆಗೆ ಮುಳ್ಳಾಗಬಹುದು.

ಪದಬಂಧ 5493 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ಪಾದಕನಿಗೆ ಬೇಕಾದ ನೀರು (3)
3.ಇನ್ನೂ ಕರು ಹಾಕದ ಹಸು (3)
4.ಮಣ್ಣಿನ ಪಾತ್ರೆಯಿದು (3)
6.ಆತ ವಿಚಾರಿಸಿದ್ದು ರಾಮನ ಹಿರಿ ಮಗನ ಕ್ಷೇಮ! (3)
7.ಕವಾಡಿಗನದ್ದೂ ಇದೇ ಸಂಪ್ರದಾಯವಂತೆ! (3)
9.ಪಾಪ! ಇನ್ನೂ ಕರುವಲ್ಲವೇ ಅದಕ್ಕೇ ಈ ದಯೆ! (3)
11.ನಗರದವರೆಲ್ಲರೂ ಜರೂರಾಗಿ ಒಪ್ಪಿಸಿದ ಕಾಣಿಕೆ (3)
13.ಹೇಳಿದ ದಿನದೊಳಗೇ ಬಂದನಲ್ಲ ಈ ಮಂತ್ರಿ! (3)
15.ಪ್ರವಾಸದಲ್ಲಿ ಸಿಕ್ಕವರು ತತ್ವಜ್ಞಾನಿಯಂತೆ! (3)
17.ವಂಗ ದೇಶದಿಂದ ತಂದಿರುವ ಸಾಂಬಾರ ದ್ರವ್ಯ (3)
18.ವರ್ತಮಾನವನ್ನು ತಿಳಿಸುವ ವ್ಯಾಪಾರಿ (3)
19.ತಿರುಗಿ ನಿಂತಿರುವ ಉಪಪತ್ನಿ (3)

ಮೇಲಿಂದ ಕೆಳಕ್ಕೆ
1.ಆ ಕೂಸು ಕುಳಿತಿದ್ದು ಈ ಮರಳ ಮೇಲೆಯೇ! (3)
2.ಕಮಂಡಲ ಹತ್ತಿರವಿರುವ ತಾವರೆ (3)
3.ದರ್ಪಣ ಇಲ್ಲಿದೆ (3)
5.ಹೆಸರು ಹೇಳದೇ ಸಿಡಿಸಿ ಬಿಟ್ಟನಲ್ಲಾ ಈ ರಾಡಿಯನ್ನು! (3)
7.ವಾಗ್ಯುದ್ಧವೆಲ್ಲಾ ಮುಗಿದ ಮೇಲೆ ನೀಡಿದ ವಚನ (3)
8.ಕೆನ್ನೆ ಮೇಲೇ ಕಾಣುತ್ತಿದೆಯಲ್ಲಈ ನೆತ್ತರು! (3)
9.ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
10.ವನದ ಬಗ್ಗೆ ಬರೆದ ಪದ್ಯ (3)
12.ಜಲ ತರುವುದೇ ಇಷ್ಟು ತೊಡಕು (3)
14.ಈತ ವಾದ್ಯ ನುಡಿಸುವವ! (3)
15.ಆತ ಪ್ರತಿಯೊಳಗೆ ತೋರಿಸಿದ ಏಳಿಗೆ (3)
16.ದವಸವನ್ನೆಲ್ಲಾ ತಂದಿರುವ ದಿನ! (3)



5492ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧೋಮುಖ
3.ಕಷಾಯ 5.ಗರ್ಭಿಣಿ
7.ಒಸದು 8.ಸಮೂಹಗಾನ
11.ಗಲಾಟೆ 12.ಬತೇರಿ
15.ಪರೋಕ್ಷ 16.ಆಜುಬಾಜು

ಮೇಲಿಂದ ಕೆಳಕ್ಕೆ:
1.ಅಭ್ಯಂಗ 2.ಖರ್ಚು
3.ಕರದು 4.ಯಮಶಿಕ್ಷೆ
6.ಣಿರಸ 7.ಒಣಹರಟೆ
9.ನವಾಬ 10.ಅನುಲೇಪ
11.ಗವಾಕ್ಷ 13.ರಿವಾಜು
14.ಮೆಳ

ಸುಡೊಕು 5879

3	5		7		2		8	
						3		4
	7		3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5878 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಎರಡು ಕ್ಷೇತ್ರಗಳಿಂದ ಕಣಕ್ಕೆ ಇಳಿದಿರುವ ತೆಲಂಗಾಣದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್

ಕೆಸಿಆರ್‌ಗೆ ಈ ಬಾರಿ ಕಠಿಣ ಸವಾಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕೆಸಿಆರ್‌ಗೆ ಒಂದು ಕಾಲದ ಬಂಟನಿಂದ ಸವಾಲು
- ಅಣೆಕಟ್ಟೆಗೆ ಜಮೀನು ಕಳೆದುಕೊಂಡವರ ಆಕ್ರೋಶ
- ಮುದಿರಾಜ್ ಸಮುದಾಯದ ಮತಗಳ ಧ್ರುವೀಕರಣ

ಚುನಾವಣಾ ಪ್ರಚಾರದ ವೇಳೆ ಅಭಿಮಾನಿಗಳತ್ತ ಕೈಬೀಸಿದ ತೆಲಂಗಾಣ ಸಿ.ಎಂ ಕೆಸಿಆರ್ ಪಿಟಿಐ ಚಿತ್ರ

ಹೈದರಾಬಾದ್: ತೆಲಂಗಾಣದ ಸಿದ್ದಿಪೇಟೆ ಜಿಲ್ಲೆಯ ಗಜ್ವೇಲ್ ವಿಧಾನಸಭಾ ಕ್ಷೇತ್ರದಲ್ಲಿ ಜನಸಾಮಾನ್ಯರು ಬಯಸಬಹುದಾದ ಎಲ್ಲವೂ ಇವೆ. ಒಳ್ಳೆಯ ರಸ್ತೆಗಳು, ಆಧುನಿಕ ಶಾಪಿಂಗ್ ಸಂಕೀರ್ಣ, ಫಳಫಳ ಹೊಳೆಯುವ ಕಟ್ಟಡವೊಂದರಲ್ಲಿ ಎಲ್ಲ ಸರ್ಕಾರಿ ಕಚೇರಿಗಳಿಗೆ ನೆಲೆ, ಬಡವರ ಮಕ್ಕಳಿಗೆ ಅಂಗನವಾಡಿಯಿಂದ ಸ್ನಾತಕೋತ್ತರ ಪದವಿವರೆಗಿನ ಶಿಕ್ಷಣವನ್ನು ಒಂದೇ ಕಡೆ ಉಚಿತವಾಗಿ ಒದಗಿಸುವ ಕ್ಯಾಂಪಸ್ ಇಲ್ಲಿದೆ.

ಇವೆಲ್ಲವುಗಳ ಜೊತೆಯಲ್ಲೇ ಇಲ್ಲಿ ಬಿಆರ್‌ಎಸ್ ಪಕ್ಷದ ನಾಯಕ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅವರ ಬಗ್ಗೆ ಅಸಮಾಧಾನವೂ ಇದೆ. 2014ರಲ್ಲಿ ಮುಖ್ಯಮಂತ್ರಿ ಆದ ನಂತರದಲ್ಲಿ ಕೆಸಿಆರ್ ಅವರು ನೂರಾರು ಕೋಟಿ ರೂಪಾಯಿ ಖರ್ಚು ಮಾಡಿ, ಗಜ್ವೇಲ್ ಎಂಬ ಹಳ್ಳಿಯನ್ನು ಚಟುವಟಿಕೆಗಳ ಪಟ್ಟಣವನ್ನಾಗಿ ಪರಿವರ್ತಿಸಿದ್ದಾರೆ. ಕೆಸಿಆರ್ ಅವರು ರಾಜಕೀಯಕ್ಕೆ ಬಂದಾಗಿನಿಂದಲೂ ಸಿದ್ದಿಪೇಟೆಯು ಅವರ ಪಾಲಿಗೆ ಭದ್ರನೆಲೆಯಾಗಿದೆ. 2004ರಿಂದ ಅವರು ಹಲವು ಬಾರಿ ಇಲ್ಲಿನ ಸಂಸದರಾಗಿ ಆಯ್ಕೆಯಾಗಿದ್ದಾರೆ.

ತೆಲಂಗಾಣ ರಾಜ್ಯದ ರಚನೆಯಾದ ನಂತರದಲ್ಲಿ ಅವರು ಗಜ್ವೇಲ್‌ಗೆ ಬಂದು 2014ರ ಚುನಾವಣೆ ಎದುರಿಸಿದರು. 2014 ಹಾಗೂ 2018ರಲ್ಲಿ ಇಲ್ಲಿ ಸುಲಭವಾಗಿ ಗೆಲುವು ಕಂಡ ಕೆಸಿಆರ್, ಈ ಬಾರಿ ಕಠಿಣ ಸವಾಲು ಎದುರಿಸುತ್ತಿದ್ದಾರೆ. ಕೆಸಿಆರ್ ಅವರ ಒಂದುಕಾಲದ ಬಂಟ, ಈಗ ಬಿಜೆಪಿಯಲ್ಲಿರುವ ಈಟೆಲ ರಾಜೇಂದ್ರ ಅವರು ಚುನಾವಣಾ ಕಣದಲ್ಲಿ ಇರುವುದು ಗಜ್ವೇಲ್‌ನಲ್ಲಿ ಚುನಾವಣಾ ಲೆಕ್ಕಾಚಾರಗಳನ್ನು ಬದಲಾಯಿಸಿದೆ.

ಮಲ್ಲಣ್ಣಸಾಗರ ಮತ್ತು ಕೊಂಡಪೋಚಮ್ಮ ಕಾಲುವೆ ಯೋಜನೆಯಿಂದಾಗಿ ನೆಲೆ ಕಳೆದುಕೊಂಡವರಲ್ಲಿನ ಅಸಮಾಧಾನ ಹಾಗೂ ಜಾತಿ ಸಮೀಕರಣವು ಕೆಸಿಆರ್ ಅವರಿಗೆ ಸವಾಲಾಗಬಹುದು.

ಕುತೂಹಲದ ಸಂಗತಿಯೆಂದರೆ, ಕೆಸಿಆರ್ ಅವರು ಈ ಬಾರಿ ಕಾಮಾರೆಡ್ಡಿ ಕ್ಷೇತ್ರದಿಂದಲೂ ಕಣಕ್ಕೆ ಇಳಿದಿರುವುದು ಅವರ ಸಾಮರ್ಥ್ಯದ ಬಗ್ಗೆ ಪ್ರಶ್ನೆಗಳು ಮೂಡುವಂತೆ ಮಾಡಿದೆ.

ಮಲ್ಲಣ್ಣಸಾಗರ ಅಣೆಕಟ್ಟನ್ನು ಅಂದಾಜು ₹9,800 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದು ಸರಿಸುಮಾರು 12 ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಿದೆ. ಈ ಯೋಜನೆಗಾಗಿ ಕನಿಷ್ಠ 20 ಹಳ್ಳಿಗಳ ಜನರನ್ನು ಸ್ಥಳಾಂತರಿಸಲಾಗಿದೆ. ನೆಲೆ ಕಳೆದುಕೊಂಡವರಿಗೆ ಪ್ರತಿ ಎಕರೆಗೆ ₹7 ಲಕ್ಷ ಪರಿಹಾರ, ಗಜ್ವೇಲ್ ಸಮೀಪದಲ್ಲಿ 2,250 ಚದರ ಅಡಿ ನಿವೇಶನ ನೀಡಲಾಗಿದೆಯಾದರೂ, ಅವರು ತಮ್ಮ ಜೀವನೋಪಾಯ ಕಳೆದುಕೊಂಡರು. ಅವರಲ್ಲಿ ಈಗ ಕೆಸಿಆರ್ ವಿರುದ್ಧ ಸಿಟ್ಟು ಮನೆಮಾಡಿದೆ.

‘ಕೈಯಲ್ಲಿ ಕೆಲಸ ಇಲ್ಲದೆ ಈ ಹಣ ಇಟ್ಟುಕೊಂಡು ನಾವು ಏನು ಮಾಡುವುದು? ನಮ್ಮ ನಿತ್ಯದ ಖರ್ಚುಗಳಿಗೆ ಇದನ್ನು ಬಳಸುತ್ತಿದ್ದರೆ ಅಷ್ಟೂ ಹಣ ಖಾಲಿಯಾಗುತ್ತದೆ. ಕೆಸಿಆರ್ ಅವರು ನಮಗೆ ಬದಲಿ ಜೀವನೋಪಾಯದ ಭರವಸೆ ನೀಡಿದ್ದರು. ಆದರೆ ನಮಗೆ ಒಂದಿಷ್ಟು ಹಣ ಹಾಗೂ ನಿವೇಶನ ನೀಡಿ ಕೈತೊಳೆದುಕೊಂಡರು. ಈಗ ನಾವು ಇಲ್ಲಿ ಬಂದು ಕುಳಿತು ಹರಟೆ ಹೊಡೆಯುತ್ತೇವೆ ಅಥವಾ ರಸ್ತೆಯಲ್ಲಿ ಸಾಗುವ ವಾಹನಗಳನ್ನು ನೋಡುತ್ತಿರುತ್ತೇವೆ. ಎಷ್ಟು ದಿನ ಇದನ್ನೇ ಮಾಡಲು ಸಾಧ್ಯ’ ಎಂದು ಜನಾರ್ದನ ರೆಡ್ಡಿ ಎನ್ನುವವರು ಸಿಟ್ಟಿನಿಂದ ಕೇಳಿದರು.

ಕೊಂಡಪೋಚಮ್ಮ ಜಲಾಶಯಕ್ಕೆ ಜಮೀನು ಕಳೆದುಕೊಂಡ ಎರಡು ಸಾವಿರ ಕುಟುಂಬಗಳ ಕಥೆಯೂ ಇದೇ ರೀತಿಯದು. ‘ನಾವು ಕೆಸಿಆರ್ ಅವರನ್ನು ಮತ್ತೆ ಆಯ್ಕೆ ಮಾಡಿದರೆ, ಅವರು ಮೂಳೆಯನ್ನೂ ಬಿಡದೆ ನಮ್ಮನ್ನು ತಿಂದುಹಾಕುತ್ತಾರೆ’ ಎಂದು ಗೊಲ್ಲಪಲ್ಲಿ ಭಿಕ್ಷಾಪತಿ ಎನ್ನುವವರು ಕೋಪದಿಂದ ಹೇಳಿದರು. ಭಿಕ್ಷಾಪತಿ ಅವರು ಈ ಯೋಜನೆಗಾಗಿ ಮೂರು ಎಕರೆ ಜಮೀನು ಕಳೆದುಕೊಂಡಿದ್ದಾರೆ.

ಜಮೀನು ಕಳೆದುಕೊಂಡವರಿಗೆ ಈಗ ಅತ್ಯುತ್ತಮ ರಸ್ತೆ ಸಂಪರ್ಕ ಇರುವ ಒಳ್ಳೆಯ ಕಾಲೊನಿಯೊಂದು ಸಿಕ್ಕಿದೆ. ಆದರೆ ಅವರ ಕೈಗೆ ಕೆಲಸ ಇಲ್ಲ. ‘ಜಮೀನು ಸ್ವಾಧೀನದ ಸಂದರ್ಭದಲ್ಲಿ ಪರಿಹಾರ ಮೊತ್ತ ಮಾತ್ರವೇ ಅಲ್ಲದೆ, ಕಾಲೊನಿಯಲ್ಲಿ ಪಶುಸಂಗೋಪನೆಗೆ ಒಂದು ಘಟಕ, ಮನೆಗೆ ಎರಡು ಎಮ್ಮೆಗಳನ್ನು ನೀಡುವ ಭರವಸೆಯನ್ನು ಸರ್ಕಾರ ನೀಡಿತ್ತು. ಆದರೆ ಎಮ್ಮೆಗಳೂ ಸಿಗಲಿಲ್ಲ, ಪಶುಸಂಗೋಪನೆಗೆ ಘಟಕವೂ ಇಲ್ಲ’ ಎಂದು ಮನ್ನೆ ದೇವದಾಸ್ ಎನ್ನುವವರು ಹೇಳಿದರು.

ರಾಜೇಂದ್ರ ಅವರು ಈ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಗಜ್ವೇಲ್‌ನಲ್ಲಿ ಕಣಕ್ಕೆ ಇಳಿದಿದ್ದಾರೆ. ಕೆಸಿಆರ್ ವಿರುದ್ಧ ರಾಜಕೀಯ ಹಗೆ ತೀರಿಸಿಕೊಳ್ಳುವ ಬಯಕೆ ರಾಜೇಂದ್ರ ಅವರಲ್ಲಿ ಇದ್ದಿರಬಹುದು. ಬಿಜೆಪಿಯ ಇತರ ಪ್ರಮುಖರು ಹಾಗೂ ರಾಜೇಂದ್ರ ಅವರು ಹಿಂದುಳಿದ ವರ್ಗದ ಕಾರ್ಡ್‌ಅನ್ನು ಪ್ರಮುಖವಾಗಿ ಬಳಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ, ಗಜ್ವೇಲ್‌ನಲ್ಲಿ ಗಣನೀಯ ಪ್ರಮಾಣದಲ್ಲಿ ಇರುವ ಮುದಿರಾಜ್ ಸಮುದಾಯದ ಮತಗಳು ರಾಜೇಂದ್ರ ಪರವಾಗಿ ಧ್ರುವೀಕರಣ ಕಾಣುತ್ತಿವೆ. ರಾಜೇಂದ್ರ ಇದೇ ಸಮುದಾಯಕ್ಕೆ ಸೇರಿದವರು. ಕೆಸಿಆರ್ ಇನ್ನೊಂದು ಕ್ಷೇತ್ರದಿಂದಲೂ ಕಣಕ್ಕೆ ಇಳಿದಿರುವುದಕ್ಕೆ ಧ್ರುವೀಕರಣ ಕಾರಣ ಎನ್ನಲಾಗುತ್ತಿದೆ. ರಾಜೇಂದ್ರ ಅವರು ಕ್ಷೇತ್ರದಲ್ಲಿ ಯಾವ ಅವಕಾಶವನ್ನೂ ಬಿಟ್ಟುಕೊಡದೆ ಪ್ರಚಾರ ಕಾರ್ಯ ನಡೆಸಿದ್ದಾರೆ.

ಛತ್ತೀಸಗಢ ವಿಧಾನಸಭೆ — ಮೊದಲ ಹಂತ

20	223	40,78,681
ಒಟ್ಟು ಸ್ಥಾನಗಳು	ಅಭ್ಯರ್ಥಿಗಳು	ಮತದಾರರು

5,304 ಮತಗಟ್ಟೆಗಳು

ಅತಿ ಹೆಚ್ಚು ಸ್ಪರ್ಧಿಗಳು
ರಾಜನಂದಗಾಂವ್ ಕ್ಷೇತ್ರ, 29 ಅಭ್ಯರ್ಥಿಗಳು

ಪ್ರಮುಖ ಅಭ್ಯರ್ಥಿಗಳು
ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ಮತ್ತು ಸಂಸದ ದೀಪಕ್ ಬೈಜ್ (ಚಿತ್ರಕೂಟ),
ಸಚಿವರಾದ ಕವಾಸಿ ಲಖ್ಮಾ (ಕೊಂಟಾ), ಮೋಹನ್ ಮರ್ಕಮ್ (ಕೊಂಡಗಾಂವ್),
ಮೊಹಮ್ಮದ್ ಅಕ್ಬರ್ (ಕವರ್ಧಾ), ಛವಿಂದ್ರ ಕರ್ಮ (ದಾಂತೇವಾಡ)
ಮಾಜಿ ಮುಖ್ಯಮಂತ್ರಿ ರಮಣ್ ಸಿಂಗ್ (ರಾಜನಂದಗಾಂವ್)
ಮಾಜಿ ಸಚಿವ ಕೇದಾರ್ ಕಶ್ಯಪ್ (ನಾರಾಯಣಪುರ)
ಲತಾ ಉಸೇಂಡಿ (ಕೊಂಡಗಾಂವ್)
ವಿಕ್ರಮ್ ಉಸೇಂಡಿ (ಅಂತಘರ್)
ಮಹೇಶ್ ಗಾಗ್ಡಾ (ಬೀಜಾಪುರ)

ಚುನಾವಣಾ ಕಣದಲ್ಲಿ

ಅಶೋಕ್ ಗೆಹಲೋತ್

- **ನಾಮಪತ್ರ ಸಲ್ಲಿಕೆ:** ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಜೋಧಪುರ ಜಿಲ್ಲೆಯ ಸರ್ದಾರ್‌ಪುರ ಕ್ಷೇತ್ರದಿಂದ ಸೋಮವಾರ ನಾಮಪತ್ರ ಸಲ್ಲಿಸಿದರು. ಈ ವೇಳೆ ಅವರ ಪತ್ನಿ ಮತ್ತು ಪುತ್ರ ಜೊತೆಯಲ್ಲಿದ್ದರು. 1998ರಿಂದ ಈಚೆಗೆ ನಡೆದ ರಾಜಸ್ಥಾನದ ಎಲ್ಲಾ ವಿಧಾನಸಭಾ ಚುನಾವಣೆಗಳಲ್ಲೂ ಗೆಹಲೋತ್ ಅವರು ಸರ್ದಾರ್‌ಪುರ ವಿಧಾನಸಭೆ ಕ್ಷೇತ್ರದಿಂದಲೇ ಸ್ಪರ್ಧಿಸಿ ಗೆದ್ದಿದ್ದಾರೆ.
- **3 ಹಂತದ ಭದ್ರತೆ:** ಛತ್ತೀಸಗಢದ ನಕ್ಸಲ್ ಪೀಡಿತ ಬಸ್ತರ್ ವಲಯದ 600ಕ್ಕೂ ಹೆಚ್ಚು ಮತಗಟ್ಟೆಗಳಿಗೆ ಮೂರು ಹಂತಗಳ ಭದ್ರತೆಯನ್ನು ಒದಗಿಸಲಾಗಿದೆ. ಸುಮಾರು 60,000 ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಅವರಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ 40,000 ಸಿಬ್ಬಂದಿ ಮತ್ತು ರಾಜ್ಯ ಪೊಲೀಸ್ ಪಡೆಯ 20,000 ಸಿಬ್ಬಂದಿ ಇದ್ದಾರೆ.
- **ಪ್ರಿಯಾಂಕಾ ರ‍್ಯಾಲಿ:** ಮಧ್ಯಪ್ರದೇಶದ ಕುಕ್ಷಿ ಪಟ್ಟಣದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಾರ್ವಜನಿಕ ಸಭೆ ನಡೆಸಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳ ಕುರಿತು ಟೀಕಾಪ್ರಹಾರ ನಡೆಸಿದರು. ಕೇಂದ್ರವು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮುಚ್ಚಿದೆ ಎಂದು ದೂರಿದರು. ಸರ್ಕಾರ ತೆಗೆದುಕೊಂಡ ನೋಟು ರದ್ದತಿ, ಜಿಎಸ್‌ಟಿಯಂಥ ಕ್ರಮಗಳಿಂದ ಎಲ್ಲರೂ ಪರಿತಪಿಸುವಂತಾಗಿದೆ ಎಂದರು.
- **ನಾಗಾಲ್ಯಾಂಡ್ ಉಪಚುನಾವಣೆ:** ನಾಗಾಲ್ಯಾಂಡ್‌ನ ತಾಪಿ ವಿಧಾನಸಭೆಗೆ ಮಂಗಳವಾರ ಉಪಚುನಾವಣೆ ನಡೆಯಲಿದ್ದು, ಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲೂ ಸಿ.ಸಿ.ಟಿ.ವಿ. ಕ್ಯಾಮರಾ ಕಣ್ಗಾವಲು ವ್ಯವಸ್ಥೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು. ಬೆಳಿಗ್ಗೆ ಏಳು ಗಂಟೆಯಿಂದ ಸಂಜೆ 4 ಗಂಟೆವರೆಗೆ 23 ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ. ಕ್ಷೇತ್ರದಲ್ಲಿ ಒಟ್ಟು 15,256 ಮತದಾರರಿದ್ದಾರೆ.

237ನೇ ಬಾರಿಗೆ ನಾಮಪತ್ರ!

ಹೈದರಾಬಾದ್ (ಪಿಟಿಐ): ದೇಶದಲ್ಲಿ ನಡೆದ ವಿವಿಧ ಚುನಾವಣೆಗಳಲ್ಲಿ ಒಟ್ಟು 236 ಬಾರಿ ಸ್ಪರ್ಧಿಸಿ ಸೋತಿದ್ದರೂ ಕುಗ್ಗದ ಕೆ. ಪದ್ಮರಾಜನ್ ಅವರು ತೆಲಂಗಾಣದ ಗಜ್ವೇಲ್ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಅವರು ಚುನಾವಣಾ ಕಣದಲ್ಲಿ ಇರುವುದು ಇದು 237ನೇ ಬಾರಿ.

ತಮಿಳುನಾಡಿನ ಪದ್ಮರಾಜನ್ ಅವರು ‘ಎಲೆಕ್ಷನ್ ಕಿಂಗ್’ (ಚುನಾವಣೆ ಮಹಾರಾಜ) ಎಂದೇ ಪ್ರಸಿದ್ಧರು. ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ, ಪಿ.ವಿ. ನರಸಿಂಹರಾವ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿ ಹಲವು ಪ್ರಮುಖರ ವಿರುದ್ಧ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದಾರೆ. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ವಿರುದ್ಧ ಕಣಕ್ಕಿಳಿದಿದ್ದಾರೆ.

1988ರ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಮೆಟ್ಟೂರು ಕ್ಷೇತ್ರದಿಂದ ಅವರು ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಬಳಿಕ, ತಮಿಳುನಾಡು, ಕರ್ನಾಟಕ, ಉತ್ತರ ಪ್ರದೇಶ ಮತ್ತು ದೆಹಲಿಯ ಹಲವಾರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದಾರೆ.

ನುಡಿ–ಕಿಡಿ

ತೆಲಂಗಾಣದಲ್ಲಿ 10 ವರ್ಷ ಆಡಳಿತ ನಡೆಸಲು ಬಿಆರ್‌ಎಸ್‌ಗೆ ಅವಕಾಶ ಸಿಕ್ಕಿತು. ಆ ಅವಕಾಶವನ್ನು ಭೂಮಿ, ಮರಳು ಮತ್ತು ಮದ್ಯ ಹಗರಣಗಳಲ್ಲಿ ತೊಡಗಲು ಬಳಸಿಕೊಂಡಿತು. ಸಮಾಜದ ಎಲ್ಲಾ ವರ್ಗಗಳನ್ನೂ ಬಿಆರ್‌ಎಸ್ ವಂಚಿಸಿದೆ. ಈ ಬಾರಿ ಜನ ಅವರನ್ನು ಮನೆಗೆ ಕಳಿಸಲಿದ್ದಾರೆ.

ಪವನ್ ಖೇರಾ, ಕಾಂಗ್ರೆಸ್ ನಾಯಕ



ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿರೋಧಿಸುವ ಸಲುವಾಗಿ ವಿರೋಧ ಪಕ್ಷಗಳು ‘ಇಂಡಿಯಾ’ ಮೈತ್ರಿಕೂಟ ಸ್ಥಾಪಿಸಿದವು. ಈಗ ಅದರ ಸದಸ್ಯ ಪಕ್ಷಗಳೇ ಕಚ್ಚಾಡುತ್ತಿವೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಧ್ಯಪ್ರದೇಶವನ್ನು ಪಕ್ಷದ ಎಟಿಎಂ ಆಗಿ ಮಾಡಿಕೊಳ್ಳಲಿದೆ.

ರಾಜನಾಥ ಸಿಂಗ್, ರಕ್ಷಣಾ ಸಚಿವ

ಇ.ಡಿ, ಸಿಬಿಐ ಮೋದಿ ‘ಜವಾನರು’: ಖರ್ಗೆ

ಜೋಧಪುರ (ರಾಜಸ್ಥಾನ) (ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರ ‘ಜವಾನರು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಲೇವಡಿ ಮಾಡಿದ್ದಾರೆ. ಮೋದಿ ಅವರು ಚುನಾವಣಾ ಪ್ರಚಾರಕ್ಕೆ ಬರುವ ಮೊದಲು ಪ್ರತಿಪಕ್ಷಗಳನ್ನು ಗುರಿಯಾಗಿಸಲು ತನಿಖಾ ಸಂಸ್ಥೆಗಳನ್ನು ಕಳುಹಿಸುತ್ತಾರೆ ಎಂದು ಟೀಕಿಸಿದ್ದಾರೆ.

ಜೋಧಪುರದಲ್ಲಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಖರ್ಗೆ ಅವರು, ‘ಮೋದಿ ನೇತೃತ್ವದ ಸರ್ಕಾರವು ಬಡವರಿಗೆ ತೊಂದರೆ ನೀಡುತ್ತಿದೆ ಮತ್ತು ಅದಾನಿ ಅವರಂತಹ ಕೈಗಾರಿಕೋದ್ಯಮಿ ಸ್ನೇಹಿತರನ್ನು ಬೆಂಬಲಿಸುತ್ತಿದೆ’ ಎಂದು ಆರೋಪಿಸಿದರು.

ಉಚಿತ ಆಹಾರ ಧಾನ್ಯ ವಿತರಣೆ ಯೋಜನೆಯನ್ನು ಮುಂದಿನ ಐದು ವರ್ಷಗಳವರೆಗೆ ವಿಸ್ತರಿಸುತ್ತಿರುವುದಾಗಿ ಪ್ರಧಾನಿ ಹೇಳಿರುವುದರ ಬಗ್ಗೆ ಪ್ರಸ್ತಾಪಿಸಿದ ಅವರು, ಚುನಾವಣೆ ಸಮೀಪಿಸುತ್ತಿರುವ ಕಾರಣ ಪ್ರಧಾನಿ ಈಗ ಬಡವರ ಬಗ್ಗೆ ಯೋಚಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ರಾಜ, ಮುಖ್ಯಮಂತ್ರಿ ಅಥವಾ ಪ್ರಧಾನಿ ಸಾಮಾನ್ಯವಾಗಿ ಬಡವರಿಗೆ ಸಹಾಯ ಮಾಡುತ್ತಾರೆ. ಆದರೆ, ಒಬ್ಬ ವ್ಯಕ್ತಿ ಬಡವರ ಮತಗಳನ್ನು ಪಡೆದ ನಂತರ ಶ್ರೀಮಂತರಿಗೆ ಸಹಾಯ ಮಾಡುತ್ತಿದ್ದಾರೆ. ಅವರ (ಮೋದಿ) ಯುಗದಲ್ಲಿ, ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ ಮತ್ತು ಬಡವರು ಬಡವರಾಗುತ್ತಿದ್ದಾರೆ ಎಂದರು.

ಚುನಾವಣೆ ನಡೆಯಲಿರುವ ರಾಜ್ಯಗಳ ಕಾಂಗ್ರೆಸ್ ನಾಯಕರ ವಿರುದ್ಧ ತನಿಖಾ ಸಂಸ್ಥೆಗಳು ಇತ್ತೀಚೆಗೆ ಕೈಗೊಂಡ ಕ್ರಮಗಳನ್ನು ಉಲ್ಲೇಖಿಸಿದ ಖರ್ಗೆ, ‘ಪ್ರಧಾನಿ ಮೋದಿ ಚುನಾವಣಾ ಭಾಷಣ ಮಾಡುವ ಮೊದಲು ಇ.ಡಿ, ಆದಾಯ ತೆರಿಗೆ ಮತ್ತು ಸಿಬಿಐ ಅನ್ನು ಪ್ರಚಾರಕ್ಕಾಗಿ ಕಳುಹಿಸುತ್ತಾರೆ. ಇವರೆಲ್ಲ ನಮ್ಮ ಹಿಂದೆ ಬಿದ್ದಿದ್ದಾರೆ. ನಾವು ಮುಂದೆ ಸಾಗುತ್ತೇವೆ, ಅವರು ಹಿಂದುಳಿಯುತ್ತಾರೆ’ ಎಂದರು.

ಕಾಂಗ್ರೆಸ್‌ನಿಂದ ಲೂಟಿ: ನಡ್ಡಾ ಕಿಡಿ

ಜಶ್ಪುರ (ಪಿಟಿಐ): ಕಾಂಗ್ರೆಸ್ ಪಕ್ಷವು ಭ್ರಷ್ಟಾಚಾರ, ಲೂಟಿ ಮತ್ತು ವಂಶಪಾರಂಪರ್ಯ ರಾಜಕಾರಣದಲ್ಲಿ ತೊಡಗಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೋಮವಾರ ಆರೋಪಿಸಿದ್ದಾರೆ.

ಛತ್ತೀಸಗಢದ ಪಥಲಾಗಾವ್ ಕ್ಷೇತ್ರದಲ್ಲಿ ಮಾತನಾಡಿದ ಅವರು, ‘ರಾಜ್ಯದ ಭೂಪೇಶ್ ಬಘೇಲ್ ನೇತೃತ್ವದ ಸರ್ಕಾರದಲ್ಲಿ ಖಾತರಿ ಇರುವುದು ಲೂಟಿ ಮತ್ತು ವಂಚನೆಗೆ’ ಎಂದು ಲೇವಡಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳ ಬಗ್ಗೆ ವಿವರಿಸಿದ ನಡ್ಡಾ, ‘ಬಿಜೆಪಿ ಎಂದರೆ ಅಭಿವೃದ್ಧಿ ಮತ್ತು ಬೆಳವಣಿಗೆ. 2027-28ರ ವೇಳೆಗೆ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ. ಬಿಜೆಪಿ ಎಂದರೆ ಅಭಿವೃದ್ಧಿ, ಬೆಳವಣಿಗೆ, ಜನರ ಸರ್ಕಾರ, ಜನರ ಕಲ್ಯಾಣ’ ಎಂದರು. ‘ಹೆಲಿಕಾಪ್ಟರ್ ಹಗರಣ, ಕಲ್ಲಿದ್ದಲು ಹಗರಣ, ಕಾಮನ್‌ವೆಲ್ತ್ ಹಗರಣ, ಉದ್ಯೋಗ ಖಾತ್ರಿ ಹಗರಣ... ಇವೆಲ್ಲವುಗಳ ಬಗ್ಗೆ ನೀವು ಕೇಳಿರಬೇಕಲ್ಲವೇ’ ಎಂದರು.

ಜಾತಿ ಗಣತಿ: ಶಾ ಹೇಳಿಕೆಗೆ ಜೆಡಿಯು ತಿರುಗೇಟು

ಪಟ್ನಾ (ಪಿಟಿಐ): ಬಿಹಾರ ಸರ್ಕಾರ ಬಿಡುಗಡೆ ಮಾಡಿರುವ ಜಾತಿ ಗಣತಿ ವರದಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಹೇಳಿಕೆಯಲ್ಲಿ ತರ್ಕವಿಲ್ಲ ಮತ್ತು ಆ ಹೇಳಿಕೆಯು ಅವರ ಹುದ್ದೆಗೆ ತಕ್ಕುದಾದುದಲ್ಲ ಎಂದು ಜೆಡಿಯು ತಿರುಗೇಟು ನೀಡಿದೆ.

ವರದಿಯಲ್ಲಿ ಮುಸ್ಲಿಮರು ಮತ್ತು ಯಾದವರ ಜನಸಂಖ್ಯೆಯನ್ನು ಬೇಕೆಂದೇ ಹೆಚ್ಚು ತೋರಿಸಲಾಗಿದೆ. ಇದರಿಂದ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಅನ್ಯಾಯವಾಗಿದೆ ಎಂದು ಅಮಿತ್ ಶಾ ಭಾನುವಾರ ಹೇಳಿದ್ದರು.

‘ಯಾದವರು ಒಬಿಸಿ ವರ್ಗಕ್ಕೇ ಸೇರಿದವರು ಎಂಬುದು ಎಲ್ಲರಿಗೂ ತಿಳಿಸಿದೆ. ಒಬಿಸಿ ವರ್ಗಗಳಿಗೆ ಅನ್ಯಾಯ ಮಾಡಲು ಯಾದವರ ಜನಸಂಖ್ಯೆಯನ್ನು ಹೆಚ್ಚು ತೋರಿಸಲಾಗಿದೆ ಎಂಬ ವಾದದಲ್ಲಿ ಹುರುಳಿಲ್ಲ’ ಎಂದು ಬಿಹಾರದ ಸಂಸದೀಯ ವ್ಯವಹಾರಗಳ ಸಚಿವ ವಿಜಯ್ ಕುಮಾರ್ ಚೌಧರಿ ಹೇಳಿದ್ದಾರೆ.

‘ಯಾವ ಆಧಾರದಲ್ಲಿ ಈ ಆರೋಪ ಮಾಡಲಾಗಿದೆ ಎಂಬುದನ್ನು ಶಾ ಅವರು ಬಹಿರಂಗಪಡಿಸಬೇಕು. ಸರ್ಕಾರ ಬಿಡುಗಡೆ ಮಾಡಿರುವ ಜಾತಿ ಗಣತಿ ದತ್ತಾಂಶವು ನಿಖರವಾಗಿಲ್ಲ ಎನ್ನುವುದಾದರೆ, ನಿಖರವಾದ ದತ್ತಾಂಶವನ್ನು ಅವರೇ ಬಿಡುಗಡೆ ಮಾಡಲಿ’ ಎಂದಿದ್ದಾರೆ.

ರಾಜ್ಯಪಾಲರಿಗೆ ಎಚ್ಚರಿಕೆ

ಒಂದನೇ ಪುಟದಿಂದ...

ತೆಲಂಗಾಣದಲ್ಲಿ ನಡೆದ ಬೆಳವಣಿಗೆಯೊಂದರ ಬಗ್ಗೆ ಸಿಂಘ್ವಿ ಉಲ್ಲೇಖಿಸಿದಾಗ, ‘ಇದಕ್ಕೆಲ್ಲ ಸುಪ್ರೀಂ ಕೋರ್ಟ್‌ವರೆಗೆ ಏಕೆ ಬರಬೇಕು? ಇದು ನಿಲ್ಲಬೇಕು’ ಎಂದು ಪೀಠ ಉತ್ತರಿಸಿತು. ತೆಲಂಗಾಣ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರದಲ್ಲಿ, ಏಪ್ರಿಲ್‌ನಲ್ಲಿ ಮಸೂದೆಗಳಿಗೆ ಅಂಕಿತ ಹಾಕಲಾಗುವುದು ಎಂದು ರಾಜ್ಯಪಾಲರು ಹೇಳಿದ್ದಾರೆ ಎಂಬ ಮಾಹಿತಿಯನ್ನು ಸಿಂಘ್ವಿ ಪೀಠಕ್ಕೆ ನೀಡಿದರು. ಹಿರಿಯ ವಕೀಲ ಕೆ.ಕೆ. ವೇಣುಗೋಪಾಲ್ ಅವರು ಕೇರಳ ಸರ್ಕಾರಕ್ಕೆ ಸಂಬಂಧಿಸಿದ ಅರ್ಜಿಯೊಂದರ ಬಗ್ಗೆ ಗಮನ ಸೆಳೆದರು. ಎಲ್‌ಡಿಎಫ್ ಸರ್ಕಾರವು ಮಸೂದೆಗಳು ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಅಂಕಿತಕ್ಕೆ ಬಾಕಿ ಇರುವ ಬಗ್ಗೆ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರದಲ್ಲಿ, ಈ ಬಗ್ಗೆ ಕೋರ್ಟ್‌ನಲ್ಲಿಯೇ ಉತ್ತರ ನೀಡುವುದಾಗಿ ರಾಜ್ಯಪಾಲರು ಹೇಳಿದ್ದರು ಎಂದು ತಿಳಿಸಿದರು.

ವಿಧಾನಸಭೆಯು ಅನುಮೋದನೆ ನೀಡಿದ ಮಸೂದೆಗಳ ವಿಚಾರವಾಗಿ ರಾಜ್ಯಪಾಲರು ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ ಎಂದು ತಮಿಳುನಾಡು ಸರ್ಕಾರ ಕೂಡ ಅರ್ಜಿಯೊಂದನ್ನು ಸಲ್ಲಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವೈಯಕ್ತಿಕ

Change of Name

ಹೆಸರು ಬದಲಾವಣೆ
ರುಕ್ಮಿಣಿ ಎಂಬ ನಾನು, ಕೋಳೂರು ಗ್ರಾಮ, ಅಂತರಹಳ್ಳಿ ಅಂಚೆ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಳಾಸದಲ್ಲಿನ ವಾಸಿಯಾಗಿದ್ದು, ಇದೀಗ ನನ್ನ ಹೆಸರನ್ನು ರುಕ್ಮಿಣಿ ಕೆ.ಎಸ್. ಎಂದು ಬದಲಾಯಿಸಿಕೊಂಡಿರುತ್ತೇನೆ ಮತ್ತು ದೊಡ್ಡಬಳ್ಳಾಪುರ ನೋಟರಿಗಳಾದ ಎ.ಆರ್. ಸಂಪತ್ ಕುಮಾರ್‌ರವರ ಎದುರು 03/11/2023 ರಂದು ಪ್ರಮಾಣಿಕರಿಸಿದ್ದೇನೆ. ಇನ್ನುಮುಂದೆ ನನ್ನ ಹೆಸರನ್ನು ರುಕ್ಮಿಣಿ ಕೆ.ಎಸ್. ಎಂಬುದಾಗಿ ಮಾತ್ರ ಬಳಸುತ್ತೇನೆ.

ಭಾರತೀಯ ರೈಲ್ವೇಸ್ ಭಾರತ್ ಗೌರವ್ ರೈಲು
ಖಾಸಗಿ ರೈಲು ಸರ್ವಿಸ್
ಗುಜರಾತ್ ಪ್ರವಾಸ
ಥಾಕೂರ್ ದ್ವಾರಕಾ - ಬೆಟ್ ದ್ವಾರಕ
ಸೋಮನಾಥ - ಉದೈಪುರ್ - ನಾಥದ್ವಾರ
ಕಂಕ್ರೋಲಿ ದ್ವಾರಕಾ - ನಿಷ್ಕಳಂಕ ಮಹಾದೇವ್
ಸರ್ದಾರ್ ವಲ್ಲಭಾಯಿ ಪಟೇಲ್
ಏಕತೆ ಪ್ರತಿಮೆ
10DEC|19050|12DAYS
ಖಾಸಗಿ ರೈಲು | ದೃಶ್ಯ ಪ್ರೇಕ್ಷಣ | ಟೂರ್ ಮ್ಯಾನೇಜರ್ ರೂಮ್ಸ್ | ಊಟ ವಸತಿ
9015500200 | RAILTOURISM.COM

ಪ್ರವಾಸ

Travel

★23.11.2023 9ದಿನಗಳು★ ಆಂಧ್ರ ಪ್ರವಾಸ,04.12.2023 5ದಿನಗಳು ಶ್ರೀಶೈಲಂ,ಅಹೋಬಲಂ, 12.12.2023 10ದಿನಗಳು ಗುಜರಾತ್,ಉಜ್ಜೈನ್ ಯಾತ್ರಾ, 03.01.2024 11ದಿನಗಳು ರಾಯಲ್ ರಾಜಸ್ಥಾನ, 10.01.2024 4ದಿನಗಳು ಉಜ್ಜೈನ್,ಓಂಕಾರ ಪ್ರವಾಸ, 16.01.2024 12ದಿನಗಳು ಕಾಶಿ-ಯಾತ್ರಾ.ಆರ್.ಗಾಂಧಿ ಟೂರ್ಸ್. 9945445809/ 9902433500

24.11.2023 ದಾಂಡೇಲಿ, ಗೋವಾ 4 ದಿನಗಳ ಪ್ರವಾಸ. 8-12-2023, 3 ದಿನಗಳ ಪ್ರವಾಸ ನವತಿರುಪತಿ, ತಿರುಪೂರಕುಂಡ್ರಂ, ತಿರುಚೆಂಧೂರ್, ಮದುರೈ, ಅಳಗರ್ ಕೊವಿಲ್, ಪಾಲಮುದಿರ್ಸೋಲೇ, ನಾಮಕಲ್ 7829996723

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ ರೂ.15,000/- ರಿಂದ 20,000/- EST, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

Multiple Vacancy

ವೆಜ್ ಹೋಟೆಲ್ಗೆ ಚೆಫ್, ದೋಸೆ ಮಾಸ್ಟರ್, ಕ್ಯಾಷಿಯರ್, ಟೀ ಮಾಸ್ಟರ್, ಕೌಂಟರ್ ಬಾಯ್ಸ್, ಕ್ಲೀನರ್ ಸಿಬ್ಬಂದಿ ಬೇಕಾಗಿದ್ದಾರೆ. +91 7019299055/ 8861453552

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331 | 9901641752
9845114560 | 9900428036
9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಛತ್ತೀಸಗಢ ವಿಧಾನಸಭೆಗೆ ಮಂಗಳವಾರ ನಡೆಯುವ ಮತದಾನದ ಹಿನ್ನೆಲೆಯಲ್ಲಿ, ನಕ್ಸಲ್ ಪೀಡಿತ ಪ್ರದೇಶಗಳಿಗೆ ಚುನಾವಣಾ ಕರ್ತವ್ಯಕ್ಕೆ ತೆರಳುತ್ತಿರುವ ಸಿಬ್ಬಂದಿ. ಪಿಟಿಐ ಚಿತ್ರ

ಛತ್ತೀಸಗಢ–ಮಿಜೋರಾಂನಲ್ಲಿ ಇಂದು ಮತದಾನ: ಬಿಗಿ ಭದ್ರತೆ

ರಾಯಪುರ/ಐಜ್ವಾಲ್(ಪಿಟಿಐ): ಛತ್ತೀಸಗಢ ಮತ್ತು ಮಿಜೋರಾಂ ವಿಧಾನಸಭೆಗೆ ಮಂಗಳವಾರ ಮತದಾನ ನಡೆಯಲಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಛತ್ತೀಸಗಢ ವಿಧಾನಸಭೆಗೆ ಮೊದಲ ಹಂತದಲ್ಲಿ 20 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, 25,249 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮಿಜೋರಾಂ ವಿಧಾನಸಭೆಯ 40 ಸ್ಥಾನಗಳಿಗೆ ಸ್ಪರ್ಧಿಸಿರುವ 174 ಅಭ್ಯರ್ಥಿಗಳ (18 ಮಹಿಳೆಯರು) ಭವಿಷ್ಯವನ್ನು ನಿರ್ಧರಿಸಲು 8.57 ಲಕ್ಷಕ್ಕೂ ಹೆಚ್ಚು ಮತದಾರರು ಸಜ್ಜಾಗಿದ್ದಾರೆ. 1,276 ಮತಗಟ್ಟೆ ಸ್ಥಾಪಿಸಲಾಗಿದೆ. ಆಡಳಿತಾರೂಢ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್), ವಿರೋಧ ಪಕ್ಷ ಝೆಡ್‌ಪಿಎಂ 40 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಬಿಜೆಪಿ ಮತ್ತು ಎಎಪಿ ಕ್ರಮವಾಗಿ 23 ಮತ್ತು 4 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿವೆ. 27 ಪಕ್ಷೇತರರು ಕಣದಲ್ಲಿದ್ದಾರೆ.

ಸನಾತನ ಧರ್ಮ: ಪೊಲೀಸರಿಗೆ ತರಾಟೆ

ಚೆನ್ನೈ (ಪಿಟಿಐ): ವಿಭಜನಕಾರಿ ಪರಿಣಾಮ ಉಂಟುಮಾಡುವ ಹೇಳಿಕೆಗಳನ್ನು ನೀಡುವುದರ ಅಪಾಯವನ್ನು ಅಧಿಕಾರದಲ್ಲಿ ಇರುವ ವ್ಯಕ್ತಿಗಳು ಅರಿತುಕೊಳ್ಳಬೇಕು ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ. ಸೆಪ್ಟೆಂಬರ್‌ನಲ್ಲಿ ನಡೆದ ಸನಾತನ ಧರ್ಮ ವಿರೋಧಿ ಸಭೆಯಲ್ಲಿ ಪಾಲ್ಗೊಂಡಿದ್ದ ಆಡಳಿತಾರೂಢ ಡಿಎಂಕೆ ಸಚಿವರ ವಿರುದ್ಧ ಕ್ರಮ ಕೈಗೊಳ್ಳದೆ ಇದ್ದುದಕ್ಕಾಗಿ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿದೆ.

ಅಧಿಕಾರದಲ್ಲಿ ಇರುವವರು ಮಾದಕವಸ್ತುಗಳ ನಿರ್ಮೂಲನೆಗೆ, ಸಾಮಾಜಿಕ ಅನಿಷ್ಟಗಳನ್ನು ಹೋಗಲಾಡಿಸಲು ಗಮನ ನೀಡುವುದು ಒಳ್ಳೆಯದು ಎಂದು ನ್ಯಾಯಮೂರ್ತಿ ಜಿ. ಜಯಚಂದ್ರನ್ ಹೇಳಿದ್ದಾರೆ.

‘ದ್ರಾವಿಡ ಸಿದ್ಧಾಂತದ ನಿರ್ಮೂಲನೆಗೆ ಮತ್ತು ತಮಿಳರ ನಡುವೆ ಸಮನ್ವಯಕ್ಕೆ ಸಭೆಯೊಂದನ್ನು ಆಯೋಜಿಸಲು ನನಗೆ ಅವಕಾಶ ಕೊಡುವಂತೆ ಪೊಲೀಸರಿಗೆ ಆದೇಶ ನೀಡಬೇಕು’ ಎಂಬ ಮನವಿ ಇರುವ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್ ಈ ಮಾತು ಹೇಳಿದೆ. ಮಗೇಶ್ ಕಾರ್ತಿಕೇಯನ್ ಎನ್ನುವವರು ಈ ಅರ್ಜಿ ಸಲ್ಲಿಸಿದ್ದರು.

‘ಸನಾತನ ಧರ್ಮ ನಿರ್ಮೂಲನ ಸಭೆ’ಯ ನಂತರದಲ್ಲಿ ಈ ಅರ್ಜಿಯನ್ನು ಸಲ್ಲಿಸಲಾಗಿತ್ತು. ಈ ಸಭೆಯಲ್ಲಿ ಡಿಎಂಕೆ ನಾಯಕ, ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ವಿರುದ್ಧ ಹೇಳಿಕೆ ನೀಡಿದ್ದಾರೆ ಎಂದು ವಿವಾದವೊಂದು ಸೃಷ್ಟಿಯಾಗಿತ್ತು. ಸಚಿವ ಪಿ.ಕೆ. ಶೇಖರ್ ಬಾಬು ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದರು ಎಂಬ ವರದಿಗಳಿವೆ.

ಸನಾತನ ಧರ್ಮ ವಿರೋಧಿ ಸಭೆಯಲ್ಲಿ ಪಾಲ್ಗೊಂಡಿದ್ದ ಸಚಿವರ ವಿರುದ್ಧ ಕ್ರಮ ಜರುಗಿಸಲು ಪೊಲೀಸರು ವಿಫಲರಾಗಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿರುವ ನ್ಯಾಯಮೂರ್ತಿಯವರು, ‘ಅಧಿಕಾರದಲ್ಲಿ ಇರುವವರು ಜವಾಬ್ದಾರಿಯಿಂದ ವರ್ತಿಸಬೇಕು. ಸಿದ್ಧಾಂತ, ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಜನರನ್ನು ವಿಭಜಿಸುವ ಅಭಿಪ್ರಾಯ ವ್ಯಕ್ತಪಡಿಸುವುದರಿಂದ ದೂರವಿರಬೇಕು’ ಎಂದು ಹೇಳಿದ್ದಾರೆ.

‘ಅರ್ಜಿದಾರರ ಮನವಿಗೆ ಸ್ಪಂದಿಸಿದರೆ, ಸಾರ್ವಜನಿಕ ನೆಮ್ಮದಿಗೆ ಇನ್ನಷ್ಟು ತೊಂದರೆ ಉಂಟಾಗುತ್ತದೆ’ ಎಂದು ಕೋರ್ಟ್ ಹೇಳಿದೆ. ‘ವಿಭಜನಕಾರಿ ಆಲೋಚನೆಗಳನ್ನು ಪ್ರಚುರಪಡಿಸಲು, ಯಾವುದೇ ಸಿದ್ಧಾಂತವನ್ನು ನಿರ್ಮೂಲಗೊಳಿಸಲು ಅಥವಾ ನಾಶಮಾಡಲು ಈ ದೇಶದಲ್ಲಿ ಯಾವ ವ್ಯಕ್ತಿಗೂ ಹಕ್ಕು ಇಲ್ಲ. ಹಲವು ಸಿದ್ಧಾಂತಗಳ ಸಹಜೀವನ ಈ ದೇಶದ ಹೆಗ್ಗುರುತು’ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

‘ನನ್ನ ಹೇಳಿಕೆಗೆ ಬದ್ಧ’

ಉದಯನಿಧಿ ಸ್ಟಾಲಿನ್

ಚೆನ್ನೈ (ಪಿಟಿಐ): ಸನಾತನ ಧರ್ಮ ಕುರಿತ ತಾವು ನೀಡಿದ್ದ ಹೇಳಿಕೆಯಲ್ಲಿ ಯಾವುದೇ ತಪ್ಪಿಲ್ಲ ಎಂದು ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಪುನರುಚ್ಚರಿಸಿದ್ದಾರೆ.

‘ನನ್ನ ಹೇಳಿಕೆಯಲ್ಲಿ ತಪ್ಪಿಲ್ಲ. ಪ್ರಕರಣವನ್ನು ಕಾನೂನು ಪ್ರಕಾರ ಎದುರಿಸುತ್ತೇವೆ. ನನ್ನ ನಿಲುವಿನಲ್ಲಿ ಬದಲಿಲ್ಲ. ನನ್ನ ಸಿದ್ಧಾಂತ ಕುರಿತು ಮಾತನಾಡಿದ್ದೇನೆ’ ಎಂದು ಹೇಳಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಹೆಣ್ಣುಮಕ್ಕಳ ಶೌಚಾಲಯ ನಿರ್ಮಾಣಕ್ಕೆ ರಾಷ್ಟ್ರೀಯ ಮಾದರಿ ರೂಪಿಸಿ: ಸುಪ್ರೀಂ

ನವದೆಹಲಿ (ಪಿಟಿಐ): ಸರ್ಕಾರಿ ಅನುದಾನಿತ ಮತ್ತು ವಸತಿ ಶಾಲೆಗಳಲ್ಲಿ ಬಾಲಕಿಯರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ನಿರ್ಮಿಸಲು ರಾಷ್ಟ್ರೀಯ ಮಾದರಿ ರೂಪಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ರಾಷ್ಟ್ರ ಮಟ್ಟದಲ್ಲಿ ಶಾಲಾ ವಿದ್ಯಾರ್ಥಿನಿಯರಿಗೆ ‘ಸ್ಯಾನಿಟರಿ ನ್ಯಾಪ್‌ಕಿನ್’ಗಳನ್ನು ವಿತರಿಸಲು ರೂಪಿಸಿರುವ ನೀತಿ ಬಗ್ಗೆಯೂ ಕೇಂದ್ರ ಸರ್ಕಾರದಿಂದ ಮಾಹಿತಿ ಕೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೂ ಒಳಗೊಂಡ ಪೀಠ, ಸ್ಯಾನಿಟರಿ ನ್ಯಾಪ್‌ಕಿನ್‌ಗಳ ವಿತರಣೆಯ ಕಾರ್ಯವಿಧಾನದಲ್ಲಿ ಕೇಂದ್ರ ಏಕರೂಪತೆ ತರಬೇಕು ಎಂದು ಹೇಳಿದೆ.

ಶಾಲಾ ಬಾಲಕಿಯರಿಗೆ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ವಿತರಿಸುವ ಕರಡು ರಾಷ್ಟ್ರೀಯ ನೀತಿ ರೂಪಿಸಲಾಗಿದೆ ಮತ್ತು ಅಭಿಪ್ರಾಯ ಕೋರಿ ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ ಎಂದು ವಿಚಾರಣೆ ವೇಳೆ ಕೇಂದ್ರವು ಪೀಠಕ್ಕೆ ತಿಳಿಸಿದೆ.

ಬಾಲಕಿಯರ ಮುಟ್ಟಿನ ನೈರ್ಮಲ್ಯದ ಬಗ್ಗೆ ಏಕರೂಪದ ರಾಷ್ಟ್ರೀಯ ನೀತಿ ರೂಪಿಸುವ ಬಗ್ಗೆ ಕೇಂದ್ರಕ್ಕೆ ತಮ್ಮ ಪ್ರತಿಕ್ರಿಯೆ ಸಲ್ಲಿಸದ ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಈ ಹಿಂದೆ ಎಚ್ಚರಿಕೆ ನೀಡಿತ್ತು.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಸಮನ್ವಯ ಸಾಧಿಸಲು ಮತ್ತು ರಾಷ್ಟ್ರೀಯ ನೀತಿ ರೂಪಿಸಲು ಬೇಕಿರುವ ಅಂಕಿ–ಅಂಶ ಸಂಗ್ರಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ (ಎಂಒಎಚ್‌ಎಫ್‌ಡಬ್ಲ್ಯು) ಕಾರ್ಯದರ್ಶಿಯನ್ನು ನೋಡಲ್ ಅಧಿಕಾರಿಯಾಗಿ ಸುಪ್ರೀಂ ಕೋರ್ಟ್ ಏಪ್ರಿಲ್ 10ರಂದು ನೇಮಿಸಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,230
ಇಂದಿನ ಅಂತ್ಯ	19,411
▲	181
ದಿನದ ಗರಿಷ್ಠ	19,423

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹74
ಮೈಸೂರು	
100 ಮೊಟ್ಟೆಗೆ	₹578

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹910 (910)
ಸೂರ್ಯಕಾಂತಿ (ರಿಫೈನ್ಡ್)	₹915 (915)
ಪಾಮೋಲಿನ್	₹818 (815)

ವಿನಿಮಯ ದರ

$ ಡಾಲರ್	83.21
£ ಪೌಂಡ್	103.32
€ ಯುರೊ	89.44
¥ ಯೆನ್ (100ಕ್ಕೆ)	56

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹11250
ಎಸಿ	₹6440
ಆರ್‌ಪಿ	₹9800
ಆರ್‌ಸಿ	₹5960

ಮುಂಬೈ ಧಾರಣೆ

ಶೇಂಗಾ

06-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	875 (870)
ಪಾಮ್ ವಾರದ ಡೆಲಿವರಿ	820 (815)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,850 (60,900)
ಬೆಳ್ಳಿ ಕೆ.ಜಿ	72,000 (72,000)

ಆವರಣದಲ್ಲಿ ಶನಿವಾರದ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹148.50
ಆರ್‌ಎಸ್‌ಎಸ್-5	₹143
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ರಿಯಾಯಿತಿ ದರದಲ್ಲಿ ಮಾರಾಟ ● 'ಭಾರತ್ ಆಟಾ' ಬ್ರ್ಯಾಂಡ್ ಬಿಡುಗಡೆ ಮಾಡಿದ ಕೇಂದ್ರ

₹ 27.50ಕ್ಕೆ ಕೆ.ಜಿ ಗೋಧಿ ಹಿಟ್ಟು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕೆ.ಜಿಗೆ ₹27.50ರಂತೆ ರಿಯಾಯಿತಿ ದರದ ಗೋಧಿ ಹಿಟ್ಟನ್ನು ಸೋಮವಾರ ಬಿಡುಗಡೆ ಮಾಡಿದೆ. 'ಭಾರತ್ ಆಟಾ' ಬ್ರ್ಯಾಂಡ್ ಅಡಿಯಲ್ಲಿ ಈ ಹಿಟ್ಟನ್ನು ದೇಶದಾದ್ಯಂತ ಮಾರಾಟ ಮಾಡಲಾಗುವುದು. ಗೋಧಿ ಹಿಟ್ಟಿನ ಬೆಲೆ ಏರಿಕೆ ಬಿಸಿ ಅನುಭವಿಸುತ್ತಿರುವ ಗ್ರಾಹಕರು ಇದರಿಂದ ತುಸು ನಿರಾಳರಾಗಲಿದ್ದಾರೆ ಎಂದು ಸರ್ಕಾರ ಹೇಳಿದೆ.

ನಾಫೆಡ್, ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರದ ಮೂಲಕ 800 ಮೊಬೈಲ್ ವ್ಯಾನ್ ಮತ್ತು 2 ಸಾವಿರಕ್ಕೂ ಅಧಿಕ ಮಳಿಗೆಗಳಲ್ಲಿ ಈ ಗೋಧಿ ಹಿಟ್ಟನ್ನು ಮಾರಾಟ ಮಾಡಲಾಗುವುದು ಎಂದು ತಿಳಿಸಿದೆ. ಸದ್ಯ ಮಾರುಕಟ್ಟೆಯಲ್ಲಿ ಗೋಧಿ ಹಿಟ್ಟಿನ ದರವು ಕೆ.ಜಿಗೆ ₹36-70ರವರೆಗೆ ಇದೆ. ಭಾರತ್ ಆಟಾ ದರವನ್ನು ಅದಕ್ಕಿಂತಲೂ ಕಡಿಮೆಗೆ ನಿಗದಿ ಮಾಡಲಾಗಿದೆ ಎಂದು ಸರ್ಕಾರ ಹೇಳಿದೆ.

ಫೆಬ್ರುವರಿಯಲ್ಲಿ ಪರೀಕ್ಷಾರ್ಥವಾಗಿ 18 ಸಾವಿರ ಟನ್‌ನಷ್ಟು ಗೋಧಿ ಹಿಟ್ಟನ್ನು ಕೆ.ಜಿಗೆ ₹29.50ರಂತೆ ಮಾರಾಟ ಮಾಡಲಾಗಿತ್ತು. ದೆಹಲಿಯ ಇಂಡಿಯಾ ಗೇಟ್ ಬಳಿಯ ಕರ್ತವ್ಯ ಪಥದಲ್ಲಿ 'ಭಾರತ್ ಬ್ರ್ಯಾಂಡ್‌'ನ 100 ಮೊಬೈಲ್ ವ್ಯಾನ್‌ಗಳಿಗೆ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಚಾಲನೆ ನೀಡಿದರು. ಪರೀಕ್ಷಾರ್ಥ ಮಾರಾಟವು ಯಶಸ್ವಿ ಆಗಿದ್ದು, ಇದೀಗ ದೇಶದೆಲ್ಲೆಡೆ ಕೆ.ಜಿಗೆ ₹27.50ರ ದರಕ್ಕೆ ಗೋಧಿ ಹಿಟ್ಟು ಲಭ್ಯ ಎಂದು ಹೇಳಿದ್ದಾರೆ.

ಭಾರತೀಯ ಆಹಾರ ನಿಗಮವು (ಎಫ್‌ಸಿಐ) 2.5 ಲಕ್ಷ ಟನ್ ಗೋಧಿಯನ್ನು ಕೆ.ಜಿಗೆ ₹21.50ರಂತೆ ನಾಫೆಡ್, ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರಕ್ಕೆ ನೀಡಲಿದೆ.

ಹಿಟ್ಟು ತಯಾರಿಸಲು ಯಾವ ಸಂಸ್ಥೆಗೆ ಎಷ್ಟು ಗೋಧಿ ?

- 1 ಲಕ್ಷ ಟನ್ ನಾಫೆಡ್‌ಗೆ
- 1 ಲಕ್ಷ ಟನ್ ಎನ್‌ಸಿಸಿಎಫ್‌ಗೆ
- 50 ಸಾವಿರ ಟನ್ ಕೇಂದ್ರೀಯ ಭಂಡಾರಕ್ಕೆ

ಮಾರಾಟ ಹೇಗೆ?

- ನಾಫೆಡ್, ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರದ ಮೂಲಕ
- 800 ಮೊಬೈಲ್ ವ್ಯಾನ್‌ಗಳ ಬಳಕೆ
- 2 ಸಾವಿರಕ್ಕೂ ಅಧಿಕ ಮಳಿಗೆಗಳಲ್ಲಿ 'ಭಾರತ್ ಆಟಾ'

ಈ ಸಂಸ್ಥೆಗಳು ಗೋಧಿಯನ್ನು ಹಿಟ್ಟಾಗಿ ಪರಿವರ್ತಿಸಿ 'ಭಾರತ್ ಆಟಾ' ಬ್ರ್ಯಾಂಡ್ ಅಡಿಯಲ್ಲಿ ಕೆ.ಜಿಗೆ ₹27.50ರಂತೆ ಮಾರಾಟ ಮಾಡಲಿವೆ ಎಂದು ಗೋಯಲ್ ಮಾಹಿತಿ ನೀಡಿದ್ದಾರೆ.

ಗೋಧಿ ಹಿಟ್ಟಿನ ಲಭ್ಯತೆ ಹೆಚ್ಚಿಸಲು ಮತ್ತು ಬೆಲೆಯನ್ನು ನಿಯಂತ್ರಿಸಲು ಇದರಿಂದ ಅನುಕೂಲ ಆಗಲಿದೆ. ಕೇಂದ್ರ ಸರ್ಕಾರವು ಕಡಲೆ ಬೇಳೆ, ಟೊಮೊಟೊ ಮತ್ತು ಈರುಳ್ಳಿಯನ್ನು ಸಹ ರಿಯಾಯಿತಿ ದರಕ್ಕೆ ಮಾರಾಟ ಮಾಡುತ್ತಿದ್ದು, ಬೆಲೆಯು ನಿಯಂತ್ರಣಕ್ಕೆ ಬಂದಿದೆ ಎಂದು ಅವರು ತಿಳಿಸಿದ್ದಾರೆ.

ಈ ಮೂರು ಸಂಸ್ಥೆಗಳ ಮೊಬೈಲ್ ವ್ಯಾನ್‌ಗಳು ಮತ್ತು ಮಳಿಗೆಗಳು ಕೆ.ಜಿಗೆ ₹27.50ರಂತೆ ಗೋಧಿ ಹಿಟ್ಟು, ಕೆ.ಜಿಗೆ ₹60ರಂತೆ ಕಡಲೆ ಬೇಳೆ ಮತ್ತು ಕೆ.ಜಿಗೆ ₹25ರಂತೆ ಈರುಳ್ಳಿಯನ್ನು ಮಾರಾಟ ಮಾಡುತ್ತಿವೆ ಎಂದು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ತಿಳಿಸಿದ್ದಾರೆ.

3 ದಿನದಲ್ಲಿ ₹7.95 ಲಕ್ಷ ಕೋಟಿ ಸಂಪತ್ತು ವೃದ್ಧಿ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ 3 ದಿನಗಳಿಂದ ಸಕಾರಾತ್ಮಕ ವಹಿವಾಟು ನಡೆಯುತ್ತಿದೆ. ಇದರಿಂದಾಗಿ ಹೂಡಿಕೆದಾರ ಸಂಪತ್ತು ಮೌಲ್ಯವು 3 ದಿನಗಳಲ್ಲಿ ಒಟ್ಟು ₹7.95 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ. ಮುಂಬೈ ಷೇರುಪೇಟೆಯ ಬಂಡವಾಳ ಮೌಲ್ಯವು ₹318.17 ಲಕ್ಷ ಕೋಟಿಗೆ ತಲುಪಿತು.

ಸೋಮವಾರ, ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಇದು ದೇಶದಲ್ಲಿ ಐ.ಟಿ., ಖಾಸಗಿ ಬ್ಯಾಂಕ್‌ಗಳು ಮತ್ತು ಬಂಡವಾಳ ಸರಕುಗಳ ವಲಯದ ಷೇರುಗಳ ಮೌಲ್ಯ ಹೆಚ್ಚಳಕ್ಕೆ ಕಾರಣ ಆಯಿತು. ಅದರಿಂದಾಗಿ ಸೆನ್ಸೆಕ್ಸ್ 595 ಅಂಶ ಏರಿಕೆ ಕಂಡಿತು. ಬಿಎಸ್‌ಇ 1,367 ಅಂಶ ಏರಿಕೆ ಕಂಡಿದೆ.

ಸ್ಮಾರ್ಟ್ ಬಜಾರ್: ಬೆಸ್ಟಿವಲ್ ಫ್ಯಾಷನ್ ಷೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಒಡೆತನದ ಸ್ಮಾರ್ಟ್ ಬಜಾರ್ ಕಂಪನಿಯು ಬೆಸ್ಟಿವಲ್ ಫ್ಯಾಷನ್ ಷೋ ಮೂಲಕ ದೀಪಾವಳಿ ಹಬ್ಬಕ್ಕೆ ಬಟ್ಟೆಗಳ ಹೊಸ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ಸ್ಮಾರ್ಟ್ ಬಜಾರ್‌ನಲ್ಲಿ ಪುರುಷರು, ಮಹಿಳೆಯರು ಮತ್ತು ಮಕ್ಕಳಿಗೆ ಲಭ್ಯವಿರುವ ವಿವಿಧ ಬಟ್ಟೆಗಳ ಸಂಗ್ರಹವನ್ನು ಈ ಫ್ಯಾಷನ್ ಷೋದಲ್ಲಿ ಪ್ರಸ್ತುತಪಡಿಸಲಾಗಿದೆ.

ಇದೇ ಮೊದಲ ಬಾರಿಗೆ ಸೆಲೆಬ್ರಿಟಿಗಳು, ಪ್ರಭಾವಿಗಳು ಮತ್ತು ಗ್ರಾಹಕರು ಒಟ್ಟಾಗಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ್ದಾರೆ.

ಕಂಪನಿಯು ಸಾಮಾಜಿಕ ಮಾಧ್ಯಮಗಳ ಮೂಲಕ ಈ ಫ್ಯಾಷನ್ ಷೋ ಪ್ರಸಾರ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ
ಹಳೇ ಮದ್ರಾಸು ರಸ್ತೆ, ಬೆಂಗಳೂರು – 560 038
e-mail : edh.bang@gmail.com
ಸಂಖ್ಯೆ:ಸಾರೋಆ/ಅಭಿವೃದ್ಧಿ/15/2017–18 ದಿನಾಂಕ:06.11.2023

ಹರಾಜು ಪ್ರಕಟಣೆ

ಸರ್ಕಾರಿ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ಆವರಣದಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ತೆರವು ಹಾಗೂ ಅದರ ಅವಶೇಷಗಳ ವಿಲೇವಾರಿಗಾಗಿ ದಿನಾಂಕ **17.11.2023 ರಂದು ಬೆಳಿಗ್ಗೆ 11.00 ಗಂಟೆಗೆ** ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಆಸ್ಪತ್ರೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಸವಾಲುದಾರರು ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತು ಮತ್ತು ನಿಬಂಧನೆಗಳಿಗಾಗಿ ಈ ಕಛೇರಿಯ ಕರ್ತವ್ಯದ ದಿನಗಳಂದು ಬೆಳಿಗ್ಗೆ 09:00 ರಿಂದ ಸಂಜೆ 4:00 ಗಂಟೆವರೆಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/–
ಜಿಲ್ಲಾ ಶಸ್ತ್ರ ಚಿಕಿತ್ಸಕರು
ವಾಸಾಸಂಇ/ವಾಪ್ರ/ಜಿಎ/2007/2023–24

ನವೋದಯ ವಿದ್ಯಾಲಯ ಸಮಿತಿ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ,
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಒಂದು ಸ್ವಾಯತ್ತ ಸಂಸ್ಥೆ, ಭಾರತ ಸರ್ಕಾರ

ದಿನಾಂಕದ ವಿಸ್ತರಣೆಗೆ ಅಧಿಸೂಚನೆ

ಜವಾಹರ ನವೋದಯ ವಿದ್ಯಾಲಯಗಳಲ್ಲಿ 2024–25 ನೇ ಶೈಕ್ಷಣಿಕ ವರ್ಷದ ಪಾರ್ಶ್ವ ಪ್ರವೇಶ ಆಯ್ಕೆ ಪರೀಕ್ಷೆಯ (Lateral Entry Selection Test) ಮೂಲಕ 9 ಮತ್ತು 11 ನೇ ತರಗತಿಗಳಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು 15ನೇ ನವೆಂಬರ್ 2023 ರವರೆಗೆ ವಿಸ್ತರಿಸಲಾಗಿದೆ ಎಂದು ಸಂಬಂಧಪಟ್ಟ ಎಲ್ಲರ ಗಮನಕ್ಕೆ ತರಲು ಉದ್ದೇಶಿಸಲಾಗಿದೆ. ಅಭ್ಯರ್ಥಿಗಳು www.navodaya.gov.in ವೆಬ್‌ಸೈಟ್‌ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಕೆಲವು ಪ್ರಮುಖ ಕ್ಷೇತ್ರಗಳಲ್ಲಿ ಆನ್‌ಲೈನ್ ತಿದ್ದುಪಡಿ ವಿಂಡೋ 16 ಮತ್ತು 17 ನೇ ನವೆಂಬರ್ 2023 ರಂದು ತೆರೆದಿರುತ್ತದೆ.

ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ

ದ್ವಿಚಕ್ರ ವಾಹನ ಮಾರಾಟ ಇಳಿಕೆ ಪರಿಣಾಮ: ಎಫ್‌ಎಡಿಎ

ವಾಹನ ರಿಟೇಲ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ ಈ ವರ್ಷದ ಅಕ್ಟೋಬರ್‌ನಲ್ಲಿ ಶೇ 7.73ರಷ್ಟು ಇಳಿಕೆ ಕಂಡಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟವು (ಎಫ್‌ಎಡಿಎ) ಸೋಮವಾರ ತಿಳಿಸಿದೆ.

2022ರ ಅಕ್ಟೋಬರ್‌ನಲ್ಲಿ 22.95 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2023ರ ಅಕ್ಟೋಬರ್‌ನಲ್ಲಿ 21.17 ಲಕ್ಷಕ್ಕೆ ಇಳಿಕೆ ಕಂಡಿದೆ. ದ್ವಿಚಕ್ರ ವಾಹನ ಮಾರಾಟದಲ್ಲಿ ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ.

ಅಕ್ಟೋಬರ್ 14ರವರೆಗೆ ಪಿತೃಪಕ್ಷ ಇದ್ದಿದ್ದರಿಂದ ಹೊಸ ವಾಹನ ಖರೀದಿ ಆಗಿಲ್ಲ. ಹೀಗಾಗಿ ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ ಈ ವರ್ಷದ ಅಕ್ಟೋಬರ್‌ನಲ್ಲಿ ಮಾರಾಟ ಶೇ 8ರಷ್ಟು ಇಳಿಕೆ ಆಗಿದೆ. ಆದರೆ, ಈ ವರ್ಷದ ಸೆಪ್ಟೆಂಬರ್ ತಿಂಗಳಿಗೆ ಹೋಲಿಸಿದರೆ ಅಕ್ಟೋಬರ್‌ನಲ್ಲಿ ಮಾರಾಟವು ಶೇ 13ರಷ್ಟು ಏರಿಕೆ ಆಗಿದೆ ಎಂದು ಒಕ್ಕೂಟದ ಅಧ್ಯಕ್ಷ ಮನಿಷ್ ರಾಜ್ ಸಿಂಘಾನಿಯಾ ಹೇಳಿದ್ದಾರೆ.

ಹಬ್ಬದ ಋತುವಿನಲ್ಲಿ ಎಲ್ಲ ವಿಭಾಗಗಳೂ ಉತ್ತಮ ಬೆಳವಣಿಗೆ ಕಾಣುತ್ತಿವೆ. ಈ ಬಾರಿಯ ನವರಾತ್ರಿಯಲ್ಲಿ ರಿಟೇಲ್ ಮಾರಾಟ ಶೇ 18ರಷ್ಟು ಹೆಚ್ಚಾಗಿದೆ. 2017ರ ನವರಾತ್ರಿಯಲ್ಲಿ ಆಗಿದ್ದ ಮಾರಾಟಕ್ಕಿಂತಲೂ ಹೆಚ್ಚಾಗಿದೆ. ಟ್ರ್ಯಾಕ್ಟರ್ ಹೊರತುಪಡಿಸಿ ಉಳಿದೆಲ್ಲ ವಿಭಾಗಗಳ ಮಾರಾಟ ಹೆಚ್ಚಾಗಿದೆ ಎಂದು ಅವರು ತಿಳಿಸಿದ್ದಾರೆ.

ದೀಪಾವಳಿಯ ಹಬ್ಬ ಮತ್ತು ಹೊಸ ಮಾದರಿಗಳ ಬಿಡುಗಡೆಯು ಬೇಡಿಕೆಯನ್ನು ಹೆಚ್ಚಿಸುತ್ತಿದೆ. ಕಳೆದ ವರ್ಷ ವಾಹನಗಳ ಲಭ್ಯತೆಯು ಬೇಡಿಕೆಯಷ್ಟು ಇರಲಿಲ್ಲ. ಈ ಬಾರಿ ಆ ಸಮಸ್ಯೆ ಇಲ್ಲ. ಹೀಗಾಗಿ ಪ್ರಯಾಣಿಕ ವಾಹನ ಮಾರುಕಟ್ಟೆಯು ಉತ್ತಮ ಬೆಳವಣಿಗೆ ಹಾದಿಯಲ್ಲಿದೆ ಎಂದು ಹೇಳಿದ್ದಾರೆ.

ಹಬ್ಬದ ದಿನಗಳಲ್ಲಿ ಹೊಸ ವಾಹನಗಳಿಗೆ ಬುಕಿಂಗ್ ಹೆಚ್ಚಾಗಬಹುದು. ಆದರೆ, ವರ್ಷಾಂತ್ಯದ ರಿಯಾಯಿತಿ ಕೊಡುಗೆಯು ತಕ್ಷಣದ ಮಾರಾಟವನ್ನು ಕಡಿಮೆ ಮಾಡುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ ಎಂದಿದ್ದಾರೆ.

ವಾಹನ ಮಾರಾಟ





ದುಬೈನಲ್ಲಿ ನಡೆದ ಶಾರ್ಜಾ ಅಂತರರಾಷ್ಟ್ರೀಯ ಪುಸ್ತಕ ಮೇಳದಲ್ಲಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜೋಯ್ ಅಲುಕ್ಕಾಸ್ ಅವರು ಆತ್ಮಚರಿತ್ರೆ 'ಸ್ಪ್ರೆಡಿಂಗ್ ಜೋಯ್' ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಜೋಯ್ ಅಲುಕ್ಕಾಸ್ ಅವರ ಪತ್ನಿ ಜೋಲಿ, ಜೋಯ್ ಅಲುಕ್ಕಾಸ್ ಕಂಪನಿಯ ಜಾಗತಿಕ ಬ್ರ್ಯಾಂಡ್ ರಾಯಭಾರಿ ಬಾಲಿವುಡ್ ನಟಿ ಕಾಜಲ್ ದೇವಗನ್, ಶಾರ್ಜಾ ಬುಕ್ ಪ್ರಾಧಿಕಾರದ ಸಿಇಒ ಅಹ್ಮದ್ ಬಿನ್ ರಕ್ಕದ್ ಅಲ್ ಅನೇರಿ ಮತ್ತು ಹಾರ್ಪರ್‌ಕೋಲ್ಸ್‌ನ ಸಿಇಒ ಅನಂತ ಪದ್ಮನಾಭನ್ ಇದ್ದರು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹಳತು	43500-48500
ಚಿತ್ರದುರ್ಗ	
ಅಪಿ	45439-45869
ಬೆಟ್ಟೆ	36019-36459
ಕೆಂಪುಗೋಟು	30000-30400
ರಾಶಿ	44929-45389
ಕಾರ್ಕಳ	
ಹೊಸತು	25000-36500
ಹಳತು	30000-48500
ಕುಮಟ	
ಚಿಪ್ಪು	28099-34509
ಕೋಕ	21069-31599
ಫ್ಯಾಕ್ಟರಿ	10099-24299
ಹಳೆಚಾಲಿ	39809-40199
ಹೊಸಚಾಲಿ	37569-40099
ಸಾಗರ	
ಬಿಳಿಗೋಟು	16899-32899
ಚಾಲಿ	29499-38899
ಕೋಕ	12099-33989
ಕೆಂಪುಗೋಟು	28299-34699
ರಾಶಿ	32290-47389
ಸಿಪ್ಪೆಗೋಟು	15317-21129
ಶಿವಮೊಗ್ಗ	
ಬೆಟ್ಟೆ	45009-52952
ಗೊರಬಾಲು	16289-39169
ಹೊಸತು	43509-47099
ರಾಶಿ	40159-47221
ಸರಕು	48509-73300
ಸಿದ್ದಾಪುರ	
ಬಿಳಿಗೋಟು	31699-34609
ಚಾಲಿ	37609-40239
ಕೋಕ	30019-32859
ಕೆಂಪುಗೋಟು	31022-33889
ರಾಶಿ	44099-46789
ತಟ್ಟಿಬೆಟ್ಟೆ	38699-42099
ಶಿರಸಿ	
ಬೆಟ್ಟೆ	35099-43099
ಬಿಳಿಗೋಟು	26999-35792
ಚಾಲಿ	37009-41208
ರಾಶಿ	45269-47509
ಯಲ್ಲಾಪುರ	
ಬಿಳಿಗೋಟು	25099-35981
ಚಾಲಿ	36699-41050
ಕೋಕ	17999-31999
ಕೆಂಪುಗೋಟು	29126-35655
ರಾಶಿ	45900-54815
ತಟ್ಟಿಬೆಟ್ಟೆ	38306-44399

ಎಚ್‌ಪಿಸಿಎಲ್‌ಗೆ ₹5,827 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹5,827 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2,475 ಕೋಟಿಯಷ್ಟು ನಷ್ಟ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಕಚ್ಚಾ ತೈಲ ದರ ಇಳಿಕೆ ಆಗಿದ್ದರೂ ಪೆಟ್ರೋಲ್, ಡೀಸೆಲ್ ಮಾರಾಟ ದರ ಕಡಿಮೆ ಮಾಡದೇ ಇದ್ದಿದ್ದರಿಂದ ಲಾಭ ಆಗಿದೆ. ಆದರೆ, ಕಳೆದ ವರ್ಷ ಕಚ್ಚಾ ತೈಲ ದರ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದ್ದಾಗ ಇಂಧನ ಮಾರಾಟ ದರ ಹೆಚ್ಚಿಸಿರಲಿಲ್ಲ. ಅದರಿಂದ ಆಗಿದ್ದ ನಷ್ಟವನ್ನು ಈಗ ಸರಿಪಡಿಸಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ವರಮಾನವು ₹1.13 ಲಕ್ಷ ಕೋಟಿಯಿಂದ ₹1.02 ಲಕ್ಷ ಕೋಟಿಗೆ ಇಳಿಕೆ ಕಂಡಿದೆ ಎಂದು ಹೇಳಿದೆ. 2022ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಕಂಪನಿಗೆ ₹15,118 ಕೋಟಿ ನಷ್ಟ ಆಗಿತ್ತು. 2023ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹16,389 ಕೋಟಿ ಲಾಭ ಗಳಿಸಿಕೊಂಡಿದೆ.

ಪಂಜಾಬ್ ಎಎಪಿ ಶಾಸಕ ಬಂಧನ

ಚಂಡೀಗಢ (ಪಿಟಿಐ): ಬ್ಯಾಂಕ್ ವಂಚನೆಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಂಜಾಬ್‌ನ, ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕ ಜಸ್ವಂತ್ ಸಿಂಗ್ ಗಜ್ಜನ್ ಮಾಜ್ರಾ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

ಪಿಎಂಎಲ್‌ಎ ಕಾಯ್ದೆಯಡಿ ಶಾಸಕರನ್ನು ಬಂಧಿಸಲಾಗಿದೆ. ಅವರು ಮಲೇರ್‌ಕೋಟ್ಲಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದಂತೆಯೇ ಅಧಿಕಾರಿಗಳು ವಶಕ್ಕೆ ಪಡೆದಿದ್ದರು ಎಂದು ಇ.ಡಿ. ಹೇಳಿಕೆಯಲ್ಲಿ ತಿಳಿಸಿದೆ.

ವಿಧಾನಸಭೆಯಲ್ಲಿ ಅಮರ್‌ಗರ್ ಕ್ಷೇತ್ರವನ್ನು ಪ್ರತಿನಿಧಿಸುವ ಗಜ್ಜನ್ ಮಾಜ್ರಾ ಅವರಿಗೆ ಹಲವು ಬಾರಿ ಸಮನ್ಸ್ ನೀಡಲಾಗಿತ್ತು. ಅದಕ್ಕೆ ಸ್ಪಂದಿಸಿರಲಿಲ್ಲ. ಹೀಗಾಗಿ, ಮೊದಲು ವಿಚಾರಣೆಗೆ ವಶಕ್ಕೆ ಪಡೆದಿದ್ದ ಅಧಿಕಾರಿಗಳು, ನಂತರ ಬಂಧಿಸಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಇ–ಮೇಲ್ : kwbcen@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (CALL-2)
(ಎಲೆಕ್ಟ್ರಾನಿಕ್ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಲಕೋಟೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. **ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1462 ದಿನಾಂಕ: 03–11–2023.** Design, Build, Operation and Transfer (DBOT) ಮಾದರಿಯಲ್ಲಿ ಅಮೃತ್–2.0 ಯೋಜನೆ ಅಡಿ **ಯರಗಟ್ಟಿ, ರಾಮದುರ್ಗ, ಬೊರಗಾಂವ್, ಕಬ್ಬೂರ, ಕಾಗವಾಡ–ಶೇಡಬಾಳ–ಉಗಾರಖುರ್ದ, ನಾಗನೂರ–ಕಲ್ಲೋಳಿ–ಮಲ್ಲಾಪೂರ ಪಿಜಿ (ಘಟಪ್ರಭ)–ಅರಭಾವಿ–ಮೂಡಲಗಿ, ಸಿಂದಗಿ, ಗಜೇಂದ್ರಗಡ ಮತ್ತು ಕುಮಟಾ** ಪಟ್ಟಣಗಳಿಗೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವುದು ಹಾಗೂ 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) **(CALL-2) INDENT:KUWSDB/2023-24/WS/WORK_INDENT69** ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾರವಾಡ/457/2023–24/ದೇಶಪಾಂಡೆಪಬ್ಲಿಸಿಟಿ

ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ಕಛೇರಿ–6, ಕೆ.ಐ.ಎ.ಡಿ.ಬಿ. ಕಟ್ಟಡ, 'ಬಿ' ಬ್ಲಾಕ್, 3ನೇ ಮಹಡಿ, 14ನೇ ಅಡ್ಡ ರಸ್ತೆ, 4ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–560 058. ದೂರವಾಣಿ: 080–28363927
ಸಂಖ್ಯೆ: ವಾತಜಂಆ(ಆ)/ವಿಸ&ಸೇತಕ-6/ಟಿ.ಎ/ಸಿ.ಆರ್-03/2023-24, ದಿನಾಂಕ : 04.11.2023

ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆ), ವಿಭಾಗೀಯ ಸರಕು ಮತ್ತು ಸೇವಾ ಕಛೇರಿ-6, ಕೆ.ಐ.ಎ.ಡಿ.ಬಿ. ಕಟ್ಟಡ, ಬಿ ಬ್ಲಾಕ್, 3ನೇ ಮಹಡಿ, 14 ನೇ ಅಡ್ಡ ರಸ್ತೆ, 4 ನೇ ಹಂತ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-560 058 ರವರ ವಿಭಾಗದಲ್ಲಿ **(ತುಮಕೂರು, ತಿಪಟೂರು, ಮಧುಗಿರಿ ಮತ್ತು ಶಿರಾ ಕಛೇರಿಗಳೂ ಸೇರಿದಂತೆ) ಹೊರ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 18 (ಹದಿನೆಂಟು) ಜನ ಟೆಕ್ನಿಕಲ್ ಅನಾಲಿಸ್ಟ್‌ಗಳ ಸೇವೆಯನ್ನು 01 (ಒಂದು) ವರ್ಷದ ಅವಧಿಗೆ** ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **04.11.2023** ರಂದು 1999ರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲಾಗಿದೆ. **ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24.11.2023ರ ಸಂಜೆ 5.00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಗಮನಿಸಿ: **http://kppp.karnataka.gov.in, http://ctax.kar.nic.in**

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6, ಬೆಂಗಳೂರು.
DIPR/CP/RO2012/AAPL/2023-24

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325
ಇ–ಮೇಲ್: kanbhavblr@gmail.com
ವೆಬ್‌ಸೈಟ್: www.kannadasiri.in, www.kanaja.in
No. DKC/23-24/SE/10012 ದಿನಾಂಕ: 06.11.2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಏರ್ಪಡಿಸುವ ಜಯಂತಿಗಳು, ಪ್ರಶಸ್ತಿ ಪ್ರದಾನ, ರಾಷ್ಟ್ರೀಯ ಹಬ್ಬಗಳ ಆಚರಣೆ ಇತ್ಯಾದಿ ಕಾರ್ಯಕ್ರಮಗಳಿಗೆ ಅಗತ್ಯವಿರುವ ವೇದಿಕೆ, ಎಲ್.ಇ.ಡಿ, ಸೌಂಡ್–ಸಿಸ್ಟಮ್, ಲೈಟಿಂಗ್ಸ್, ಬ್ಯಾನರ್, ಶಾಮಿಯಾನ ಮತ್ತು ಹೂವಿನ ಅಲಂಕಾರ ಇತ್ಯಾದಿ ವ್ಯವಸ್ಥೆ ಮಾಡಲು ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ನಿಗದಿತ ನಮೂನೆಯಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ವಿಧಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್‌ಗೆ ಇಟ್ಟ ಮೊತ್ತ : ರೂ. 3,00,00,000/–. **2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ / ದಿನಾಂಕ:** http://www.eproc.karnataka.gov.in ದಿನಾಂಕ: 07.11.2023. **3) ಇಎಂಡಿ ಮೊತ್ತ:** ರೂ.7,50,000/–. **4) ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ :** 07.12.2023 ಸಂಜೆ 4.00 ಗಂಟೆ. **5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ :** 08.12.2023 ಸಂಜೆ 3.00 ಗಂಟೆ. **6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** 11.12.2023 ಸಂಜೆ 3.00 ಗಂಟೆ. **7) ಯಾವುದೇ ವಿಚಾರಣೆ, ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ:** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002. ದೂ : 080–22213530.

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1911/ಆಕಾರ್/2023–24

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in
ಸಂಖ್ಯೆ: ಅಸಂನಿ/ಆರ್ಮಿ/ತರಬೇತಿ/ಸಿಆರ್–03/2023–24 ದಿನಾಂಕ : 06–11–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ರಕ್ಷಣಾ/ ಏಕರೂಪದ ಸೇವೆಗಳಿಗೆ (ಪುರುಷ ಮತ್ತು ಮಹಿಳೆಯರಿಗೆ)/ ಭಾರತೀಯ ಸೇನೆ, ವಾಯುಪಡೆ, ನೌಕಾಪಡೆ, CISF, BSF, RPF, ಪೊಲೀಸ್, ಅಬಕಾರಿ ಇತ್ಯಾದಿ) ಸೇರಲು ಇಚ್ಛಿಸುವ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ ವಸತಿ ಸಹಿತವಾಗಿ ಪೂರ್ವ ನೇಮಕಾತಿ ದೈಹಿಕ ಕೌಶಲ್ಯದ ಕುರಿತು ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

(1) ಟೆಂಡರ್ ಪ್ರಕಟಣೆಯ ದಿನಾಂಕ : 06.11.2023, (2) ಟೆಂಡರ್ ಮೊತ್ತ: ರೂ. 150.00 .00 ಲಕ್ಷಗಳು, (3) ಇ.ಎಂ.ಡಿ ಮೊತ್ತ: ರೂ. 2.25 ಲಕ್ಷಗಳು, (4) ಟೆಂಡರ್ ಕುರಿತು ಪೂರ್ವಭಾವಿ ಸಭೆ: ದಿನಾಂಕ: 10.11.2023 ಬೆಳಗ್ಗೆ 11.00 ಗಂಟೆಗೆ, (5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 20.11.2023, ಸಂಜೆ 5.30 ಗಂಟೆಯೊಳಗೆ, (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 22.11.2023, ಬೆಳಗ್ಗೆ 11.00 ಗಂಟೆಗೆ, (7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 24.11.2023, ಬೆಳಗ್ಗೆ 11.00 ಗಂಟೆಗೆ, (ತಾತ್ಕಾಲಿಕ) (8) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಆಜಾದ್ ಭವನ, ನಂ.16 ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–52. (9) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902, 080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಂಟಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/2015/Zen/2023-24

ಏರುಗತಿಯತ್ತ ದೆಹಲಿ ವಾಯುಮಾಲಿನ್ಯ

'ಸಮ- ಬೆಸ ಸಂಖ್ಯೆ ಆಧಾರದಲ್ಲಿ ವಾಹನಗಳ ಬಳಕೆಗೆ ಸೂಚನೆ'

ನವದೆಹಲಿ (ಪಿಟಿಐ): 'ವಾಯುಮಾಲಿನ್ಯ ನಿಯಂತ್ರಣ ಕ್ರಮವಾಗಿ ದೆಹಲಿಯಲ್ಲಿ ನ. 13ರಿಂದ 20ರವರೆಗೆ ಸಮ ಹಾಗೂ ಬೆಸ ನೋಂದಣಿ ಸಂಖ್ಯೆ ಆಧಾರದಲ್ಲಿ ಕಾರುಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲು ದೆಹಲಿ ಸರ್ಕಾರ ನಿರ್ಧರಿಸಿದೆ.

'ದೀಪಾವಳಿ ಹಬ್ಬದ ಬಳಿಕ ದೆಹಲಿಯಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ. ಯೋಜನೆಯ ವಿಸ್ತರಣೆ ಕುರಿತು ನವೆಂಬರ್ 20ರ ಬಳಿಕ ಈ ನಿರ್ಧರಿಸಲಾಗುವುದು' ಎಂದು ದೆಹಲಿಯ ಪರಿಸರ ಸಚಿವ ಗೋಪಾಲ್ ರೈ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ವಿನಾಯಿತಿ ಒಳಗೊಂಡಂತೆ ಸಮ–ಬೆಸ ಸಂಖ್ಯೆಯ ವಾಹನಗಳ ಬಳಕೆ ಕುರಿತ ವಿವರಗಳನ್ನು ಸಾರಿಗೆ ಇಲಾಖೆಯ ಜೊತೆಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು. ಈ ಯೋಜನೆಯನ್ನು ಮೊದಲಿಗೆ 2016ರಲ್ಲಿ ಜಾರಿಗೆ ತರಲಾಗಿತ್ತು.

2018ಲ್ಲಿ ಇಂಧನ ಮತ್ತು ಸಂಪನ್ಮೂಲ ಸಂಸ್ಥೆಯು ನಡೆಸಿದ್ದ ಅಧ್ಯಯನದ ಪ್ರಕಾರ, ದೆಹಲಿಯಲ್ಲಿ ವಾಯುಮಾಲಿನ್ಯಕ್ಕೆ ವಾಹನಗಳ ಪಾಲು ಶೇ 40ರಷ್ಟು ಎಂದು ಗೊತ್ತಾಗಿತ್ತು.



ನವದೆಹಲಿಯ ರಾಷ್ಟ್ರಪತಿ ಭವನದ ಬಳಿ ಸೋಮವಾರ ಆವರಿಸಿದ್ದ ಹಾನಿಕಾರಕ ಹೊಗೆ ಮಂಜು –ಪಿಟಿಐ ಚಿತ್ರ

ಮನೆಯಿಂದಲೇ ಕೆಲಸ: 'ಸರ್ಕಾರಿ ಹಾಗೂ ಖಾಸಗಿ ವಲಯದ ಶೇಕಡಾ 50ರಷ್ಟು ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಕಲ್ಪಿಸುವ ಕುರಿತು ದೀಪಾವಳಿ ಬಳಿಕ ನಿರ್ಧರಿಸಲಾಗುವುದು' ಎಂದರು.

ಕೇಂದ್ರ ಸರ್ಕಾರದ ವಾಯು ಮಾಲಿನ್ಯ ನಿಯಂತ್ರಣ ಯೋಜನೆಯಡಿ ಅನುಸರಿಸಬೇಕಾದ ಕಠಿಣ ಕ್ರಮಗಳ ಕುರಿತು ದೆಹಲಿ–ಎನ್‌ಸಿಆರ್ ವಲಯದಕ್ಕೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ದೆಹಲಿಯ ಸೋಮವಾರದ ವಾಯು ಗುಣಮಟ್ಟದ ಸೂಚ್ಯಂಕ 421 ಆಗಿದೆ. ಇದು ಭಾನುವಾರಕ್ಕಿಂತಲೂ ಉತ್ತಮವಾಗಿದೆ ಎಂದು ದೆಹಲಿ–ಎನ್‌ಸಿಆರ್‌ನ ಭೂ ವಿಜ್ಞಾನ ಸಚಿವಾಲಯದ ವಾಯು ಗುಣಮಟ್ಟ ಮುನ್ನೆಚ್ಚರಿಕಾ ಸಂಸ್ಥೆ ತಿಳಿಸಿದೆ.

ಭೌತಿಕ ತರಗತಿಗಳ ಸ್ಥಗಿತಕ್ಕೆ ನಿರ್ದೇಶನ: '10 ಮತ್ತು 12ನೇ ತರಗತಿಗಳನ್ನು ಹೊರತುಪಡಿಸಿ, ಎಲ್ಲ ಶಾಲೆಗಳ ಭೌತಿಕ ತರಗತಿಗಳನ್ನು ಸ್ಥಗಿತಗೊಳಿಸಬೇಕೆಂದು ನಿರ್ದೇಶಿಸಲಾಗಿದೆ' ಎಂದು ಸಚಿವ ಗೋಪಾಲ್ ರೈ ತಿಳಿಸಿದರು.

Infosys Limited
Navigate your next
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the company will proceed to **issue letter of confirmation in lieu of duplicate share certificate(s)** unless a valid objection is received by the company within 15 days from the date of publication of this notice. No claims will be entertained by the company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
DINUMATI CHIMANLAL TRIVEDI(Deceased) (**Claimant** – KOKILA CHIMANLAL TRIVEDI)	ITL100528	654159	583042040	583042064	25
		1000073	1149248346	1149248370	25

Any person who has/have a claim in respect of the said certificate(s) should lodge his/her/their claim with all supporting documents with the company at its registered office. If no valid and legitimate claim is received within 15 days from the date of publication of this notice, the company will proceed to issue Letter of Confirmation in lieu of duplicate share certificate(s) to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

For **Infosys Limited**
Sd/-
A.G.S. Manikantha
Company Secretary

November 6, 2023
Bengaluru, India

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರುರವರ ಕಛೇರಿ,
ಬೊಮ್ಮನಹಳ್ಳಿ ಯೋಜನೆ ವಿಭಾಗ, ಬೇಗೂರು ಮುಖ್ಯ ರಸ್ತೆ,
ಬೊಮ್ಮನಹಳ್ಳಿ, ಬೆಂಗಳೂರು– 560 068
ನಂ.: ಬಿಬಿಎಂಪಿ/ಕಾಪಾಅ/ಬೊಯೋವಿ/ಟೆಂಡರ್–02/2023–24 ದಿನಾಂಕ: 04.11.2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ) ದ್ವಿ ಲಕೋಟೆ ಟೆಂಡರ್
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬಿಬಿಎಂಪಿ, ಬೆಂಗಳೂರು–68 ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿತ ಅಥವಾ ತತ್ಸಮಾನ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ಬಿಡಬ್ಲ್ಯುಎಸ್‌ಎಸ್‌ಬಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯು3)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷಗಳು)	ಇಎಂಡಿ (ರೂ.ಗಳು)
1	ಬೊಮ್ಮನಹಳ್ಳಿ ವಲಯದ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಉದ್ಯಾನವನಗಳ ದುರಸ್ತಿ ಮತ್ತು ಸುಧಾರಣೆಗಳು.	84.50	1,69,000/–
2	ಬೊಮ್ಮನಹಳ್ಳಿ ವಲಯದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಉದ್ಯಾನವನಗಳ ದುರಸ್ತಿ ಮತ್ತು ಸುಧಾರಣೆಗಳು.	65.50	1,31,000/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **06.11.2023**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು **13.11.2023**ರ **ಬೆಳಗ್ಗೆ 11:00 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ಬೊಮ್ಮನಹಳ್ಳಿ ಯೋಜನಾ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು – 560102ರಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ **20.11.2023**ರ **ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗರವರ ಕಛೇರಿಯಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ದಿನಾಂಕ **21.11.2023**ರ **ಸಂಜೆ 4:30 ಗಂಟೆ**ಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ಯೋಜನೆ ವಿಭಾಗ, ಬಿಬಿಎಂಪಿ

ಏಕದಿನ ಕ್ರಿಕೆಟ್ ವಿಶ್ವಕಪ್ – 2023

ಶಕೀಬ್ ಬಳಗ ಜಯಭೇರಿ

ಸೆಮಿಫೈನಲ್ ಹಾದಿಯಿಂದ ಹೊರಬಿದ್ದ ಶ್ರೀಲಂಕಾ ತಂಡ; ಮಿಂಚಿದ ನಜ್ಮುಲ್ ಹುಸೇನ್ ಶಾಂತೊ

ನವದೆಹಲಿ (ಪಿಟಿಐ): ಅನುಭವಿ ಆಟಗಾರ ಏಂಜೆಲೊ ಮ್ಯಾಥ್ಯೂಸ್‌ಗೆ 'ಟೈಮ್ ಔಟ್' ಆಘಾತ ನೀಡಿದ ಬಾಂಗ್ಲಾದೇಶ ತಂಡವು ಶ್ರೀಲಂಕಾಗೆ ಸೋಲಿನ ಕಹಿಯನ್ನೂ ಉಣಿಸಿತು. ಇದರಿಂದಾಗಿ ಶ್ರೀಲಂಕಾ ಈ ಬಾರಿಯ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಹಾದಿಯಿಂದ ಹೊರಬಿತ್ತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ನಜ್ಮುಲ್ ಹುಸೇನ್ ಶಾಂತೊ (90; 101ಎ, 4X12) ಮತ್ತು ನಾಯಕ ಶಕೀಬ್ ಅಲ್ ಹಸನ್ (82; 65ಎ, 4X12, 6X2) ಅವರ 169 ರನ್‌ಗಳ ಜೊತೆಯಾಟದಿಂದ ಬಾಂಗ್ಲಾ ತಂಡವು 3 ವಿಕೆಟ್‌ಗಳ ಜಯ ಸಾಧಿಸಿತು. ಅಂಕಪಟ್ಟಿಯಲ್ಲಿ ಏಳನೇ ಸ್ಥಾನಕ್ಕೇರಿತು. ಆದರೆ ತಂಡವು ಈಗಾಗಲೇ ನಾಲ್ಕರ ಘಟ್ಟದ ಪ್ರವೇಶ ಅವಕಾಶವನ್ನು ಕಳೆದುಕೊಂಡಿದೆ.

ದೆಹಲಿಯಲ್ಲಿ ಹೆಚ್ಚಿರುವ ವಾಯುಮಾಲಿನ್ಯದಿಂದಾಗಿ ಈ ಪಂದ್ಯ ನಡೆಯುವುದೇ ಅನುಮಾನವಾಗಿತ್ತು. ಆದರೆ ಮಧ್ಯಾಹ್ನ ವಾಯು ಗುಣಮಟ್ಟವು ಸುಧಾರಿಸಿದ್ದ ಕಾರಣ ಪಂದ್ಯ ನಡೆಸಲು ಅನುಮತಿ ನೀಡಲಾಯಿತು.

ಬಾಂಗ್ಲಾ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಶ್ರೀಲಂಕಾ ತಂಡಕ್ಕೆ ಉತ್ತಮ ಆರಂಭ ದೊರೆಯಲಿಲ್ಲ. ತಂಡವು 72 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಏಕಾಂಗಿ ಹೋರಾಟ ಮಾಡಿದ ಚರಿತ ಅಸಲಂಕಾ (108; 105ಎ, 4X6, 6X5) ಶತಕದ ಬಲದಿಂದ ತಂಡವು 49.3 ಓವರ್‌ಗಳಲ್ಲಿ 279 ರನ್ ಗಳಿಸಿ ಆಲೌಟ್ ಆಯಿತು.

ಬಾಂಗ್ಲಾದೇಶ ತಂಡದ ನಾಯಕ ಶಕೀಬ್ ಅಲ್ ಹಸನ್ ಮತ್ತು ನಜ್ಮುಲ್ ಹುಸೇನ್ ಶಾಂತೊ ಜೊತೆಯಾಟ –ಎಎಫ್‌ಪಿ ಚಿತ್ರ

ಆರನೇ ಕ್ರಮಾಂಕದ, ಅನುಭವಿ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ 'ಟೈಮ್ಡ್ ಔಟ್' ಆದರು. ಧನಂಜಯ ಡಿಸಿಲ್ವಾ (34; 36ಎ) ಮತ್ತು ತೀಕ್ಷಣ (22; 31ಎ) ಅವರು ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಬಾಂಗ್ಲಾ ತಂಡವು 41.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 282 ರನ್ ಗಳಿಸಿತು. ಶಾಂತೊ ಮತ್ತು ಶಕೀಬ್ ಅವರ ಬೀಸಾಟದಿಂದಾಗಿ ತಂಡವು ಗೆಲುವಿನತ್ತ ವಾಲಿತು. ಆದರೆ ಸುಲಭವಾಗಿ ಗೆಲ್ಲುವ ಅವಕಾಶವಿದ್ದರೂ ದೊಡ್ಡ ಹೊಡೆತಗಳಿಗೆ ಯತ್ನಿಸಿದ ಬಾಂಗ್ಲಾ ಬ್ಯಾಟರ್‌ಗಳು ವಿಕೆಟ್ ಕಳೆದುಕೊಂಡರು. ಶಾಂತೋ ಮತ್ತು ಶಕೀಬ್ ಕೂಡ ಇದೇ ಕಾರಣದಿಂದ ಶತಕ ಗಳಿಕೆ ತಪ್ಪಿಸಿಕೊಂಡರು.

ಶ್ರೀಲಂಕಾದ ಬೌಲರ್ ದಿಲ್ಶಾನ್ ಮಧುಶಂಕಾ ಮತ್ತು ಮಹೀಷ ತೀಕ್ಷಣ ಅವರು ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಗಳಿಸಿದರು. ಮ್ಯಾಥ್ಯೂಸ್ ಕೂಡ ಎರಡು ವಿಕೆಟ್ ಹಾಕಿದರು. ಕೊನೆಯ ಹಂತದಲ್ಲಿ ಬೌಲರ್‌ಗಳ ಪ್ರಯತ್ನ ಮಾಡಿದರಾದರೂ ಲಂಕಾ ತಂಡಕ್ಕೆ ಜಯಿಸಲು ಆಗಲಿಲ್ಲ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 49.3 ಓವರ್‌ಗಳಲ್ಲಿ 279 (ಪಥುಮ್ ನಿಸಾಂಕ 41, ಸದಿರ ಸಮರವಿಕ್ರಮ 41, ಚರಿತ ಅಸಲಂಕಾ 108, ಧನಂಜಯ್ ಡಿಸಿಲ್ವಾ 34, ಮಹೀಷ ತೀಕ್ಷಣ 22, ಶೊರಿಫುಲ್ ಇಸ್ಲಾಮ್ 52ಕ್ಕೆ2, ತಂಜೀಮ್ ಹಸನ್ ಸಕೀಬ್ 80ಕ್ಕೆ3, ಶಕೀಬ್ ಅಲ್ ಹಸನ್ 57ಕ್ಕೆ2) ಬಾಂಗ್ಲಾದೇಶ: 41.1 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 282 (ಲಿಟನ್ ದಾಸ್ 23, ನಜ್ಮುಲ್ ಹುಸೇನ್ ಶಾಂತೊ 90, ಶಕೀಬ್ ಅಲ್ ಹಸನ್ 82, ಮಹಮುದುಲ್ಲಾ 22, ದಿಲ್ಶಾನ್ ಮಧುಶಂಕಾ 69ಕ್ಕೆ3, ಮಹೀಷ ತೀಕ್ಷಣ 44ಕ್ಕೆ2, ಏಂಜೆಲೊ ಮ್ಯಾಥ್ಯೂಸ್ 39ಕ್ಕೆ2) ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ 3 ವಿಕೆಟ್‌ಗಳ ಜಯ. ಪಂದ್ಯಶ್ರೇಷ್ಠ: ಶಕೀಬ್ ಅಲ್ ಹಸನ್

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	8	8	0	0	16	2.456
ದಕ್ಷಿಣ ಆಫ್ರಿಕಾ	8	6	2	0	12	1.376
ಆಸ್ಟ್ರೇಲಿಯಾ	7	5	2	0	10	0.924
ನ್ಯೂಜಿಲೆಂಡ್	8	4	4	0	8	0.398
ಪಾಕಿಸ್ತಾನ	8	4	4	0	8	-0.036
ಅಫ್ಗಾನಿಸ್ತಾನ	7	4	3	0	8	-0.330
ಬಾಂಗ್ಲಾದೇಶ	8	2	6	0	4	-1.142
ಶ್ರೀಲಂಕಾ	8	2	6	0	4	-1.160
ನೆದರ್ಲೆಂಡ್ಸ್	7	2	5	0	4	-1.398
ಇಂಗ್ಲೆಂಡ್	7	1	6	0	2	-1.504

ಅಗ್ರ ಐವರು

ಬ್ಯಾಟಿಂಗ್

ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	550
ವಿರಾಟ್ ಕೊಹ್ಲಿ (ಭಾರತ)	543
ರಚಿನ್ ರವೀಂದ್ರ (ನ್ಯೂಜಿಲೆಂಡ್)	523
ರೋಹಿತ್ ಶರ್ಮಾ (ಭಾರತ)	442
ಡೇವಿಡ್ ವಾರ್ನರ್ (ಆಸ್ಟ್ರೇಲಿಯಾ)	428

ಬೌಲಿಂಗ್

ದಿಲ್ಶಾನ್ ಮಧುಶಂಕ (ಶ್ರೀಲಂಕಾ)	21
ಜಂಪಾ (ಆಸ್ಟ್ರೇಲಿಯಾ)	19
ಮಾರ್ಕೊ ಯಾನ್ಸನ್ (ದಕ್ಷಿಣ ಆಫ್ರಿಕಾ)	17
ಮೊಹಮ್ಮದ್ ಶಮಿ (ಭಾರತ)	16
ಶಹೀನ್ ಶಾ ಅಫ್ರಿದಿ (ಪಾಕಿಸ್ತಾನ)	16

ಕ್ರಿಕೆಟ್ ಇತಿಹಾಸದಲ್ಲಿ ಇದೇ ಮೊದಲು

ಮ್ಯಾಥ್ಯೂಸ್ 'ಟೈಮ್ಡ್ ಔಟ್'

ನವದೆಹಲಿ (ಪಿಟಿಐ): ಶ್ರೀಲಂಕಾ ತಂಡದ ಅನುಭವಿ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಟೈಮ್ಡ್ ಔಟ್ ಆದರು. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈ ರೀತಿ ಟೈಮ್ಡ್ ಔಟ್ ಆಗಿ ನಿರ್ಗಮಿಸಿದ ಮೊದಲ ಬ್ಯಾಟರ್ ಎನಿಸಿದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ 36 ವರ್ಷದ ಮ್ಯಾಥ್ಯೂಸ್ ಅವರು, ಸದೀರ ಸಮರವಿಕ್ರಮ ಔಟಾದ (25ನೇ ಓವರ್‌ನಲ್ಲಿ) ನಂತರ ಬ್ಯಾಟಿಂಗ್ ಮಾಡಬೇಕಿತ್ತು. ಆರನೇ ಕ್ರಮಾಂಕದಲ್ಲಿ ಆಡಲು ಮ್ಯಾಥ್ಯೂಸ್ ಪಿಚ್‌ನತ್ತ ಬಂದರು ಕೂಡ. ಆದರೆ ಇದೇ ಸಂದರ್ಭದಲ್ಲಿ ತಮ್ಮ ಹೆಲ್ಮೆಟ್‌ನ ಪಟ್ಟಿ ಹರಿದಿದ್ದನ್ನು ಗಮನಿಸಿದರು. ಇನ್ನೊಂದು ಹೆಲ್ಮೆಟ್ ತರುವಂತೆ ಡಗ್‌ಔಟ್‌ನತ್ತ ಸಹ ಆಟಗಾರನಿಗೆ ಸನ್ನೆ ಮಾಡಿದರು. ಆದರೆ ಈ ಸಂದರ್ಭದಲ್ಲಿ ವೇಳೆ ಮೀರಿದ್ದನ್ನು ಗಮನಿಸಿದ ಬಾಂಗ್ಲಾದೇಶ ತಂಡದ ಆಟಗಾರರು 'ಟೈಮ್ ಔಟ್'ಗಾಗಿ ಮನವಿ ಸಲ್ಲಿಸಿದರು.

ಒಬ್ಬ ಬ್ಯಾಟರ್ ಔಟ್ ಅಥವಾ ಗಾಯಗೊಂಡು ನಿವೃತ್ತಿಯಾಗಿ ನಿರ್ಗಮಿಸಿದ ಎರಡು ನಿಮಿಷಗಳ ಅವಧಿಯಲ್ಲಿ ಮತ್ತೊಬ್ಬ ಬ್ಯಾಟರ್ ಕ್ರೀಸ್‌ಗೆ ಬಂದು ಆಟ ಆರಂಭಿಸಬೇಕು ಎಂಬುದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (40.1.1) ನಿಯಮವಾಗಿದೆ. ಅಲ್ಲದೇ ನಿಯಮ 40.1.2ರ ಪ್ರಕಾರ, ಬ್ಯಾಟರ್ ಕ್ರೀಸ್‌ಗೆ ಬರುವಲ್ಲಿ ವಿಳಂಬವಾದರೆ ಅಂಪೈರ್‌ಗಳು 16.3ರ ಅನ್ವಯ ಕ್ರಮ ಕೈಗೊಳ್ಳಬಹುದಾಗಿದೆ.

ಅಂಪೈರ್‌ಗಳಾದ ಮರಾಯಿಸ್ ಎರಸ್ಮಸ್ ಮತ್ತು ರಿಚರ್ಡ್ ಇಲಿಂಗ್‌ವರ್ಥ್ ಅವರು ಏಂಜೆಲೊ ಮ್ಯಾಥ್ಯೂಸ್ ಅವರನ್ನು ಔಟ್ ಎಂದು ತೀರ್ಪು ನೀಡಿದರು. ಈ ಸಂದರ್ಭದಲ್ಲಿ ಚಕಿತಗೊಂಡ ಮ್ಯಾಥ್ಯೂಸ್ ಮತ್ತು ಇನ್ನೊಂದು ಬದಿಯಲ್ಲಿದ್ದ ಚರಿತ್ ಅಸಲಂಕಾ ಅವರು ಅಂಪೈರ್‌ಗಳ ಜೊತೆಗೆ ವಾಗ್ವಾದ ನಡೆಸಿದರು. ಮ್ಯಾಥ್ಯೂಸ್ ಅವರು ಬಾಂಗ್ಲಾ ತಂಡದ ನಾಯಕ ಶಕೀಬ್ ಅಲ್ ಹಸನ್ ಅವರೊಂದಿಗೆ ಕೂಡ ಮಾತುಕತೆ ನಡೆಸಿದರು. ತಮ್ಮ ಹೆಲ್ಮೆಟ್‌ನ ಪಟ್ಟಿ ಕಿತ್ತಿರುವುದನ್ನು ತೋರಿಸಿದರು. ಆದರೆ ಯಾವುದೂ ಫಲ ಕೊಡಲಿಲ್ಲ.

ಅಸಮಾಧಾನದಿಂದ ಕುದಿಯುತ್ತಲೇ ಮ್ಯಾಥ್ಯೂಸ್ ಹೊರನಡೆದರು. ಲಂಕಾ ತಂಡದ ಮೊತ್ತ 135 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ನಿಯಮದ ಪ್ರಕಾರ, ಬ್ಯಾಟರ್ ಟೈಮ್ ಔಟ್ ಆದಲ್ಲಿ ಆ ವಿಕೆಟ್‌ಅನ್ನು ಯಾವುದೇ ಬೌಲರ್‌ಗಳ ಖಾತೆಗೂ ಸೇರ್ಪಡೆ ಮಾಡಲಿಲ್ಲ.

ಇಂತದೊಂದು ಘಟನೆಯು ದೇಶಿ ಕ್ರಿಕೆಟ್‌ನಲ್ಲಿ ದಾಖಲಾಗಿದೆ. 1997ರಲ್ಲಿ ಕಟಕ್‌ನಲ್ಲಿ ನಡೆದಿದ್ದ ತ್ರಿಪುರಾ ಮತ್ತು ಒಡಿಶಾ ನಡುವಣ ಪಂದ್ಯದಲ್ಲಿ ಹೇಮುಲಾಲ್ ಯಾದವ್ ಇದೇ ರೀತಿ ಟೈಮ್ ಔಟ್ ಆಗಿದ್ದರು.

ಶ್ರೀಲಂಕಾ ತಂಡದ ಆಟಗಾರ ಏಂಜೆಲೊ ಮ್ಯಾಥ್ಯೂಸ್ –ಪಿಟಿಐ ಚಿತ್ರ

ಎರಡು ನಿಮಿಷ ಸಮಯ

ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಒಬ್ಬ ಬ್ಯಾಟರ್ ಔಟ್ ಆಗಿ ಅಥವಾ ಗಾಯಗೊಂಡು ನಿವೃತ್ತಿ ಪಡೆದು ನಿರ್ಗಮಿಸಿದ ಎರಡು ನಿಮಿಷಗಳೊಳಗೆ ಮುಂದಿನ ಬ್ಯಾಟರ್ ಕ್ರೀಸ್‌ಗೆ ಬರಬೇಕು. ಅಷ್ಟೇ ಅಲ್ಲ, ಗಾರ್ಡ್ ತೆಗೆದುಕೊಂಡು ಎಸೆತ ಎದುರಿಸಲು ಸಿದ್ಧನಾಗಬೇಕು ಎಂಬುದು ಐಸಿಸಿ ವಿಶ್ವಕಪ್ ಟೂರ್ನಿಯ ನಿಯಮವಾಗಿದೆ. ಏಂಜೆಲೊ ಮ್ಯಾಥ್ಯೂಸ್ ಕ್ರೀಸ್ ಬಳಿ ಬಂದಿದ್ದರು. ಆದರೆ ಗಾರ್ಡ್ ತೆಗೆದುಕೊಂಡಿರಲಿಲ್ಲ.

ಮೆರಿಲ್‌ಬೊನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ನಿಯಮದ ಪ್ರಕಾರ 3 ನಿಮಿಷಗಳ ಸಮಯ ಇರುತ್ತದೆ. ಆದರೆ ವಿಶ್ವಕಪ್ ಟೂರ್ನಿಗೆ ಇದು ಅನ್ವಯವಾಗುವುದಿಲ್ಲ.

ವಿ.ಎನ್. ಕುಲಕರ್ಣಿ, ಮಾಜಿ ಅಂತರರಾಷ್ಟ್ರೀಯ ಅಂಪೈರ್ (ಕನ್ನಡದಲ್ಲಿ ಐಸಿಸಿ ನಿಯಮ ಬರೆದಿದ್ದಾರೆ)

'ನಾಚಿಕೆಗೇಡು; ಆಘಾತವಾಗಿದೆ'

'ಟೈಮ್ಡ್ ಔಟ್' ಮೂಲಕ ತಮ್ಮನ್ನು ಔಟ್ ಮಾಡಿದ ಬಾಂಗ್ಲಾದೇಶ ತಂಡದ ನಿರ್ಧಾರ 'ನಾಚಿಕೆಗೇಡಿನದ್ದು' ಎಂದು ಏಂಜೆಲೊ ಮ್ಯಾಥ್ಯೂಸ್ ಆಕ್ರೋಶ ಹೊರಹಾಕಿದ್ದಾರೆ.

'ನಾನು ಯಾವುದೇ ತಪ್ಪು ಮಾಡಿಲ್ಲ. ಎರಡು ನಿಮಿಷಗಳಲ್ಲಿ ಪಿಚ್ ಬಳಿ ಬಂದಿದ್ದೆ. ಆದರೆ ಹೆಲ್ಮೆಟ್‌ನ ಪಟ್ಟ ಹರಿಹೋಗಿತ್ತು. ಅದನ್ನು ತಿಳಿದೂ ಶಕೀಬ್ ಅಲ್ ಹಸನ್ ಔಟ್‌ಗಾಗಿ ಮನವಿ ಮಾಡಿದ್ದು ನಾಚಿಕೆಗೇಡಿನ ವಿಷಯ. ಇದರಿಂದ ನನಗ ಆಘಾತವಾಗಿದೆ' ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.

ಆದರೆ ಶಕೀಬ್ ತಮ್ಮ ನಿರ್ಧಾರ ಸಮರ್ಥಿಸಿಕೊಂಡಿದ್ದು, 'ಎರಡು ನಿಮಿಷಗಳ ಒಳಗಾಗಿ ಅವರು ಬ್ಯಾಟ್ ಮಾಡಲು ಸಜ್ಜಾಗಲಿಲ್ಲ. ನಿಯಮದ ಪ್ರಕಾರ ಔಟ್' ಎಂದಿದ್ದಾರೆ.

ಸೆಮಿಫೈನಲ್ ಮೇಲೆ ಉಭಯ ತಂಡಗಳ ಕಣ್ಣು; ಸ್ಪಿನ್ನರ್‌ಗಳ ಮೇಲೆ ವಿಶ್ವಾಸವಿಟ್ಟಿರುವ ಶಹೀದಿ

ಆಸ್ಟ್ರೇಲಿಯಾಗೆ 'ಅಚ್ಚರಿ' ನೀಡುವುದೇ ಅಫ್ಗನ್?

ಮುಂಬೈ (ಪಿಟಿಐ): 'ದೈತ್ಯ ಸಂಹಾರಿ' ಅಫ್ಗಾನಿಸ್ತಾನ ತಂಡವನ್ನು ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಎದುರಿಸಲಿದೆ.

ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾ ತಂಡವು ಅಫ್ಗನ್ ವಿರುದ್ಧ ಗೆದ್ದು ನಾಲ್ಕರ ಘಟ್ಟದ ಪ್ರವೇಶವನ್ನು ಖಚಿತಪಡಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ. ಇನ್ನೊಂದೆಡೆ ಅಫ್ಗನ್ ತಂಡವೂ ಟೂರ್ನಿಯಲ್ಲಿ ತನ್ನ ಐದನೇ ಜಯವನ್ನು ದಾಖಲಿಸಿ ಸೆಮಿಫೈನಲ್ ಪ್ರವೇಶಿಸುವ ಕನಸು ಕಾಣುತ್ತಿದೆ.

ಇದುವರೆಗೆ ಏಳು ಪಂದ್ಯಗಳನ್ನು ಆಡಿರುವ ಹಷ್ಮತ್‌ವುಲ್ಲಾ ಶಹೀದಿ ಬಳಗವು ಮೂರರಲ್ಲಿ ಸೋತಿದೆ. ಹಾಲಿ ಚಾಂಪಿಯನ್ ಇಂಗ್ಲೆಂಡ್, ಮಾಜಿ ಚಾಂಪಿಯನ್ ತಂಡಗಳಾದ ಪಾಕಿಸ್ತಾನ, ಶ್ರೀಲಂಕಾ ಮತ್ತು ಉದಯೋನ್ಮುಖ ಬಳಗ ನೆದರ್ಲೆಂಡ್ಸ್ ವಿರುದ್ಧ ಗೆದ್ದಿತ್ತು. ಅದರಿಂದಾಗಿ ತಂಡವು ಆತ್ಮವಿಶ್ವಾಸದ ಉತ್ತುಂಗದಲ್ಲಿದೆ.

ಅನುಭವಿ ಸ್ಪಿನ್ನರ್‌ಗಳಾದ ರಶೀದ್ ಖಾನ್, ಮೊಹಮ್ಮದ್ ನಬಿ ಹಾಗೂ ನೂರ್ ಅಹಮದ್ ಅವರು ಪಂದ್ಯ ಗೆಲ್ಲಿಸಿಕೊಡಬಲ್ಲ ಸಮರ್ಥರಾಗಿದ್ದಾರೆ. ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಗೈರುಹಾಜರಿಯಿಂದಾಗಿ ತುಸು ದುರ್ಬಲಗೊಂಡಿರುವ ಆಸ್ಟ್ರೇಲಿಯಾದ ಮಧ್ಯಮ ಕ್ರಮಾಂಕಕ್ಕೆ ಮತ್ತಷ್ಟು ಪೆಟ್ಟು ಕೊಡುವ ಯೋಜನೆಯಲ್ಲಿದ್ದಾರೆ.

ಆದರೆ ಆರಂಭಿಕ ಜೋಡಿ ಡೇವಿಡ್ ವಾರ್ನರ್ ಮತ್ತು ಟ್ರಾವಿಸ್ ಹೆಡ್ ಅವರನ್ನು ಕಟ್ಟಿಹಾಕದೇ ಹೋದರೆ ಅಫ್ಗನ್ ಬೌಲರ್‌ಗಳು 'ದುಬಾರಿ' ಆಗುವುದು ಖಚಿತ. ವಾಂಖೆಡೆ ಕ್ರೀಡಾಂಗಣದ ಪಿಚ್‌ನಲ್ಲಿ ನಡೆದಿರುವ ಈ ಹಿಂದಿನ ಪಂದ್ಯಗಳಲ್ಲಿ ರನ್‌ಗಳು ಹರಿದಿವೆ. ಚಾಣಾಕ್ಷತೆಯಿಂದ ಬೌಲಿಂಗ್ ಮಾಡುವ ಬೌಲರ್‌ಗಳಿಗೂ ಇಲ್ಲಿ ಫಲ ಸಿಗುವ ಸಾಧ್ಯತೆಗಳು ಹೆಚ್ಚಿವೆ.

ಪ್ಯಾಟ್ ಕಮಿನ್ಸ್ ಬಳಗವು ಮೊದಲೆರಡು ಪಂದ್ಯಗಳನ್ನು ಸೋತು ಪುಟಿದೆದ್ದ ರೀತಿ ಅಮೋಘವಾಗಿದೆ. ಸತತ ಐದು ಪಂದ್ಯಗಳನ್ನು ಗೆದ್ದಿದೆ. ವಿಜಯದ ಓಟವನ್ನು ಮುಂದುವರಿಸುವ ಛಲದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್.

ಅಫ್ಗಾನಿಸ್ತಾನ ತಂಡದ ನಾಯಕ ಹಷ್ಮತ್‌ವುಲ್ಲಾ ಶಹೀದಿ

ಆಸ್ಟ್ರೇಲಿಯಾ ತಂಡದ ಮಿಚೆಲ್ ಮಾರ್ಷ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ತಂಡಗಳು

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಜೋಷ್ ಇಂಗ್ಲಿಷ್, ಟ್ರಾವಿಸ್ ಹೆಡ್, ಡೇವಿಡ್ ವಾರ್ನರ್, ಸ್ಟೀವನ್ ಸ್ಮಿತ್, ಮಾರ್ನಸ್ ಲಾಬುಷೇನ್, ಕ್ಯಾಮರಾನ್ ಗ್ರೀನ್, ಮಾರ್ಕಸ್ ಸ್ಟೊಯಿನಿಸ್, ಮಿಚೆಲ್ ಸ್ಟಾರ್ಕ್, ಆ್ಯಡಂ ಜಂಪಾ, ಜೋಷ್ ಹ್ಯಾಜಲ್‌ವುಡ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ಸೀನ್ ಅಬಾಟ್, ಅಲೆಕ್ಸ್ ಕ್ಯಾರಿ

ಅಫ್ಗಾನಿಸ್ತಾನ: ಹಷ್ಮತ್‌ವುಲ್ಲಾ ಶಹೀದಿ (ನಾಯಕ), ಇಕ್ರಂ ಅಲಿಖಿಲ್ (ವಿಕೆಟ್‌ಕೀಪರ್), ರೆಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್, ರೆಹಮತ್ ಶಾ, ಅಜ್ಮತ್‌ವುಲ್ಲಾ ಒಮರ್‌ಝೈ, ಮೊಹಮ್ಮದ್ ನಬಿ, ರಶೀದ್ ಖಾನ್, ಮುಜೀಬ್ ಉರ್ ರೆಹಮಾನ್, ಫಜಲ್‌ಹಕ್ ಫರೂಕಿ, ನೂರ್ ಅಹಮದ್, ನಜೀಬುಲ್ಲಾ ಜದ್ರಾನ್, ನವೀನ್ ಉಲ್ ಹಕ್, ಅಬ್ದುಲ್ ರೆಹಮಾನ್, ರಿಯಾಜ್ ಹಸನ್.

ಶ್ರೀಲಂಕಾ ಕ್ರಿಕೆಟ್ ಮಂಡಳಿ ವಜಾ

ಕೊಲಂಬೊ (ಎಎಫ್‌ಪಿ/ ಪಿಟಿಐ): ಶ್ರೀಲಂಕಾ ಕ್ರೀಡಾ ಸಚಿವ ರೋಶನ್ ರಣಸಿಂಘೆ ಅವರು ಶ್ರೀಲಂಕಾ ಕ್ರಿಕೆಟ್ ಮಂಡಳಿಯನ್ನು ವಜಾಗೊಳಿಸಿದ್ದಾರೆ.

ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಲಂಕಾ ತಂಡದ ಕಳಪೆ ಪ್ರದರ್ಶನದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕುಶಾಲ್ ಮೆಂಡಿಸ್ ಬಳಗ ಆಡಿದ ಎಂಟು ಪಂದ್ಯಗಳಲ್ಲಿ ಆರರಲ್ಲಿ ಸೋತು, ಸೆಮಿಫೈನಲ್ ಪ್ರವೇಶಿಸಲು ವಿಫಲವಾಗಿದೆ.

ಭಾರತದ ಎದುರು 302 ರನ್‌ಗಳಿಂದ ಹೀನಾಯ ಸೋಲು ಅನುಭವಿಸಿದಾಗ, ರೋಶನ್ ಅವರು ಮಂಡಳಿ ವಿರುದ್ಧ ಕಿಡಿಕಾರಿದ್ದರು. ಎಲ್ಲ ಪದಾಧಿಕಾರಿಗಳು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದರು.

ಮಂಡಳಿಯ ಆಡಳಿತವನ್ನು ನೋಡಿಕೊಳ್ಳಲು ಮಾಜಿ ನಾಯಕ ಅರ್ಜುನ ರಣತುಂಗ ನೇತೃತ್ವದ ಏಳು ಸದಸ್ಯರ ಸಮಿತಿಯನ್ನು ನೇಮಿಸಲಾಗಿದೆ ಎಂದು ಕ್ರೀಡಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಶ್ರೀಲಂಕಾ ಕ್ರಿಕೆಟ್ ಮಂಡಳಿಯು ದೇಶದ ಅತ್ಯಂತ ಭ್ರಷ್ಟ ಸಂಸ್ಥೆ ಎಂಬ ಕಳಂಕವನ್ನು ಅಂಟಿಸಿಕೊಂಡಿದೆ. ಅದನ್ನು ತೊಡೆದುಹಾಕುವುದು ನನ್ನ ಗುರಿ' ಎಂದು ರಣತುಂಗ ಹೇಳಿದ್ದಾರೆ.

ಮುಷ್ತಾಕ್ ಅಲಿ ಟಿ20 ಕ್ರಿಕೆಟ್: ಪಂಜಾಬ್ ಮಡಿಲಿಗೆ ಚೊಚ್ಚಲ ಪ್ರಶಸ್ತಿ

ಮೊಹಾಲಿ (ಪಿಟಿಐ): ಅನ್ಮೋಲ್‌ಪ್ರೀತ್ ಸಿಂಗ್ ಅವರ ಶತಕ ಹಾಗೂ ಎಡಗೈ ವೇಗಿ ಅರ್ಷದೀಪ್ ಸಿಂಗ್ (23ಕ್ಕೆ 4) ಅಮೋಘ ಬೌಲಿಂಗ್‌ನಿಂದ ಪಂಜಾಬ್ ತಂಡವು ಇದೇ ಮೊದಲ ಬಾರಿಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟ್ರೋಫಿ ಗೆದ್ದುಕೊಂಡಿತು.

ಸೋಮವಾರ ಇಲ್ಲಿ ನಡೆದ ಫೈನಲ್‌ನಲ್ಲಿ ಪಂಜಾಬ್ ತಂಡವು 20 ರನ್‌ಗಳಿಂದ ಬರೋಡಾ ತಂಡವನ್ನು ಪರಾಭವಗೊಳಿಸಿತು.

ಟಾಸ್ ಗೆದ್ದ ಬರೋಡಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನ್ಮೋಲ್‌ಪ್ರೀತ್ ಸಿಂಗ್ ಮಿಂಚಿನ ಶತಕ (113; 61ಎಸೆತ) ದಾಖಲಿಸಿದರು. 10 ಬೌಂಡರಿ ಮತ್ತು ಆರು ಸಿಕ್ಸರ್‌ಗಳನ್ನು ಅವರು ಸಿಡಿಸಿದರು. ನೆಹಲ್ ವಡೇರಾ (ಔಟಾಗದೆ 61; 27ಎ, 4X6, 6X4) ಕೂಡ ಅರ್ಧಶತಕದ ಕಾಣಿಕೆ ನೀಡಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 223 ರನ್ ಗಳಿಸಿತು.

ಸವಾಲಿನ ಮೊತ್ತ ಬೆನ್ನಟ್ಟಿದ ಬರೋಡಾ ತಂಡಕ್ಕೆ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 203 ರನ್ ಗಳಿಸಲಷ್ಟೇ ಸಾಧ್ಯವಾಯಿತು. ತಂಡದ ಬ್ಯಾಟರ್ ಅಭಿಮನ್ಯು ಸಿಂಗ್ (61; 42ಎ, 4X3, 6X4) ಅರ್ಧಶತಕ ಗಳಿಸಿದರು.

ಅರ್ಷದೀಪ್ ಸಿಂಗ್

ಸಂಕ್ಷಿಪ್ತ ಸ್ಕೋರು: ಪಂಜಾಬ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 223 (ಅನ್ಮೋಲ್‌ಪ್ರೀತ್ ಸಿಂಗ್ 113, ಮನದೀಪ್ ಸಿಂಗ್ 32, ನೆಹಲ್ ವಡೇರಾ ಔಟಾಗದೆ 61, ಸೊಯೆಬ್ ಸೊಪಾರಿಯೊ 43ಕ್ಕೆ1, ಕೃಣಾಲ್ ಪಾಂಡ್ಯ 30ಕ್ಕೆ1, ಅತಿಥ್ ಶೇಟ್ 56ಕ್ಕೆ1) ಬರೋಡಾ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 203 (ನಿನಾದ್ ರಥ್ವಾ 47, ಅಭಿಮನ್ಯು ಸಿಂಗ್ 61, ಕೃಣಾಲ್ ಪಾಂಡ್ಯ 45, ವಿಷ್ಣು ಸೋಳಂಕಿ 28, ಅರ್ಷದೀಪ್ ಸಿಂಗ್ 23ಕ್ಕೆ4, ಸಿದ್ಧಾರ್ಥ್ ಕೌಲ್ 53ಕ್ಕೆ1) ಫಲಿತಾಂಶ: ಪಂಜಾಬ್ ತಂಡಕ್ಕೆ 20 ರನ್‌ಗಳ ಜಯ. ಪಂದ್ಯಶ್ರೇಷ್ಠ: ಅನ್ಮೋಲ್‌ಪ್ರೀತ್ ಸಿಂಗ್, ಸರಣಿಶ್ರೇಷ್ಠ: ಅಭಿಷೇಕ್ ಶರ್ಮಾ.

ನಗರ ಸುತ್ತುವರಿದ ಸೇನೆಯಿಂದ ಟ್ಯಾಂಕರ್‌ಗಳ ನಿಯೋಜನೆ

ಗಾಜಾ: 'ಆಕ್ರಮಣ'ಕ್ಕೆ ಇಸ್ರೇಲ್ ಸನ್ನದ್ಧ

ದೇರ್ ಅಲ್-ಬಾಲಾಹ್, ಗಾಜಾ ಪಟ್ಟಿ (ಎ.ಪಿ): ಇಸ್ರೇಲ್‌ನ ಪಡೆಗಳು ಗಾಜಾ ನಗರವನ್ನು ಸುತ್ತುವರಿದಿದ್ದು, ಹಮಾಸ್ ನಿಯಂತ್ರಣದಲ್ಲಿರುವ ಪ್ರಾಂತ್ಯದ ದೂರಸಂಪರ್ಕ ಬಹುತೇಕ ಕಡಿತಗೊಂಡಿದೆ.

ಮಂಗಳವಾರ ಈ ಪಡೆಗಳು ಗಾಜಾ ನಗರ ಪ್ರವೇಶಿಸುವ ಸಾಧ್ಯತೆಗಳಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಹಮಾಸ್ ಪ್ರತ್ಯೇಕತಾವಾದಿಗಳು ಗಾಜಾಪಟ್ಟಿಯಲ್ಲಿ ಅಡಗುತಾಣವಾಗಿ ಸುರಂಗಜಾಲ ನಿರ್ಮಿಸಿಕೊಂಡಿದ್ದು, ಹೋರಾಟ ಮಾಡಲು ವರ್ಷಗಳಿಂದ ಸನ್ನದ್ಧರಾಗಿದ್ದಾರೆ. ಹೀಗಾಗಿ, ಬರುವ ದಿನಗಳಲ್ಲಿ ಉಭಯ ಕಡೆಗಳಲ್ಲಿ ಸಾವು–ನೋವುಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುವ ಸಾಧ್ಯತೆಗಳಿವೆ ವರದಿಗಳು ತಿಳಿಸಿವೆ.

ಯುದ್ಧ ಆರಂಭವಾದ ಬಳಿಕ ಈವರೆಗೆ 10 ಸಾವಿರ ಪ್ಯಾಲೆಸ್ಟೀನಿಯರು ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ತಿಳಿಸಿದೆ. ಸೇನೆ ಸುತ್ತುವರಿದಂತೆ ಗಾಜಾಗೆ ಭಾನುವಾರ ದೂರಸಂಪರ್ಕ ವ್ಯವಸ್ಥೆಗಳು ಸ್ಥಗಿತವಾಗಿದ್ದವು. ಸೋಮವಾರ ಬೆಳಿಗ್ಗೆ ಮತ್ತೆ ಮರುಸ್ಥಾಪಿಸಲಾಯಿತು ಎಂದು ವರದಿ ತಿಳಿಸಿದೆ.

15 ಲಕ್ಷ ಪ್ಯಾಲೆಸ್ಟೀನಿಯರು ಅಥವಾ ಶೇ 70ರಷ್ಟು ನಿವಾಸಿಗಳು ನಗರವನ್ನು ತೊರೆದಿದ್ದಾರೆ. ಯುದ್ಧದ ಪರಿಣಾಮ ನಗರದಲ್ಲಿ ಉಳಿದಿರುವ ನಿವಾಸಿಗಳು ಈಗ ಆಹಾರ, ಔಷಧ, ಇಂಧನ ಮತ್ತು ನೀರಿನ ಸಮಸ್ಯೆ ಎದುರಿಸುತ್ತಿದ್ದಾರೆ. ದಾಳಿ ಭೀತಿಯಿಂದಾಗಿ ಹಲವರು ರಸ್ತೆಗಳಲ್ಲಿಯೇ ರಾತ್ರಿ ಕಳೆಯುತ್ತಿದ್ದಾರೆ.

ಮಾನವೀಯ ಆಧಾರದಲ್ಲಿ ನಿವಾಸಿಗಳಿಗೆ ನೆರವು ಒದಗಿಸಲು ಕದನ ವಿರಾಮ ಘೋಷಿಸಬೇಕು ಎಂಬ ಜೋರ್ಡಾನ್, ಈಜಿಪ್ಟ್, ವಿಶ್ವಸಂಸ್ಥೆಯ ಮನವಿಯನ್ನು ಇಸ್ರೇಲ್ ತಿರಸ್ಕರಿಸಿದೆ.

ಗಾಜಾದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ನಗರದ ದಕ್ಷಿಣದತ್ತ ವಲಸೆಹೋಗಬೇಕು ಎಂಬ ಸೂಚನೆಯಂತೆ ಸುಮಾರು 8 ಲಕ್ಷ ಜನ ತೆರಳಿದ್ದಾರೆ. ಸುರಕ್ಷಿತ ಎಂದು ಭಾವಿಸಿದ್ದ ನಗರದ ದಕ್ಷಿಣ, ಕೇಂದ್ರ ಭಾಗದಲ್ಲೂ ಇಸ್ರೇಲ್ ದಾಳಿ ಆರಂಭಿಸಿದೆ.

ಗಾಜಾದ ಉತ್ತರ–ದಕ್ಷಿಣ ಭಾಗದ ಮುಖ್ಯ ಹೆದ್ದಾರಿಯಲ್ಲಿ ಸುಮಾರು 2 ಸಾವಿರ ಜನರು ಸೇರಿದ್ದಾರೆ. ನಗರದಲ್ಲಿರುವವರು ಸುರಕ್ಷತೆಗೆ ಈ ಭಾಗದತ್ತ ತೆರಳಲು ಸೇನೆ ಭಾನುವಾರ ಸಮಯಾವಕಾಶ ನೀಡಿತ್ತು.

'ಇಸ್ರೇಲ್ ಸೇನೆ ಎದುರು ಹಾದುಹೋಗುವಾಗ ಎರಡು ಕೈಗಳನ್ನು ಎತ್ತಿದ ಸ್ಥಿತಿಯಲ್ಲಿ 500 ಮೀಟರ್ ನಡೆದು ಬಂದೆ. ರಸ್ತೆಯುದ್ದಕ್ಕೂ ಶವಗಳು ಬಿದ್ದಿದ್ದವು. ಮಕ್ಕಳು ಮೊದಲ ಬಾರಿಗೆ ಯುದ್ಧ ಟ್ಯಾಂಕರ್ ನೋಡಿದರು. ಜಗತ್ತೇ, ನಮ್ಮೆಡೆ ಸ್ವಲ್ಪ ಅನುಕಂಪ ಇರಲಿ' ಎಂದು ಪ್ಯಾಲೆಸ್ಟೀನಿಯರೊಬ್ಬರು ಪರಿಸ್ಥಿತಿಯನ್ನು ವಿವರಿಸಿದರು.

ಇಸ್ರೇಲ್‌ನ ವಾಯುದಾಳಿಯಿಂದಾಗಿ ನೆಲಸಮಗೊಂಡಿರುವ ನಿರಾಶ್ರಿತರ ಶಿಬಿರವಾಗಿದ್ದ ಕಟ್ಟಡದ ಅವಶೇಷದ ಬಳಿ ಪ್ಯಾಲೆಸ್ಟೀನ್ ನಾಗರಿಕನ ಆಕ್ರಂದನ –ಎಎಫ್‌ಪಿ ಚಿತ್ರ

'ನಿರ್ಣಾಯಕ ಹಂತಕ್ಕೆ ಯುದ್ಧ'

ಜೆರುಸಲೇಂ (ರಾಯಿಟರ್ಸ್): 'ಗಾಜಾವನ್ನು ದಕ್ಷಿಣ ಭಾಗದಿಂದ ಪ್ರವೇಶಿಸುತ್ತಿದ್ದೇವೆ. ಯುದ್ಧ ನಿರ್ಣಾಯಕ ಹಂತಕ್ಕೆ ಬಂದಿದೆ. ಜನತೆ ದಕ್ಷಿಣದತ್ತ ಹೋಗುವ ಹಾದಿ ಮುಕ್ತವಾಗಿದೆ' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಹಮಾಸ್ ಬಂಡುಕೋರರ ವಿರುದ್ಧ ಅವರ ಸುರಂಗಮಾರ್ಗಗಳು, ಬಂಕರ್‌ಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಸೇನೆ ಸಜ್ಜಾಗಿದೆ ಎಂದು ಸೇನೆಯ ವಕ್ತಾರ ಲೆಫ್ಟಿನಂಟ್ ಕರ್ನಲ್ ರಿಚರ್ಡ್ ಹೆಟ್ ತಿಳಿಸಿದ್ದಾರೆ.

ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್: ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ

ವಿದಿತ್ ಗುಜರಾತಿ, ವೈಶಾಲಿಗೆ ಪ್ರಶಸ್ತಿ

ಐಲ್ ಆಫ್ ಮ್ಯಾನ್ (ಪಿಟಿಐ): ಆರ್. ವೈಶಾಲಿ ಮತ್ತು ವಿದಿತ್ ಗುಜರಾತಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಓಪನ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಆ ಮೂಲಕ ಭಾರತ 'ಅಪರೂಪದ ಡಬಲ್' ಪ್ರಶಸ್ತಿ ಗೌರವಕ್ಕೆ ಪಾತ್ರವಾಯಿತು. ಇಬ್ಬರೂ ಮುಂದಿನ ವರ್ಷ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದರು.

ಕೆನಡಾದ ಟೋರಾಂಟೊದಲ್ಲಿ ಏ.2 ರಿಂದ 25ರ ವರೆಗೆ ಕ್ಯಾಂಡಿಡೇಟ್ಸ್ ಟೂರ್ನಿ ನಡೆಯಲಿದ್ದು, ವಿಜೇತರಾಗುವ ಆಟಗಾರ, ವಿಶ್ವ ಚಾಂಪಿಯನ್‌ಗೆ ಸವಾಲು ಹಾಕುವ ಅರ್ಹತೆ ಪಡೆಯುತ್ತಾರೆ.

ಈ ಟೂರ್ನಿಯಲ್ಲಿ ಅಮೋಘ ಪ್ರದರ್ಶನ ನೀಡಿರುವ ವೈಶಾಲಿ ಭಾನುವಾರ ರಾತ್ರಿ ನಡೆದ ಅಂತಿಮ (11ನೇ) ಸುತ್ತಿನಲ್ಲಿ ಮಂಗೋಲಿಯಾದ ಬಟ್ಖುಯಾಗ್ ಮುಂಗುತೂಲ್ ಅವರನ್ನು ಸೋಲಿಸಿದರು. ವಿದಿತ್ ಓಪನ್ ವಿಭಾಗದ ಅಂತಿಮ (11ನೇ) ಸುತ್ತಿನಲ್ಲಿ ಸರ್ಬಿಯಾದ ಅಲೆಕ್ಸಾಂಡರ್ ಪ್ರೆಡ್ಕೆ ಅವರನ್ನು ಸೋಲಿಸಿ ಏಳನೇ ಜಯ ದಾಖಲಿಸಿ ಅಗ್ರಸ್ಥಾನಕ್ಕೇರಿದರು. ಇಬ್ಬರೂ ತಮ್ಮ ವಿಭಾಗಗಳಲ್ಲಿ ತಲಾ 8.5 ಪಾಯಿಂಟ್ಸ್ ಸಂಗ್ರಹಿಸಿದರು. ಇದು ಎರಡನೇ ಸ್ಥಾನದಲ್ಲಿರುವ ಸ್ಪರ್ಧಿಗಳಿಗಿಂತ ಅರ್ಧ ಪಾಯಿಂಟ್ ಹೆಚ್ಚು.

ವೈಶಾಲಿ ಪ್ರಶಸ್ತಿ ಜೊತೆಗೆ ಸುಮಾರು ₹20 ಲಕ್ಷ ಬಹುಮಾನ ಪಡೆದರೆ, ವಿದಿತ್ ₹66 ಲಕ್ಷ ನಗದು ಮೊತ್ತವನ್ನು ಬಹುಮಾನವಾಗಿ ಜೇಬಿಗಿಳಿಸಿದರು.

ಆರ್.ವೈಶಾಲಿ ಮತ್ತು ವಿದಿತ್ ಗುಜರಾತಿ –ಫಿಡೆ ಎಕ್ಸ್ ಚಿತ್ರ

ಮಹಿಳೆಯರ ವಿಭಾಗದಲ್ಲಿ ಉಕ್ರೇನ್‌ನ ಅನ್ನಾ ಮುಝಿಚುಕ್ ಎರಡನೇ ಸ್ಥಾನ ಪಡೆದರು. ಅವರು ಅಂತಿಮ ಸುತ್ತಿನಲ್ಲಿ ಸ್ವೀಡನ್‌ನ ಅನುಭವಿ ಪಿಯಾ ಕ್ರಾಮ್ಲಿಂಗ್ ಅವರನ್ನು ಮಣಿಸಿದರು. ಮೂರನೇ ಸ್ಥಾನ ಪಡೆದ ಚೀನಾದ ತಾನ್ ಝೊಂಗ್‌ಇ ಕೂಡ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಸಂಪಾದಿಸಿದರು. ಮುಝಿಚುಕ್ ವಿಶ್ವಕಪ್ ಗೆಲುವಿನ ಮೂಲಕ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದ ಕಾರಣ ತಾನ್‌ಗೆ ಇಲ್ಲಿ ಅವಕಾಶ ದೊರೆಯಿತು.

ಪುರುಷರ ವಿಭಾಗದ 'ಟಾಪ್ ಬೋರ್ಡ್'ನಲ್ಲಿ ಕಪ್ಪು ಕಾಯಿಗಳಲ್ಲಿ ಆಡಿದ ಹಿಕಾರು ನಕಾಮುರಾ (8 ಪಾಯಿಂಟ್ಸ್), ಭಾರತದ ಅರ್ಜುನ್ ಇರಿಗೇಶಿ (7.5) ವಿರುದ್ಧ ಡ್ರಾ ಮಾಡಿಕೊಂಡರು. ಅಮೆರಿಕದ ನಕಾಮುರಾ ಎರಡನೇ ಸ್ಥಾನ ಪಡೆದರೆ, ಅರ್ಜುನ್ ನಾಲ್ಕನೇ ಸ್ಥಾನ ಪಡೆದರು. ರಷ್ಯದ ಆ್ಯಂಡ್ರಿ ಇಸಿಪೆಂಕೊ (7.5) ಮೂರನೇ ಸ್ಥಾನ ಗಳಿಸಿದರು. ಡಚ್ ಗ್ರ್ಯಾಂಡ್‌ಮಾಸ್ಟರ್ ಅನೀಶ್ ಗಿರಿ (7.5) ಅವರು ಕೊನೆಯ ಸುತ್ತಿನಲ್ಲಿ ಇಸಿಪೆಂಕೊ ಅವರನ್ನು ಸೋಲಿಸಿದರು. ಅರವಿಂದ್ ಚಿದಂಬರಂ 30ನೇ ಮತ್ತು ಎಸ್.ಎಲ್.ನಾರಾಯಣನ್ 32ನೇ ಸ್ಥಾನ ಗಳಿಸಿದರು. ನಿಹಾಲ್ ಸರಿನ್ 45ನೇ ಸ್ಥಾನ ಗಳಿಸಿದರು.

ರಮೇಶ್ ಬಾಬು ಸಂತಸ

ಬೆಂಗಳೂರು: ಚೆನ್ನೈನ ಬ್ಯಾಂಕ್ ಉದ್ಯೋಗಿ ರಮೇಶ್ ಬಾಬು ಅವರ ಇಬ್ಬರು ಮಕ್ಕಳು – ಪ್ರಜ್ಞಾನಂದ ಮತ್ತು ವೈಶಾಲಿ– ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದಿದ್ದಾರೆ. ಅಕ್ಕ–ತಮ್ಮ ಇಂಥ ದೊಡ್ಡ ಟೂರ್ನಿಯಲ್ಲಿ ಆಡಲು ಅರ್ಹತೆ ಪಡೆದಿದ್ದು ಇದೇ ಮೊದಲು. ಸಹಜವಾಗಿ ಅವರ ಸಂಭ್ರಮ ಹೇಳತೀರದಾಗಿತ್ತು.

ಕಳೆದ ಆಗಸ್ಟ್‌ನಲ್ಲಿ ವಿಶ್ವಕಪ್ ರನ್ನರ್ ಅಪ್ ಆದಾಗಲೇ 'ಪ್ರಗ್ಗು' ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದಿದ್ದರು.

'ವೈಶಾಲಿ ಚಾಂಪಿಯನ್ ಆಗುವ ನಿರೀಕ್ಷೆ ಹೊಂದಿರಲಿಲ್ಲ. ಆದರೆ ತುಂಬಾ ಶ್ರಮ ಹಾಕಿದ್ದಳು. ತುಂಬಾ ಚೆನ್ನಾಗಿಯೂ ಆಡಿದಳು' ಎಂದು ರಮೇಶ್ ಬಾಬು ಚೆನ್ನೈನಿಂದ ದೂರವಾಣಿ ಮೂಲಕ 'ಪ್ರಜಾವಾಣಿ'ಗೆ ತಿಳಿಸಿದರು.

'ಕ್ಯಾಂಡಿಡೇಟ್ಸ್ ಟೂರ್ನಿಯ ಮೊದಲು ಯಾವುದೇ ಯೋಜನೆ ಹಾಕಿಕೊಂಡಿಲ್ಲ. ಮಕ್ಕಳಿಬ್ಬರೂ ಬಂದ ಮೇಲೆ ಆ ಬಗ್ಗೆ ಯೋಜನೆ ರೂಪಿಸುತ್ತೇವೆ' ಎಂದರು.

ಚಿನ್ನ ಗೆದ್ದು ಸಾಮರ್ಥ್ಯ ಸಾಬೀತುಪಡಿಸಿದ್ದೇವೆ: ಸವಿತಾ

ನವದೆಹಲಿ (ಪಿಟಿಐ): 'ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಚಿನ್ನ ಗೆದ್ದು ನಮ್ಮ ಸಾಮರ್ಥ್ಯ ಏನೆಂಬುದನ್ನು ಸಾಬೀತುಪಡಿಸಲು ಆಗಿರುವುದು ಸಂತಸ ಉಂಟುಮಾಡಿದೆ' ಎಂದು ಭಾರತ ಮಹಿಳಾ ಹಾಕಿ ತಂಡದ ನಾಯಕಿ ಸವಿತಾ ಪೂನಿಯಾ ಹೇಳಿದ್ದಾರೆ.

'ಸ್ಪಷ್ಟ ಗುರಿಯೊಂದಿಗೆ ಈ ಟೂರ್ನಿಯಲ್ಲಿ ಆಡಲಿಳಿದಿದ್ದೆವು. ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆಲ್ಲಲು ಸಾಧ್ಯವಾಗಿರಲಿಲ್ಲ. ಆ ನಿರಾಸೆಯಿಂದ ಹೊರಬರಲು ಚಾಂಪಿಯನ್ಸ್ ಟ್ರೋಫಿಯಲ್ಲಿ ಚಿನ್ನ ಗೆಲ್ಲಲೇಬೇಕಿತ್ತು. ಅದರಲ್ಲಿ ಯಶಸ್ವಿಯಾಗಿದ್ದೇವೆ' ಎಂದಿದ್ದಾರೆ.

ಭಾನುವಾರ ರಾಂಚಿಯಲ್ಲಿ ನಡೆದ ಫೈನಲ್‌ನಲ್ಲಿ ಭಾರತ ತಂಡ 4–0 ಗೋಲುಗಳಿಂದ ಜಪಾನ್ ತಂಡವನ್ನು ಮಣಿಸಿ ಚಾಂಪಿಯನ್ ಆಗಿತ್ತು. ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಸೆಮಿಫೈನಲ್‌ನಲ್ಲಿ ಸೋತಿದ್ದ ಭಾರತ, ಕಂಚಿನ ಪದಕ ಜಯಿಸಿತ್ತು.

'ಎಫ್‌ಐಎಚ್ ಹಾಕಿ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವುದು ನಮ್ಮ ಮುಂದಿನ ಗುರಿ. ಆ ಟೂರ್ನಿಗೆ ಸಜ್ಜಾಗಲು ಸಾಕಷ್ಟು ಸಮಯಾವಕಾಶ ಇದೆ' ಎಂದರು.

'ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಸಾಮರ್ಥ್ಯವನ್ನು ನಮ್ಮ ತಂಡ ಹೊಂದಿದೆ. ಈ ಟೂರ್ನಿಯಲ್ಲಿ ತೋರಿದ ಪ್ರದರ್ಶನವನ್ನು ಎರಡು ತಿಂಗಳ ಬಳಿಕ ನಡೆಯಲಿರುವ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಲ್ಲೂ ತೋರಬೇಕು' ಎಂದು ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ಹೇಳಿದ್ದಾರೆ.

ಸವಿತಾ ಪೂನಿಯಾ

ಪ್ರಾಥಮಿಕ, ಪ್ರೌಢಶಾಲೆ ವಿದ್ಯಾರ್ಥಿಗಳ ರಾಜ್ಯಮಟ್ಟದ ಜಿಮ್ನಾಸ್ಟಿಕ್ಸ್

ಸಂಕೇತ್, ವೈಷ್ಣವಿ, ಅಮೃತಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಧಾರವಾಡ: ಧಾರವಾಡದ ಸಂಕೇತ್ ಮಾನೆ ಮತ್ತು ಬೆಂಗಳೂರು ದಕ್ಷಿಣದ ವೈಷ್ಣವಿ ಆಚಾರ್ಯ ಅವರು, ಸೋಮವಾರ ಇಲ್ಲಿ ಆರಂಭವಾದ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳ ರಾಜ್ಯಮಟ್ಟದ ಜಿಮ್ನಾಸ್ಟಿಕ್ ಸ್ಪರ್ಧೆಯ 14 ವರ್ಷದೊಳಗಿನ ಆಲ್‌ರೌಂಡರ್ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಗಳಿಸಿದರು.

ಧಾರವಾಡದ ಅಮೃತಾ ಕುರ್ಲಿ, ರಿದಮ್ಯಾಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊಹೊಮ್ಮಿದರು.

ಬಾಲಕರ ಅಲ್‌ರೌಂಡರ್ ಚಾಂಪಿಯನ್ ವಿಭಾಗದಲ್ಲಿ ಬೆಂಗಳೂರು ದಕ್ಷಿಣದ ಎಸ್.ಕೆ.ಅನೀಶ್ ದ್ವಿತೀಯ ಮತ್ತು ಮುರುಳಿ ತೃತೀಯ ಸ್ಥಾನ ಪಡೆದರು. ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ದಕ್ಷಿಣದ ಚಿರಣ್ಮಯಿ ದ್ವಿತೀಯ ಮತ್ತು ತುಮಕೂರಿನ ಜನನಿ ಎಸ್. ತೃತೀಯ ಸ್ಥಾನ ಗಳಿಸಿದರು.

ರಿದಮ್ಯಾಟಿಕ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯ ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ದಕ್ಷಿಣದ ಗ್ರೀಷ್ಮಾ ಎಂ. ಎರಡನೇ ಹಾಗೂ ಧಾರವಾಡದ ರಮ್ಯಾ ನಾರಗುಂಡ್ಕರ್ ಮೂರನೇ ಸ್ಥಾನ ಪಡೆದರು.

ಧಾರವಾಡದ ಕಿಲ್ಲಾ ಬಾಲ ಮಾರುತಿ ಸಂಸ್ಥೆಯಲ್ಲಿ ಸೋಮವಾರ ನಡೆದ ರಾಜ್ಯಮಟ್ಟದ ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಬಾಲಕಿಯೊಬ್ಬರು ಕಸರತ್ತು ಪ್ರದರ್ಶಿಸಿದರು

ವಿವಿಧ ವಿಭಾಗಗಳ ಫಲಿತಾಂಶ ಇಂತಿದೆ:

ಬಾಲಕರ ವಿಭಾಗ: ಫ್ಲೋರ್ ಎಕ್ಸರ್‌ಸೈಸ್: ಸಂಕೇತ ಮಾನೆ –1, ಅನೀಶ್ ಎಸ್.ಕೆ ಹಾಗೂ–2 ಬೆಂಗಳೂರು ದಕ್ಷಿಣದ ಭರ್ಗ ಜಿ. –3; ಪೊಮೆಲ್ ಹಾರ್ಸ್: ಅನೀಶ್ ಎಸ್.ಕೆ –1 ಮುರುಳಿ –2, ಸಂಕೇತ್ ಮಾನೆ –3; ಸ್ಟಿಲ್ ರಿಂಗ್ಸ್: ಸಂಕೇತ್ ಮಾನೆ –1, ಅನೀಶ್ ಎಸ್.ಕೆ. –2, ವಿನಾಯಕ್ ಭಂಡನ್ಕರ್ (ತುಮಕೂರು)–3, ಟೇಬಲ್ ವಾಲ್ಟ್: ಅನೀಶ್ ಎಸ್.ಕೆ –1, ಮೈಸೂರಿನ ಅರ್ಪಿತ್ ಕೆ. –2 ಹಾಗೂ ಸಂಕೇತ್ ಮಾನೆ –3; ಪ್ಯಾರಲಲ್ ಬಾರ್ಸ್: ಸಮಿರುಲ್ (ಬೆಂಗಳೂರು ದಕ್ಷಿಣ)–1, ಅರ್ಪಿತ್ ಕೆ. –2, ಅನೀಶ್ ಎಸ್.ಕೆ –3; ಹಾರಿಜಾಂಟಲ್ ಬಾರ್ಸ್: ಸಂಕೇತ್ ಮಾನೆ –1, ಅನೀಶ್ ಎಸ್.ಕೆ –2 , ಮುರುಳಿ –3

ಬಾಲಕಿಯರ ವಿಭಾಗ: ಟೇಬಲ್ ವಾಲ್ಟ್: ಚಿರಣ್ಮಯಿ ಎಂ.–1, ಜನನಿ ಎಸ್. –2, ವೈಷ್ಣವಿ ಆಚಾರ್ಯ –3; ಅನ್‌ಇವನ್ ಬಾರ್ಸ್: ಚಿರಣ್ಮಯಿ ಎಂ.–1, ವೈಷ್ಣವಿ ಆಚಾರ್ಯ –2 ಹಾಗೂ ಎಸ್.ಜನನಿ –3; ಬೀಮ್ ವಿಭಾಗ: ವೈಷ್ಣವಿ ಆಚಾರ್ಯ –1 ಜನನಿ ಎಸ್. –2, ಗುಣಪ್ರಿಯಾ ಬಿ.ಎಂ (ತುಮಕೂರು)–3; ಫ್ಲೋರ್ ಎಕ್ಸರ್‌ಸೈಸ್: ವೈಷ್ಣವಿ ಆಚಾರ್ಯ –1, ಚಿರಣ್ಮಯಿ ಎಂ. –2 ಹಾಗೂ ಹಾಸನದ ಸಮಂತಾ –3;

ರಿದಮ್ಯಾಟಿಕ್ ಸ್ಪರ್ಧೆ: ರಿಬ್ಬನ್ ವಿಭಾಗ: ಅಮೃತಾ ಕುರ್ಲಿ –1, ಗ್ರೀಷ್ಮಾ ಎಂ.–2, ರಮ್ಯಾ ನಾರಗುಂಡ್ಕರ್ –3; ಬಾಲ್: ಅಮೃತಾ ಕುರ್ಲಿ –1, ಗ್ರೀಷ್ಮಾ ಎಂ. –2, ಕೀರ್ತನಾ ಟಿ.ಎನ್. (ತುಮಕೂರು)–3, ಹೂಪ್: ಅಮೃತಾ ಕುರ್ಲಿ –2, ಗ್ರೀಷ್ಮಾ ಎಂ.(ದ್ವಿ) ನಿಸರ್ಗಾ ಮುಂದಿನಮನಿ (ಧಾರವಾಡ)–3; ಕ್ಲಬ್ಸ್: ಅಮೃತಾ ಕುರ್ಲಿ –1, ಗ್ರೀಷ್ಮಾ ಎಂ. –2, ರಮ್ಯಾ ನಾರಗುಂಡ್ಕರ್ –3.

ಕಿಲ್ಲಾ ಬಾಲ ಮಾರುತಿ ಸಂಸ್ಥೆಯಲ್ಲಿ ಮಂಗಳವಾರ 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದ ಸ್ಪರ್ಧೆಗಳು ನಡೆಯಲಿವೆ.

ಕುಸ್ತಿ: ಎರಡನೇ ಸುತ್ತಿಗೆ ಉಮೇಶ

ಹಳಿಯಾಳ (ಉತ್ತರ ಕನ್ನಡ): ಇಲ್ಲಿನ ಕುಸ್ತಿ ಅಖಾಡ ಸೋಮವಾರ ಇದೇ ಮೊದಲ ಬಾರಿಗೆ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ಎರಡು ದಿನಗಳ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಗೆ ವೇದಿಕೆ ಒದಗಿಸಿತು. ಬಿರುಸಿನ ಸ್ಪರ್ಧೆಗಳ ನಡುವೆ ರಭಸದ ಮಳೆ ಕೊಂಚ ಅಡ್ಡಿ ಉಂಟು ಮಾಡಿತು. ಆದರೆ, ಕುಸ್ತಿಪಟುಗಳ ಉತ್ಸಾಹ ಕುಂದಲಿಲ್ಲ.

ಬೆಳಗಾವಿಯ ಉಮೇಶ ಶಿರಗುಪ್ಪಿ ಮತ್ತು ಬಾಗಲಕೋಟೆಯ ಮಲ್ಲು ಎಲ್.ಶೆಟ್ಟಿ ನಡುವೆ ನಡೆದ ಮೊದಲ ಪಂದ್ಯದಲ್ಲಿ ಉಮೇಶ ಅವರು ಮಲ್ಲು ಅವರನ್ನು 9.1 ಅಂಕದಿಂದ ಸೋಲಿಸಿ, ಎರಡನೇ ಸುತ್ತಿಗೆ ಪ್ರವೇಶಿಸಿದರು.

ಬಾಲಕಿಯರ ವಿಭಾಗದ ಆರಂಭಿಕ ಪಂದ್ಯವು ಶ್ವೇತಾ ಅಣ್ಣಿಗೇರಿ ಮತ್ತು ಶಿವಮೊಗ್ಗದ ಕಾವ್ಯ ನಡುವೆ ನಡೆಯಿತು. ಶ್ವೇತಾ ಅಣ್ಣಿಗೇರಿ ಚಿತ್ ಆಧಾರದ ಮೇಲೆ ಕಾವ್ಯ ಅವರನ್ನು ಸೋಲಿಸಿ ಎರಡನೇ ಸುತ್ತಿಗೆ ಸಾಗಿದರು.

ಮಳೆ ಕಾರಣ ಮಧ್ಯಾಹ್ನ ಎರಡೂವರೆ ಗಂಟೆ ಪಂದ್ಯ ಸ್ಥಗಿತಗೊಳಿಸಲಾಗಿತ್ತು. ಅಖಾಡಕ್ಕೆ ಅಳವಡಿಸಲಾಗಿದ್ದ ಪೆಂಡಾಲ್ ತೊಯ್ದು, ನೀರು ಸೋರುತ್ತಿದ್ದ ಕಾರಣ ಕುಸ್ತಿಪಟುಗಳಿಗೆ ತೊಂದರೆಯಾಯಿತು. ಸಂಜೆ ಪಂದ್ಯಗಳು ಪುನರಾರಂಭಗೊಂಡವು.

ಆಕಾಶ ಎಸ್ ಉಡುಪಿ (ಕೆಂಪು ಪಟ್ಟಿ) ಹಾಗೂ ಇಫ್ತಿಹಾರ್ ಮುಲ್ಲಾ (ನೀಲಿ ಪಟ್ಟಿ) ನಡುವೆ ನಡೆದ ಕುಸ್ತಿಯ ದೃಶ್ಯ

ಕಿಕ್‌ಸ್ಟಾರ್ಟ್ ಎಫ್‌ಸಿಗೆ ಗೆಲುವು

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಬಿಡಿಎಫ್‌ಎ ಆಶ್ರಯದ ರಾಜ್ಯ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5–2 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿದರು.

ಸೋಮವಾರ ನಡೆದ ಪಂದ್ಯದಲ್ಲಿ ತಲಾ ಎರಡು ಗೋಲುಗಳನ್ನು ಗಳಿಸಿದ ಅಲಿಸ್ಟರ್ ಆಂಥೋಣಿ (42 ಮತ್ತು 72ನೇ ನಿ.) ಹಾಗೂ ಅಭಿಷೇಕ್ ಶಂಕರ್ (45 + 1 ಮತ್ತು 55) ಅವರು ಕಿಕ್‌ಸ್ಟಾರ್ಟ್ ಗೆಲುವಿನಲ್ಲಿ ಗಮನ ಸೆಳೆದರು. ಇನ್ನೊಂದು ಗೋಲನ್ನು ರಾಜೇಂದ್ರ ಸಿಂಗ್ (59) ತಂದಿತ್ತರು.

ಯಂಗ್ ಚಾಲೆಂಜರ್ಸ್ ಪರ ದೇವರಾಜ್ (10) ಹಾಗೂ ಝುಬೀತ್ ಡೌಸೆಲ್ (20) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಎಂಇಜಿ 2–1 ಗೋಲುಗಳಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬ್ಯಾಸ್ಕೆಟ್‌ಬಾಲ್: ಎಸ್‌ಎಐ ಧಾರವಾಡಕ್ಕೆ ಜಯ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಎಸ್‌ಎಐ ಧಾರವಾಡ ತಂಡದವರು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಆಡಿದ ಎರಡೂ ಪಂದ್ಯಗಳಲ್ಲಿ ಗೆದ್ದರು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಧಾರವಾಡ ತಂಡ 54–43 ರಿಂದ ಬೆಳಗಾವಿ ಬಿ.ಸಿ ತಂಡವನ್ನು ಮಣಿಸಿತು. ಅಭಿಷೇಕ್ (16) ಮತ್ತು ಸೂರಜ್ (10) ಅವರು ಗೆಲುವಿನಲ್ಲಿ ಗಮನ ಸೆಳೆದರು. ಜಿದ್ದಾಜಿದ್ದಿನ ಸೆಣಸಾಟ ನಡೆದ ಎರಡನೇ ಪಂದ್ಯದಲ್ಲಿ 62–60 ರಿಂದ ಕೆಜಿಎಫ್ ಬಿ.ಸಿ ತಂಡವನ್ನು ಸೋಲಿಸಿತು.

ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡ ಕ್ರಮವಾಗಿ ಹೆಬ್ಬಾಳ ಬಿ.ಸಿ (61–29) ಮತ್ತು ಚಿಕ್ಕಮಗಳೂರಿನ ಡಾಮಿನೆಂಟ್ಸ್ ಬಿ.ಸಿ (56–21) ತಂಡಗಳನ್ನು ಮಣಿಸಿತು.

ಕಬಡ್ಡಿ: ಪಟ್ನಾ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಪಟ್ನಾ ವಲಯ ತಂಡದವರು ಫೈನಲ್‌ನಲ್ಲಿ 43–26 ಪಾಯಿಂಟ್‌ಗಳಿಂದ ಗುರುಗ್ರಾಮ ವಲಯ ತಂಡವನ್ನು ಸೋಲಿಸಿ ಕೇಂದ್ರೀಯ ವಿದ್ಯಾಲಯ ಸಂಘಟನೆ 52ನೇ ರಾಷ್ಟ್ರೀಯ ಕ್ರೀಡಾಕೂಟದ ಕಬಡ್ಡಿ ಟೂರ್ನಿಯಲ್ಲಿ 17 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.

ಸೋಮವಾರ ಮುಕ್ತಾಯಗೊಂಡ ಟೂರ್ನಿಯಲ್ಲಿ ಡೆಹ್ರಾಡೂನ್ ತಂಡ ಮೂರನೇ ಸ್ಥಾನ ಗಳಿಸಿತು. ಸಿ.ವಿ. ರಾಮನ್ ನಗರದ ಡಿಆರ್‌ಡಿಒದ ಕೇಂದ್ರೀಯ ವಿದ್ಯಾಲಯ ಆಶ್ರಯದಲ್ಲಿ ಈ ಟೂರ್ನಿ ನಡೆಯಿತು. ಪಟ್ನಾ ವಲಯದ ಆದರ್ಶಕುಮಾರ್ ಮತ್ತು ರಾಂಚಿ ವಲಯದ ನಾಗೇಶ್ವರ ರಾವ್ ಬದಿಯಾ ಅವರು ಉತ್ತಮ ಆಟಗಾರರೆನಿಸಿ ವಿಶೇಷ ಪ್ರಶಸ್ತಿ ಪಡೆದರು.

ಕೇಂದ್ರೀಯ ವಿದ್ಯಾಲಯದ 24 ವಲಯಗಳ ತಂಡಗಳು ಟೂರ್ನಿಯಲ್ಲಿ ಭಾಗವಹಿಸಿದ್ದವು.

ಏಷ್ಯನ್ ಆರ್ಚರಿ ರ‍್ಯಾಂಕಿಂಗ್ ಸುತ್ತು ಮಹಿಳಾ ತಂಡಕ್ಕೆ ಅಗ್ರಸ್ಥಾನ

ಬ್ಯಾಂಕಾಕ್ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದ ಭಾರತ ಮಹಿಳಾ ತಂಡದ ಅದಿತಿ ಸ್ವಾಮಿ, ಜ್ಯೋತಿ ಸುರೇಖಾ ವೆನ್ನಂ ಮತ್ತು ಪ್ರಣೀತ್ ಕೌರ್ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಆರ್ಚರಿ (ಬಿಲ್ಗಾರಿಕೆ) ಚಾಂಪಿಯನ್‌ಷಿಪ್‌ನ ಕಾಂಪೌಂಡ್ ವಿಭಾಗದ ರ‍್ಯಾಂಕಿಂಗ್ ಸುತ್ತಿನಲ್ಲಿ ಭಾರತಕ್ಕೆ ಅಗ್ರಸ್ಥಾನವನ್ನು ಸೋಮವಾರ ಖಚಿತಪಡಿಸಿಕೊಂಡರು.

ವಿಶ್ವ ಚಾಂಪಿಯನ್ ಅದಿತಿ 706 ಪಾಯಿಂಟ್ಸ್ ಸಂಗ್ರಹಿಸಿ ಮೊದಲಿಗರಾದರೆ, ಹಾಂಗ್‌ಝೌ ಕ್ರೀಡೆಗಳಲ್ಲಿ ಮೂರು ಚಿನ್ನ ಗೆದ್ದುಕೊಂಡ ಜ್ಯೋತಿ 700 ಪಾಯಿಂಟ್ಸ್ ಪಡೆದು ಮೂರನೇ ಸ್ಥಾನ ಪಡೆದರು. ಪ್ರಣೀತ್ ಕೌರ್ ಒಂದು ಪಾಯಿಂಟ್ ಹಿಂದೆಬಿದ್ದು ನಾಲ್ಕನೇ ಸ್ಥಾನ ಪಡೆದರು. ತಂಡ 2105 ಪಾಯಿಂಟ್‌ಗಳೊಡನೆ ಒಂದನೇ ಕ್ರಮಾಂಕ ಖಚಿತಪಡಿಸಿಕೊಂಡಿತು. ಕೊರಿಯಾ (2701) 2ನೇ ಸ್ಥಾನ ಗಳಿಸಿತು.

ಭಾರತ ತಂಡ ಎಂಟು ತಂಡಗಳ ಸುತ್ತಿನ ಎಲಿಮಿನೇಷನ್ ಸುತ್ತಿನಲ್ಲಿ ತಳದಲ್ಲಿರುವ ಹಾಂಗ್‌ಕಾಂಗ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ದಕ್ಷಿಣ ಕೊರಿಯಾ ತಂಡ (2128) ಪುರುಷರ ಕಾಂಪೌಂಡ್ ಟೀಮ್ ವಿಭಾಗದಲ್ಲಿ ಭಾರತ ತಂಡವನ್ನು ಒಂದು ಪಾಯಿಂಟ್‌ನಿಂದ ಸೋಲಿಸಿ ಅಗ್ರಕ್ರಮಾಂಕ ಪಡೆದುಕೊಂಡಿತು. ಇಲ್ಲಿ 16 ತಂಡಗಳಿರುತ್ತವೆ. ಭಾರತ ಬೈ ಪಡೆದಿದ್ದು, ನೇರವಾಗಿ ಕ್ವಾರ್ಟರ್‌ಫೈನಲ್‌ನಲ್ಲಿ ಸೆಣಸಾಟದಲಿದೆ. ಅಲ್ಲಿ ಏಳನೇ ಶ್ರೇಯಾಂಕದ ವಿಯೆಟ್ನಾಂ ಎದುರಾಳಿ.

ಪ್ರಿಯಾನ್ಷ್ (710) ಮತ್ತು ಪ್ರಥಮೇಶ್ (709) ಭಾರತದ ಪರ ಮೊದಲ ಎರಡು ಸ್ಥಾನ ಪಡೆದರು. ಅವರು ದಕ್ಷಿಣ ಕೊರಿಯಾದ ಯಾಂಗ್ ಜೇವೊನ್ ನಂತರ ಎರಡು ಮತ್ತು ಮೂರನೇ ರ‍್ಯಾಂಕಿಂಗ್ ಪಡೆದಿದ್ದರು.

ಮಹಿಳೆಯರ ರಿಕರ್ವ್ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಭಾರತ ಐದನೇ ಸ್ಥಾನ (1947 ಪಾಯಿಂಟ್ಸ್) ಪಡೆಯಿತು.

SAMSUNG

Epic starts here

Nightography camera for epic shots | Powerful gaming processor with Ray Tracing | Data privacy with Knox Vault

Own at ₹ 2036 per month*

Samsung Upgrade
Additional upgrade bonus**
Samsung Finance+™
HDFC BANK
BAJAJ FINSERV

samsung.com

Please dispose of e-waste and plastic waste responsibly. Customers can Whatsapp on 1800 5 7267864 for information on e-waste/plastic pick up.

Image simulated for representational purposes, actual may vary. Color as per availability. *EMI amount ₹ 2036 per month is computed on zero down payment, 30 months low cost EMI on the price of ₹ 59999 for 1 unit of Galaxy S23 FE 8GB|128GB. EMI provided by Bank/NBFCs and financers listed on Samsung Finance+ at their sole discretion and may vary model wise. Final price at dealer discretion. **Upgrade bonus provided by brand/dealer at its sole discretion upon exchange of select smartphones. Offer may be revised or withdrawn without prior notice. All third party logos/marks shown are registered/owned/licensed logos/ marks of respective brand owners.

Scan to buy now

Cheil-17971/23